ಸಂಸ್ಕಾರ ತರಂಗಿಣೀ

ಪುಷ್ಪ – 11

ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹಃ

ಭಾಗ - 1



(ಮೂಲ ಆಧಾರ
ಋಷಿವಾಕ್ಯಗಳೊಂದಿಗೆ,
ಪ್ರತಿವಾಕ್ಯಕ್ಕೂ
ಕನ್ನಡದಲ್ಲಿ ಅರ್ಥ)

ಅಕ್ಷರ ಜೋಡಣೆ

ಶ್ರೀಮತಿ ಭಾರತೀ ಶರ್ಮಾ

ಅನುವಾದಕ ಲೇಖಕರು

ಮತ್ತು ಪ್ರಕಾಶಕರು

ವೇ॥ಬ್ರ॥ ಶ್ರೀ

ಎ.ಸಿ. ಶಕ್ತಿಧರ ಶರ್ಮಾ

ಸಂಚಾಲಕರು

ವಿದ್ವಾನ್ ವೇ॥ಬ್ರ॥ ಶ್ರೀ

ಚಂದ್ರಶೇಖರ ಶರ್ಮಾ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ

ಶಿವಕುಮಾರ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ

ಕಿರಣ ಅವಧಾನಿಗಳು

- ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು

ಸಲಹೆಗಾರರು

ವಿದ್ವಾನ್ ವೇ॥ಬ್ರ॥ ಶ್ರೀ ವೇಂಕಟೇಶ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ ಮೀನಾಕ್ಷೀಸುಂದರ ಘನಪಾಠಿಗಳು

ಸಂಸ್ಕಾರ ತರಂಗಿಣೀ

ಪುಷ್ಪ – 11

ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹಃ

(ಮೂಲ ಆಧಾರ ಋಷಿವಾಕ್ಯಗಳೊಂದಿಗೆ,
ಪ್ರತಿವಾಕ್ಯಕ್ಕೂ ಕನ್ನಡದಲ್ಲಿ ಅರ್ಥ)

- ವಿಷಯ ಸೂಚಿ -

1.	ಗ್ರಂಥನಾಮ	1
2.	ವಿಷಯ ಸೂಚಿ	2
3.	ಗುರುವಂದನೆ	3
4.	ಕೃತಜ್ಞತೆಗಳು	4
5.	ಸಂಪಾದಕೀಯ	5
6.	ನಮ್ಮ ಪ್ರಕಟಣೆಗಳು	6
7.	ಪುಸ್ತಕಗಳು ದೊರೆಯುವ ಸ್ಥಳಗಳು	7
8.	ಓರಿಯರ ನುಡಿ	9
9.	ಪ್ರಾಸ್ತಾವಿಕ ನುಡಿ	11
10.	ಚಿಂತನ	14
11.	ಮೂಲನಕ್ಷತ್ರ ಜನನಶಾಂತಿಃ - (ಮನುಃ)	16
12.	ಏಕನಕ್ಷತ್ರ ಜನನಶಾಂತಿಃ - (ಶೌನಕಃ)	31
13.	ಗೋಮುಖ ಜನನಶಾಂತಿಃ - (ಗರ್ಗಃ)	36
14.	ಆಶ್ಲೇಷಾನಕ್ಷತ್ರ ಜನನಶಾಂತಿಃ - (ಮಾಧವೀಯಃ)	41
15.	ಜ್ಯೇಷ್ಠಾನಕ್ಷತ್ರ ಜನನಶಾಂತಿಃ - (ವೃದ್ಧಗಾರ್ಗ್ಯಃ)	46
16.	ರೋಹಿಣೀನಕ್ಷತ್ರ ಜನನಶಾಂತಿಃ - (ಶೌನಕಃ)	53
17.	ಚಿತ್ರಾನಕ್ಷತ್ರ ಜನನಶಾಂತಿಃ - (ಮಾಧವೀಯ ಸಂಹಿತಾ)	57
18.	ಪುಷ್ಯ ಪೂರ್ವಾಷಾಢಯೋರ್ಜನನ ಶಾಂತಿಃ - (ವೃದ್ಧಗಾರ್ಗ್ಯಃ)	60
19.	ಸದಂತ ಜನನಶಾಂತಿಃ - (ಪದ್ಮಪುರಾಣಂ)	71
20.	ನಾಳವೇಷ್ಟನ ಜನನಶಾಂತಿಃ - (ಶೌನಕಃ)	74
21.	ಪಂಚಮಾರಿಷ್ಟ ಜನನಶಾಂತಿಃ - (ಮನುಃ)	77

॥ ಓಂ ಶ್ರೀಃ ॥

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್ ।
ವಿಪಶ್ಚಿದ್ವಾಶತಾನ್ ಮೇಧಾಂ ಆಪಸ್ತಂಬ: ಸ ಮೇ ಮುನಿ: ॥
ಸಂತ: ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ: ।
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯಚಾರ್ಥಾನ್ ಬಹೂನ್ ।
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ॥
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್ ।
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋಽಹಂ ಸುಲಬ್ಧೌಯುಗಪದ್ಮಯಾ ॥

॥ ಅವಧೂತ ಶ್ರೀ ಚಂದ್ರಶೇಖರಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,

ಶಾರದಾಪೀಠಮ್, ಶೃಂಗೇರಿ

॥ ವಾತ್ಸಲ್ಯ ನಿಧಿ ಅವಧೂತ ಶ್ರೀ ವೇಂಕಟಾಚಲ ಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನೂ ಇಲ್ಲವಯ್ಯಾ ಗುರುನಾಥ)

॥ ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ಕೃತಜ್ಞತೆಗಳು

ಪವಿತ್ರವಾದ ಈ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನು ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1. **ಶ್ರೀಯುತ ಪದ್ಮಶ್ರೀ ವಿ.ಆರ್. ಗೌರೀಶಂಕರ್, ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾಪೀಠ ಮಹಾಸಂಸ್ಥಾನಮ್,** ಶೃಂಗೇರಿ.
2. **ಡಿವೈನ್ ಲೈಫ್ ಸೊಸೈಟಿ,** ಶಿವಾನಂದ ಆಶ್ರಮ, ಹೃಷೀಕೇಶ .
3. **ಶ್ರೀಯುತ ಎಸ್. ಮಂಜುನಾಥ್‌ರವರು S/o.** ಶ್ರೀಮತಿ ಭಾಗೀರಥಿಯವರು, ಬೆಂಗಳೂರು
4. **ಶ್ರೀಯುತ ವಿದ್ವಾನ್, ಮಾರ್ಕಂಡೇಯ ಅವಧಾನಿಗಳು,** ಬೃಹಸ್ಪತ್ಯಾಚಾರ್ಯರು, ಮತ್ತೂರು.
5. **ಶ್ರೀಯುತ ವಿದ್ವಾನ್ ಡಾ॥ ಸುಬ್ರಾಯ ವಿ. ಭಟ್ ,** ಮೀಮಾಂಸಾ ಶಾಸ್ತ್ರ ಪ್ರಾಧ್ಯಾಪಕರು, ರಾಜೀವ್‌ಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ಶೃಂಗೇರಿ.
6. **ಶ್ರೀಯುತ ಸುಬ್ರಹ್ಮಣ್ಯ ಪ್ರಸಾದ್‌ರವರು ,** ಎಸ್.ಎಲ್.ಎನ್. ರೇಡಿಯೋಸ್, ಶಿವಮೊಗ್ಗ .
7. **ಶ್ರೀಯುತ ರಾಮಪ್ರಸಾದ್, ಸಹೋದರರು,** ಅಶ್ವಿನಿ ಡಿಜಿಟಲ್ ಆಡಿಯೋಸ್, ಬೆಂಗಳೂರು .
8. **ಶ್ರೀಯುತ ಪ್ರವೀಣ್‌ರವರು,** ಬೆಂಗಳೂರು.
9. **ವೇದಬ್ರಹ್ಮ ಶ್ರೀಯುತ ಭಾನುಪ್ರಕಾಶ ಶರ್ಮರು,** ಶ್ರೀರಂಗಪಟ್ಟಣ.
10. **ಶ್ರೀಯುತ ಶರಚ್ಚಂದ್ರರವರು,** ಐ.ಜಿ. ಬೆಂಗಳೂರು.
11. **ಶ್ರೀಯುತ ವಿದ್ವಾನ್ ಕಣ್ಣನ್‌ರವರು,** ಓರೇಮಗಳೂರು.
12. **ಶ್ರೀಯುತ ಗಣೇಶ್‌ರವರು,** ಎಲ್.ಐ.ಸಿ. ಡೆವಲಪ್‌ಮೆಂಟ್ ಆಫೀಸರ್, ಬೆಂಗಳೂರು.
13. **ಶ್ರೀಯುತ ಪ್ರಭಾಕರ್‌ರವರು,** ಇನ್‌ಫರ್‌ಮೇಷನ್ ಟೆಕ್ನಾಲಜಿ ವಿಭಾಗದ ಮುಖ್ಯಸ್ಥರು, ಮಲ್ನಾಡ್ ಇಂಜಿನಿಯರಿಂಗ್ ಕಾಲೇಜ್, ಹಾಸನ.

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ

ದೂ : 9686497982, 08175225445

ಬ್ಯಾಂಕ್ ಖಾತೆ : ಎ. ಸಿ. ಶಕ್ತಿಧರ ಶರ್ಮಾ, A/c. No. 7322500102385001

ಕರ್ನಾಟಕ ಬ್ಯಾಂಕ್, ಸವಳಂಗ ರಸ್ತೆ ಬ್ರಾಂಚ್, ಶಿವಮೊಗ್ಗ.

IFSC Code : KARB 0000732

ಅಕ್ಷರಜೋಡಣೆ : ವೇ॥ಬ್ರ॥ಶ್ರೀ ಸಿ. ಶ್ರೀನಿವಾಸ ಶಾಸ್ತ್ರೀ, ಶೃಂಗೇರಿ. ಮತ್ತು
ಶ್ರೀಮತಿ ಭಾರತೀ ಶರ್ಮಾ. ವೇ॥ಬ್ರ॥ ಶ್ರೀ ಶಕ್ತಿಧರ ಶರ್ಮಾ

ವರ್ಷ : ಮಾರ್ಚ್ 2015 (ಜಯನಾಮ ಸಂವತ್ಸರ, ಫಾಲ್ಗುಣ ಮಾಸ)

ಪ್ರತಿಗಳು : 1,000

ಪುಟಗಳು : 80 + 4 = 84

ಹಕ್ಕುಗಳು : ಸಂಪೂರ್ಣ ಲೇಖಕರದ್ದು©

ಮೌಲ್ಯ : **ಅಮೂಲ್ಯ**

ಪ್ರೋತ್ಸಾಹಯುತ ಕಾಣಿಕೆ :

ಮುದ್ರಕರು : ಶ್ರೀ ಆಫ್‌ಸೆಟ್ ಪ್ರಿಂಟರ್ಸ್, ಎ. ಎನ್. ಕೆ. ರಸ್ತೆ, ಶಿವಮೊಗ್ಗ
ಮೊ : 9448417104

ಪ್ರಧಾನ ಮಾರ್ಗದರ್ಶಕರು: **ವೇದವೇದಾಂಗ ವಿದ್ವಾನ್ ವೇ॥ ಬ್ರ॥ ಶ್ರೀ॥ ಅಶ್ವತ್ಥನಾರಾಯಣ ಅವಧಾನಿಗಳು,** ಮತ್ತೂರು.

ವೇ॥ ಬ್ರ॥ ಶ್ರೀ॥ ವಿದ್ವಾನ್ ಮೀನಾಕ್ಷೀಸುಂದರ ಘನಪಾಠಿಗಳು, ಶ್ರೀಮಠ, ಶೃಂಗೇರಿ

ವೇ॥ ಬ್ರ॥ ಶ್ರೀ॥ ವಿದ್ವಾನ್ ಶಿವಕುಮಾರ ಅವಧಾನಿಗಳು, ಮತ್ತೂರು.

ವೇ॥ ಬ್ರ॥ ಶ್ರೀ॥ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.

ಸಂಚಾಲಕರು : ವೇ॥ಬ್ರ॥ ಶ್ರೀ ವಿದ್ವಾನ್ ಚಂದ್ರಶೇಖರಶರ್ಮಾ ಅವಧಾನಿಗಳು, ಅಗ್ರಹಾರ.

ಸಲಹೆಗಾರರು : ವೇ॥ಬ್ರ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಈ ಪುಸ್ತಕ ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1 **ಅನುಷ್ಠಾನ ತರಂಗಿಣೀ**
(ನಿತ್ಯ ಪ್ರೂಜಾವಿಧಿ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತಗೀತೆ ಶ್ಲೋಕ ಮತ್ತು ಅರ್ಥಸಹಿತ)

2. **ಸಂಸ್ಕಾರ ತರಂಗಿಣೀ ಪುಷ್ಪ–1** (ಪುಂಸವನ ಮತ್ತು ಸೀಮಂತೋನ್ನಯನ)

3. **ಸಂಸ್ಕಾರ ತರಂಗಿಣೀ ಪುಷ್ಪ–2** (ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

4. **ಸಂಸ್ಕಾರ ತರಂಗಿಣೀ ಪುಷ್ಪ–3** (ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

5. **ಸಂಸ್ಕಾರ ತರಂಗಿಣೀ ಪುಷ್ಪ–4** (ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭಗವದ್ಗೀತೆಯಲ್ಲಿ ಕರ್ಮ ಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)

6. **ಸಂಸ್ಕಾರ ತರಂಗಿಣೀ ಸರಣಿಯ ಪುಷ್ಪ–5**
ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ
(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

7. **ಪ್ರಪ್ರಥಮ ಬಾರಿಗೆ ಧ್ವನಿಸುರುಳಿಯಲ್ಲಿ (DVD) ಕೃಷ್ಣಯಜುರ್ವೇದ ತೈತ್ತೀರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.**

8. **ಸಂಸ್ಕಾರ ತರಂಗಿಣೀ ಪುಷ್ಪ–6**
(ಅನುಜ್ಞೆ, ಸಂಕಲ್ಪ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ !ಹೋಮ!)

9. **ಸಂಸ್ಕಾರ ತರಂಗಿಣೀ ಪುಷ್ಪ–7**
(ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಪ್ರಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ಏಧುರಾಗ್ನಿ ಸಂಧಾನ, ತರ್ಪಣ ಕ್ರಮ, ಯಜ್ಞೋಪವೀತ ಧಾರಣ ಕ್ರಮ, ಭೋಜನ ಪರಿಷೇಚನ ಕ್ರಮ)

10. **ಸಂಸ್ಕಾರ ತರಂಗಿಣೀ ಪುಷ್ಪ–1, 2 ದ್ವಿತೀಯ ಮುದ್ರಣ**
(ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

11. **ಸಂಸ್ಕಾರ ತರಂಗಿಣೀ ಪುಷ್ಪ–3 ದ್ವಿತೀಯ ಮುದ್ರಣ**
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

12.ಸಂಸ್ಕಾರ ತರಂಗಿಣೀ ಪುಷ್ಪ – 8 (ಉಪಾಕರ್ಮ. ಪ್ರಾಯಶ್ಚಿತ್ತ ಪ್ರಕರಣ. ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಸಪತ್ನಿಯರ ಅನ್ಯೋನ್ಯವಿಚಾರ. ಶೀಘ್ರ ಮತ್ತು ಸುಲಭ ಪ್ರಸವವಿಚಾರ. ಕುಷ್ಠ. ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)

13.ವೇದನಾದ ಸಂಗಮ DVD 2 (ಭಜನೆ. ದೇವರನಾಮಗಳು. ಕಲಿಕಾ ವಿಧಾನದಲ್ಲಿ ಯಜುರ್ವೇದ ಸಂಧ್ಯಾವಂದನೆ ಮತ್ತು ನೈಜಧಾರ್ಮಿಕತೆ ಎಂಬ ವಿಷಯದ ಉಪನ್ಯಾಸ)

14.ಸಂಸ್ಕಾರ ತರಂಗಿಣೀ ಪುಷ್ಪ – 9 (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ ಮತ್ತು ಸ್ನಾನ. ಸಂಧ್ಯಾವಂದನೆ. ವೈಶ್ವದೇವ. ಬಲಿಹರಣ. ಪಂಚಮಹಾಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ ಹಾಗೂ ಆಚಾರ – ಧರ್ಮಶಾಸ್ತ್ರಗಳ ವಿಶೇಷ ವಿಚಾರಗಳು)

15.ಸಂಸ್ಕಾರ ತರಂಗಿಣೀ ಪುಷ್ಪ – 10 ಧರ್ಮಸಂದೇಶ (ಸಂಸ್ಕೃತಿ. ಆಚಾರ. ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)

16.ಸಂಸ್ಕಾರ ತರಂಗಿಣೀ ಪುಷ್ಪ – 10 ಎ. ಮಂತ್ರಸಂಗ್ರಹ

17.ಸಂಸ್ಕಾರ ತರಂಗಿಣೀ ಪುಷ್ಪ – 11 (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹಃ)

ಮುಂದಿನ ಪ್ರಕಟಣೆಗಳು

1. **ಸಂಸ್ಕಾರ ತರಂಗಿಣೀ ಪುಷ್ಪ – 12** (ಧರ್ಮ ಸಂದೇಶ ದ್ವಿತೀಯ ಮುದ್ರಣ)

2. **ಸಂಸ್ಕಾರ ತರಂಗಿಣೀ ಪುಷ್ಪ – 13** (ವೈದ್ಯನಾಥೀಯ ಸ್ಮೃತಿಮುಕ್ತಾಫಲ ಶ್ರಾದ್ಧಕಾಂಡ ಮತ್ತು ಯಲ್ವಾಜೀಯ ಅನುಧರ್ಮಶಾಸ್ತ್ರ ಅಪರಕರ್ಮ ವಿಷಯ)

3. **ಸಂಸ್ಕಾರ ತರಂಗಿಣೀ ಪುಷ್ಪ – 14** (ಭಾರದ್ವಾಜ ಅಪರ (ಪಿತೃಮೇಧ) ಸೂತ್ರ ಮತ್ತು ಪ್ರಯೋಗ ಮತ್ತು ಸಾಯಣ ಭಾಷ್ಯಾರ್ಥ)

4. **ಸಂಸ್ಕಾರ ತರಂಗಿಣೀ ಪುಷ್ಪ – 15**
(ಆಪಸ್ತಂಬ ಅಪರ (ಪಿತೃಮೇಧ) ಸೂತ್ರ. ಕಾರಿಕೆ. ಪ್ರಯೋಗ ಮತ್ತು ಸಾಯಣ ಭಾಷ್ಯಾರ್ಥ)

5. **ಸಂಸ್ಕಾರ ತರಂಗಿಣೀ ಪುಷ್ಪ – 16**
(ಷೋಡಶಸಂಸ್ಕಾರ ಮಂತ್ರಗಳಿಗೆ ಸಾಯಣ ಭಾಷ್ಯಾರ್ಥ)

6. **ಸಂಸ್ಕಾರ ತರಂಗಿಣೀ ಪುಷ್ಪ – 17** (ಶ್ರಾದ್ಧ ಕಾರಿಕೆ. ಪ್ರಯೋಗ ಮತ್ತು ಸಾಯಣ ಭಾಷ್ಯಾರ್ಥ)

7. **ಸಂಸ್ಕಾರ ತರಂಗಿಣೀ ಪುಷ್ಪ – 18** (ಆಪಸ್ತಂಬ ಧರ್ಮಸೂತ್ರ ವ್ಯಾಖ್ಯಾನ ಸಹಿತ)

ಪ್ರತಿಗಳು ದೊರೆಯುವ ಸ್ಥಳಗಳು :

1. ವೇ॥ ಬ್ರ॥ ಶ್ರೀ ಎ.ಸಿ. **ಶಕ್ತಿಧರ ಶರ್ಮಾ**, ಶಿವಮೊಗ್ಗ ಮೊ. : 9686497982
2. **ಶ್ರೀಮಠ ಪುಸ್ತಕಾಲಯ**, ಶಾರದಾಪೀಠಮ್, ಶೃಂಗೇರಿ
3. **ಉಡುಪಿ ಸ್ಟೋರ್ಸ್**, ಗಾಂಧಿ ನಗರ, ಶಿವಮೊಗ್ಗ
4. **ರಾಜಾರಾಮ್ ಬುಕ್ ಹೌಸ್**, ಶಿವಮೊಗ್ಗ
5. **ಸಪ್ನಾ ಬುಕ್ ಹೌಸ್**, ಮೈಸೂರು
6. **ಮ್ಯಾನೇಜರ್, ಶೃಂಗೇರಿ ಶಂಕರಮಠ**, ಅರಮನೆ ಎದುರು, ಮೈಸೂರು
7. **ಕರ್ನಾಟಕ ಪುಸ್ತಕ ಪ್ರದರ್ಶನ**, ಸಹ್ಯಾದ್ರಿ ಥಿಯೇಟರ್ ಪಕ್ಕ, ಹಾಸನ
8. **ಪ್ರಚೇತಾ ಬುಕ್ ಹೌಸ್**, ಹೋಟೆಲ್ ಶಾಂತಿಸಾಗರ್ ಬಿಲ್ಡಿಂಗ್, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು
9. **ವೇದಾಂತ ಬುಕ್ ಹೌಸ್**, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
10. **ಸಪ್ನಾ ಬುಕ್ ಹೌಸ್**, ಗಾಂಧಿನಗರ, ಬೆಂಗಳೂರು
11. **ಶೃಂಗೇರಿ ಶಂಕರ ಮಠ**, ಉಮಾ ಟಾಕೀಸ್ ಹತ್ತಿರ, ಬೆಂಗಳೂರು
12. **ನ್ಯೂ ವೇದಾಂತ ಬುಕ್‌ಹೌಸ್**, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು
13. **ಚೈತ್ರಾ ಬುಕ್ ಹೌಸ್, ಗಾಂಧಿನಗರ, ಸಪ್ನ ಬುಕ್ ಹೌಸ್ ಹತ್ತಿರ, ಬೆಂಗಳೂರು**
14. **ಸಪ್ನ ಬುಕ್ ಹೌಸ್**, ಮಂಗಳೂರು

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮ ಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು ? – ಋಷಿ ವಾಕ್ಯ ಬೇಕೇ, ಕಪರ್ದಿಮುನಿಯ ಕಾರಿಕೆ ಇದೆ . ಸೂತ್ರಕಾರರ ವಾಕ್ಯ ಬೇಕೇ , ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ . ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ. ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ..., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ ..., ಪ್ರಯೋಗ – ಅದರ ತಿಳಿ ಕನ್ನಡ ಅರ್ಥ . ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ .

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತಗೀತೆ, ಗುರುಗೀತೆ, ಯತಿ ಆರಾಧನಾಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪುನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ, ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಎಂಟು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ಐದು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ದಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – ೭ ಕಾಂಡಗಳಿಂದ ೧೦೨ ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – ೧೦೦ ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ - ಶರ್ಮರ ಮಡದಿಯಾದ ಬಿ.ಸೌ. ಭಾರತಿಯವರ ಭಾವ ಪ್ರಧಾನವಾದ ಉತ್ತಮ ಶಾರೀರದಿಂದ ೧೫೦ ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –`ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಕೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ `ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿಖರವಾಗಿ ತಿಳಿಸುವ 'ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾಸಹಸ್ರನಾಮ' , 'ಶ್ರೀ

ವಿಷ್ಣು ಸಹಸ್ರನಾಮ' ಧ್ವನಿಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣಸೂಕ್ತ, ದುರ್ಗಾಸೂಕ್ತಗಳಿರುವ ಧ್ವನಿಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆಯವರು, ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ ೨೦೦೪ರಲ್ಲಿ ಶ್ರೀಯುತ ಶರ್ಮರು **'ವೇದಭೂಷಣ'** ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ ೨೦೧೨ರಲ್ಲಿ ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಸನ್ಮಾನಕ್ಕೆ ಭಾಜನರಾಗಿರುತ್ತಾರೆ

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂದುಬರುವ ಗುರು ನಿಷ್ಠೆ-ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ. ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ. ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ವರ್ಯು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ . ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ.

ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

-ಇತಿ ಶಮ್-

ಸುಪ್ರೀತ .

ಕ. ನಾ. ಮಾರ್ಕಂಡೇಯ ಅವಧಾನಿ.

ಮತ್ತೂರು ಸಂಸ್ಕೃತ ಗ್ರಾಮ, ಶಿವಮೊಗ್ಗ .

ತಾ-೫-೧-೨೦೧೩

ಪ್ರಾಸ್ತಾವಿಕ ನುಡಿ

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಜೀವಾಳವೇ ವೇದಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಸಾಲ್ಕು ಪುರುಷಾರ್ಥಗಳಲ್ಲಿ ಮೊದಲಿನ ಮೂರು ಸಾಧನಗಳು ಹಾಗೂ ಕೊನೆಯದಾದ ನಿತ್ಯ ನಿರತಿಶಯ ಸುಖ ಸ್ವರೂಪವಾದ ಮೋಕ್ಷವು ಸಾಧಿಸಲ್ಪಡಬೇಕಾದದ್ದು, ಅದನ್ನು ಸಾಧಿಸಿದಾಗಲೇ ಮನುಷ್ಯ ಜೀವನ ಸಾರ್ಥಕವಾಗುವುದು. ಅದಕ್ಕೆ ಧರ್ಮವೇ ಮೂಲ ಎಂಬುದಾಗಿ ಬೋಧಿಸಿ, ಅವುಗಳ ಸ್ವರೂಪ ಹಾಗೂ ಪ್ರಾಪ್ಯುಪಾಯವನ್ನು ತಿಳಿಸಿ ಮನುಷ್ಯನನ್ನು ಅಧ್ಯಾತ್ಮದೆಡೆಗೆ ಒಯ್ಯುವ ಏಕಮಾತ್ರ ಸಾಧನವಾಗಿರುವುದರಿಂದ ವೇದಗಳು ಪರಮ ಪೂಜನೀಯವಾದವುಗಳು.

ವೇದವಿಹಿತವಾದ ಯಾಗಾದಿ ಕರ್ಮಗಳೇ ಧರ್ಮ. ಧರ್ಮವೇ ಶ್ರೇಯಸ್ಸಾಧನ. ವೇದದಲ್ಲಿ ತಿಳಿಸಿದ ಈ ಯಜ್ಞಯಾಗಾದಿಗಳನ್ನು ಅರ್ಥಜ್ಞಾನ ಸಹಿತವಾಗಿ ಶ್ರದ್ಧೆಯಿಂದ ಕ್ರಮವಾಗಿ ಅನುಷ್ಠಾನ ಮಾಡಿದಾಗ ವಿಹಿತವಾದ ಫಲವನ್ನು ದೊರಕಿಸಿಕೊಡುತ್ತದೆ ಎಂಬುದು ಆರ್ಷ ಸಿದ್ಧಾಂತ.

ವೇದದ ತಾತ್ಪರ್ಯಾರ್ಥವನ್ನೇ ನಿರ್ಣಯಿಸಲು ಹೊರಟ ಪೂರ್ವಮೀಮಾಂಸಾಶಾಸ್ತ್ರದಲ್ಲಿ ಸೂತ್ರಕಾರರಾದ ಜೈಮಿನೀ ಮಹರ್ಷಿಗಳೂ ಸಹ 'ಚೋದನಾ ಲಕ್ಷಣೋಽರ್ಥೋ ಧರ್ಮಃ' ಎಂಬುದಾಗಿ ವೇದದಲ್ಲಿ ತಿಳಿಸಿದ ಶ್ರೇಯಸ್ಸಾಧನೀಭೂತವಾದ ಯಾಗಾದಿಗಳೇ ಧರ್ಮವೆಂದು ತಿಳಿಸಿ, ವೇದದ ತಾತ್ಪರ್ಯಾರ್ಥವನ್ನೇ ಬಹು ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಮೀಮಾಂಸಾ ಭಾಷ್ಯಕಾರರಾದ ಶಬರ ಸ್ವಾಮಿಗಳೂ ಸಹ 'ಸ ಚ ನಿಶ್ರೇಯಸೇನ ಪುರುಷಂ ಸಂಯುನಕ್ತೀತಿ ಪ್ರತಿಜಾನೀಮಹೇ' ಎಂಬುದಾಗಿ ಧರ್ಮವೇ ಐಹಿಕ ಮತ್ತು ಆಮುಷ್ಮಿಕ ಸುಖ ಸಾಧನವೆಂದು ಸ್ಪಷ್ಟಪಡಿಸಿದ್ದಾರೆ.

ವೇದದಲ್ಲಿ ವಿಹಿತವಾದ ಧರ್ಮವೆಂಬುದಾಗಿ ಪ್ರಚುರಪಡಿಸಿದ ಯಾಗಾದಿ ರೂಪವಾದ ಕರ್ಮಗಳನ್ನು ಪ್ರಧಾನವಾಗಿ ನಿತ್ಯ, ನೈಮಿತ್ತಿಕ, ಮತ್ತು ಕಾಮ್ಯವೆಂಬುದಾಗಿ ಮೂರು ವಿಧವಾಗಿ ವಿಭಾಗಿಸಿದ್ದಾರೆ. ರಾಜಾಜ್ಞೆಯಂತೆ ನಿಯಮೇನ ಮಾಡಲೇಬೇಕಾದದ್ದಾಗಿ ವಿಹಿತವಾದ ಕರ್ಮಗಳು – ನಿತ್ಯಕರ್ಮಗಳು. ಉದಾ– ಸಂಧ್ಯಾವಂದನೆ, ಔಪಾಸನೆ, ಅಗ್ನಿಹೋತ್ರಾದಿಗಳು. ಪಾಪಕ್ಷಯವೇ ಈ ಕರ್ಮಗಳ ಫಲ.

ನಿಮಿತ್ತ ಒದಗಿದಾಗ ನಿಯಮೇನ ಮಾಡಲೇಬೇಕಾದ ಕರ್ಮಗಳು – ನೈಮಿತ್ತಿಕ ಕರ್ಮಗಳು. ಉದಾ– ಗ್ರಹಣ ಪ್ರಯುಕ್ತವಾದ ಸ್ನಾನಾದಿಗಳು, ಮಗು ಹುಟ್ಟಿದಾಗ ಮಾಡಬೇಕಾದ ವೈಶ್ವಾನರೇಷ್ಟಿ ಮೊದಲಾದ ಶ್ರೌತಸ್ಮಾರ್ತ ಕರ್ಮಗಳು, ಈ ಕರ್ಮಗಳಿಗೂ ಪಾಪಕ್ಷಯವೇ ಫಲ.

ಪಶುಪುತ್ರಾದಿ ಐಶ್ವರ್ಯ ಕಾಮನೆಯಿಂದ ಅನುಷ್ಠಾನ ಮಾಡುವ ಕರ್ಮಗಳು – ಕಾಮ್ಯಕರ್ಮಗಳು. ಉದಾ– ಸೋಮಯಾಗ, ಕಾರೀರೇಷ್ಟಿ, ಪುತ್ರೇಷ್ಟಿಕಾದಿ ಸ್ಮೃತ್ಯುಕ್ತಕರ್ಮಗಳು, ಇವುಗಳಿಗೆ ಆಯಾವಿಧಿ ವಾಕ್ಯಗಳಲ್ಲಿ ಅಥವಾ ಪ್ರಕರಣಗಳಲ್ಲಿ ತಿಳಿಸಿದ ಸ್ವರ್ಗಾದಿಗಳೇ ಫಲ.

ಈ ಎಲ್ಲವನ್ನೂ ಅರ್ಥಜ್ಞಾನ ಪುರಸ್ಸರ, ವಿಧಿವತ್ತಾಗಿ ಆಚರಿಸಿದಾಗಲೇ ವಿಹಿತವಾದ ಫಲ ಬೊರಕುವುದು. ಆಗಲೇ ಅಧ್ಯಯನ ಮಾಡಿದ ವೇದವು ಸಫಲವಾಗುವುದು. ಅಂದರೆ ಮೊದಲು ವೇದಾಧ್ಯಯನ, ನಂತರ ಅಧ್ಯಯನ ಮಾಡಿದ ವೇದದ ಅರ್ಥಜ್ಞಾನ, ಅರ್ಥಜ್ಞಾನ ತಿಳಿದು ಕರ್ಮಾನುಷ್ಠಾನ, ಇದರಿಂದ ಪಾಪಕ್ಷಯ, ಸ್ವರ್ಗಾದಿ ಸಿದ್ಧಿ. ಹಾಗಾಗಿಯೇ ವೇದಗಳ ಅರ್ಥಜ್ಞಾನ, ಉಚ್ಚಾರಣೆ, ವೇದವಿಹಿತ ಕರ್ಮಾನುಷ್ಠಾನದ ಸ್ವರೂಪ ಪರಿಚಯಾದಿಗಳಿಗೆ ಅನಿವಾರ್ಯವಾದ ವೇದದ ಆರು ಅಂಗಗಳನ್ನು ಅಧ್ಯಯನ ಮಾಡಬೇಕೆಂದು, 'ನಿಷ್ಕಾರಣೋ ಷಡಂಗೋ ವೇದೋ ಅಧ್ಯೇಯೋಜ್ಞೇಯಶ್ಚ' ಇತ್ಯಾದಿ ಶ್ರುತಿಗಳು ತಿಳಿಸುತ್ತವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ ಇವು ವೇದದ ಆರು ಅಂಗಗಳು.

ಯಜ್ಞಗಳ ಅನುಷ್ಠಾನ ವಿಧಾನವನ್ನು(ಸ್ವರೂಪ) ತಿಳಿಸುವ ಗ್ರಂಥವೇ ಕಲ್ಪ. ಯಾಗಗಳ ಪ್ರಯೋಗ(ಅನುಷ್ಠಾನ)ವನ್ನೇ ತಿಳಿಸುವುದರಿಂದ ಈ ಗ್ರಂಥಗಳಿಗೂ ಪ್ರಯೋಗ ಗ್ರಂಥಗಳು ಎಂದು ಹೆಸರು ಬಂದಿದೆ. ಸಂಜ್ಞಾ, ಪರಿಭಾಷಾದಿಗಳಿಂದ ಅವುಗಳ(ಯಾಗಗಳ) ಲಕ್ಷಣವನ್ನು ತಿಳಿಸುವ ಸೂತ್ರಗಳಿಗೆ ಕಲ್ಪಸೂತ್ರಗಳು ಎಂದು ಹೆಸರು.

ಈ ಕಲ್ಪಗಳು ಬೇರೆ ಬೇರೆ ವೇದ ಶಾಖೆಗಳಲ್ಲಿ ಬೇರೆ ಬೇರೆಯಾಗಿವೆ, ಹಾಗೆಯೇ ಒಂದೇ ಶಾಖೆಯಲ್ಲೂ ಅನೇಕ ಸೂತ್ರಗಳು ಕಾಣಸಿಗುತ್ತವೆ. ಋಕ್ ಶಾಖಾನುಯಾಯಿಗಳಿಗೆ – ಆಶ್ವಲಾಯನ ಕಲ್ಪಸೂತ್ರ, ಸಾಮವೇದಿಗಳಿಗೆ – ದ್ರಾಹ್ಯಾಯಣ ಸೂತ್ರ, ಯಜುರ್ವೇದದಲ್ಲೂ ಶುಕ್ಲ ಯಜುಶ್ಶಾಖೆಯಲ್ಲಿ ಭಿನ್ನ ಸೂತ್ರಗಳು ಹಾಗೂ ತೈತ್ತಿರೀಯ ಯಜುಶ್ಶಾಖೆಯಲ್ಲಿ – ಬೋಧಾಯನೀಯ, ಆಪಸ್ತಂಬೀಯ, ಹಿರಣ್ಯಕೇಶೀಯ ಕಲ್ಪಸೂತ್ರಗಳು ಈಗ ಪ್ರಚಲಿತವಿರುವ ಮುಖ್ಯ ಕಲ್ಪಸೂತ್ರಗಳು. ಈ ಕಲ್ಪಸೂತ್ರಗಳ ಪರಂಪರೆಯನ್ನೇ ಗೋತ್ರಪ್ರವರವನ್ನು ಉಚ್ಚರಿಸುವಾಗ ಹೇಳುವ ಸೂತ್ರಗಳು ತಿಳಿಸುತ್ತವೆ.

ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಮತ್ತು ಯಜುರ್ವೇದ ಕಲ್ಪದಲ್ಲಿ ಶುಲ್ಬಸೂತ್ರ – ಇವುಗಳ ಸಮುದಾಯವನ್ನೇ ಕಲ್ಪಸೂತ್ರ ಎಂದು ಕರೆದಿದ್ದಾರೆ. ಶ್ರೌತಸೂತ್ರಗಳು, ಸಾಕ್ಷಾತ್ ಶ್ರೌತಕರ್ಮಗಳ ಅನುಷ್ಠಾನ ಪ್ರಕಾರವನ್ನು ಮತ್ತು ಸಂಬಂಧಿಸಿದ ಮಂತ್ರವಿನಿಯೋಗಾದಿಗಳನ್ನು ತಿಳಿಸುತ್ತವೆ. ಗೃಹ್ಯಸೂತ್ರಗಳು, ಗೃಹಸ್ಥರು ಅನುಷ್ಠಾನಮಾಡಬೇಕಾದ ಯಾಗಗಳನ್ನು, ಔಪಾಸನಾಗ್ನಿಯಲ್ಲಿ ಮಾಡುವ ಕರ್ಮಗಳನ್ನು, ಮತ್ತು ಉಪನಯನವೇ ಮೊದಲಾದ ಸಂಸ್ಕಾರಗಳ ಅನುಷ್ಠಾನ ಕ್ರಮವನ್ನು ತಿಳಿಸುತ್ತವೆ. ಧರ್ಮಸೂತ್ರಗಳು, ಯಜಮಾನ–ಋತ್ವಿಜರುಗಳಿಗೆ ಸಂಬಂಧಿಸಿದ ನಿಯಮಗಳನ್ನು, ಬ್ರಾಹ್ಮಣ–ಕ್ಷತ್ರಿಯಾದಿ ವರ್ಣಗಳಿಗೆ ಸಂಬಂಧಿಸಿದ ಧರ್ಮಪಾಲನೆಯ ಬಗ್ಗೆ, ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳು ಮತ್ತು ಸಮಸ್ತ ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಧರ್ಮ ವಿಚಾರಗಳನ್ನೂ ತಿಳಿಸುತ್ತವೆ. ಶುಲ್ಬಸೂತ್ರಗಳು, ಯಜ್ಞಾನುಷ್ಠಾನಕ್ಕೆ ಉಪಯುಕ್ತವಾದ ಯಜ್ಞಶಾಲಾ ನಿರ್ಮಾಣ ಸಂಬಂಧಿ ವಿಚಾರಗಳನ್ನು ತಿಳಿಸುತ್ತವೆ. ಹೀಗೆ ಈ ಎಲ್ಲಾ ವಿಭಾಗಗಳೂ ಸಾಕ್ಷಾತ್ತಾಗಿ, ಅಥವಾ ಪರಂಪರೆಯಿಂದ ಯಜ್ಞಗಳ ಅನುಷ್ಠಾನದ ಸಂಬಂಧವನ್ನು ಹೊಂದಿವೆ, ಹಾಗಾಗಿಯೇ ಇವುಗಳಿಗೆ ಏಕವಾಕ್ಯತೆ ಇದೆ.

ಆಪಸ್ತಂಬ ಕಲ್ಪಸೂತ್ರದಲ್ಲಿ ಹೇಳುವುದಿದ್ದರೆ – ಮೊದಲನೇ ಪ್ರಶ್ನೇ ಸರ್ವಕರ್ಮಸಾಧಾರಣ ಪರಿಭಾಷಾ ಸೂತ್ರಗಳು. ಎರಡರಿಂದ ಇಪ್ಪತ್ತನಾಲ್ಕನೇ ಪ್ರಶ್ನೆಗಳವರೆಗೆ(೨೩ ಪ್ರಶ್ನೆಗಳು) ಶ್ರೌತಸೂತ್ರಗಳು. ಮುಂದಿನ ಮೂರು ಪ್ರಶ್ನೆಗಳು(೨೫,೨೬,೨೭) ಗೃಹ್ಯಸೂತ್ರಗಳು. ಈ ಮೂರರಲ್ಲಿ ಕೊನೆಯದು(೨೭ನೇ ಪ್ರಶ್ನೆ) ಪಿತೃಮೇಧ ಸೂತ್ರಗಳು.

೨೮,೨೯ ನೇ ಪ್ರಶ್ನೆಗಳು ಧರ್ಮಸೂತ್ರಗಳು. ೩೦ನೇ ಪ್ರಶ್ನೆ ಶುಲ್ಬಸೂತ್ರಗಳು. ಹೀಗೆ ಒಟ್ಟಿಗೆ ೩೦ ಪ್ರಶ್ನಾತ್ಮಕವಾದದ್ದು ಆಪಸ್ತಂಬ ಕಲ್ಪಸೂತ್ರ.

ಅವುಗಳಲ್ಲಿ ಸ್ಮಾರ್ತಕರ್ಮಗಳೂ ಮತ್ತು ಏಕಾಗ್ನಿಸಾಧ್ಯವಾದ (ಔಪಾಸನಾಗ್ನಿಯಲ್ಲಿ ನಿರ್ವಹಿಸುವ), ಉಪನಯನಾದಿ ಸಂಸ್ಕಾರಗಳ ಪ್ರಯೋಗವನ್ನು, ಸಂಬಂಧಿಸಿದ ಸೂತ್ರ ಮತ್ತು ಕಪರ್ದಿಕಾರಿಕೆಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಭಾವಾನುವಾದವನ್ನು ತಿಳಿಸಿ, ಸಂಸ್ಕಾರ ತರಂಗಿಣೀ ಎಂಬ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿ ಹೊರತರುತ್ತಿದ್ದಾರೆ ನಮ್ಮ ವೇದಬ್ರಹ್ಮ ಶ್ರೀಯುತ ಶಕ್ತಿಧರ ಶರ್ಮರು. ಸ್ಮಾರ್ತಕರ್ಮಗಳಿಗೆಲ್ಲಾ ಮೂಲ ಆಧಾರ ಗೃಹ್ಯಸೂತ್ರಗಳು. ಕಪರ್ದಿಸ್ವಾಮಿಗಳು ಕಾರಿಕಾರೂಪದಲ್ಲಿ ಪ್ರಯೋಗವನ್ನು ತಿಳಿಸಿದ್ದಾರೆ. ಇವುಗಳ ಆಧಾರದ ಮೇಲೆ ವಿಧಿವತ್ತಾಗಿ ಪ್ರಯೋಗವನ್ನೂ ತಿಳಿಸಿ ಅನುಷ್ಠಾನ ಮಾಡುವ ಕ್ರಮವನ್ನೂ ಈ ಗ್ರಂಥಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಆಪಸ್ತಂಬ ಪ್ರಯೋಗ ಗ್ರಂಥವು ಬೇರೆ ಬೇರೆ ವಿದ್ವಾಂಸರಿಂದ ಅನೇಕ ಪ್ರಕಾಶನಗಳಲ್ಲಿ ಉಪಲಬ್ಧವಿದ್ದರೂ, ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಕಾರಿಕೆ, ಮೂಲ ಗೃಹ್ಯಸೂತ್ರ ಸಹಿತವಾಗಿ ಪ್ರಕಟಿತವಾದ ಪ್ರಯೋಗಗ್ರಂಥ ಇಲ್ಲವೇಇಲ್ಲ ಎಂಬುವಷ್ಟು ಅತಿವಿರಳ. ಇದೇ ಈ ಗ್ರಂಥಮಾಲಿಕೆಯ ವಿಶೇಷ ಲಕ್ಷಣವಾಗಿದೆ. ಗೃಹ್ಯಸೂತ್ರಗಳ ಅಧ್ಯಯನ ಕ್ರಮವೂ ಈಗ ನಮ್ಮಲ್ಲಿಲ್ಲ. ಹೀಗಿರುವಾಗ ಶ್ರೀಯುತ ಶರ್ಮರು ಈ ವಿಶಿಷ್ಟವಾದ ಪ್ರಕಾಶನಕ್ಕೆ ವಹಿಸಿದ ಶ್ರಮವು ಅತ್ಯಮೂಲ್ಯ.

ಇದು ವೈದಿಕ ಸಮಾಜಕ್ಕೆ ತುಂಬಾ ಉಪಯುಕ್ತವಾದದ್ದು. ವೈದಿಕರಿಗೆ, ಪ್ರಯೋಗದ ಮೂಲಪ್ರಮಾಣವಾದ ಸೂತ್ರ, ಕಾರಿಕೆಗಳನ್ನು ತಿಳಿದುಕೊಳ್ಳಲು ಆಸಕ್ತರಾದ ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ, ಸಮಸ್ತ ಆಸ್ತಿಕ ಬಂಧುಗಳಿಗೆ ಈ ಗ್ರಂಥಗಳು ತುಂಬಾ ಉಪಯುಕ್ತವಾಗಿವೆ. ಕರ್ಮಜ್ಞಾನವನ್ನು ಹೊಂದಿ, ಅನುಷ್ಠಾನವನ್ನು ಮಾಡಿದಾಗ ಮಾತ್ರ ಆ ವೈದಿಕ ಕರ್ಮ ವಿಶೇಷಫಲವನ್ನೇ ಕೊಡುವುದೆಂದು ಶಾಸ್ತ್ರಗಳೇ ತಿಳಿಸುತ್ತಿವೆ.

ಇವರಿಂದ ಇನ್ನೂ ಹೆಚ್ಚಿನ ಸನಾತನ ಪರಂಪರೆಯ ಸೇವೆ ನಡೆಯಲು, ಇವರಿಗೆ ಹಾಗೂ ಈ ವಿಷಯದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡುತ್ತಿರುವ ಮಹನೀಯರಾದ ವಿದ್ವಾನ್, ಶ್ರೀಮಾನ್ ಶಿವಕುಮಾರ ಅವಧಾನಿಗಳಿಗೂ ಮತ್ತು ವಿದ್ವಾನ್, ಶ್ರೀಮಾನ್ ಕಿರಣ ಅವಧಾನಿಗಳಿಗೂ ಆಯುಷ್ಯ, ಆರೋಗ್ಯ ಮತ್ತು ಭಾಗ್ಯವನ್ನು ಅನುಗ್ರಹಿಸಲೆಂದು ವೇದಮಾತೆಯಾದ ಶಾರದಾಂಬೆ ಮತ್ತು ಜಗದ್ಗುರುಗಳ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ವಿದ್ವಾನ್, ವೇದಬ್ರಹ್ಮಶ್ರೀ, ಡಾ – ಸುಬ್ರಾಯ ವಿ ಭಟ್
ಪ್ರಾಧ್ಯಾಪಕರು, ಮೀಮಾಂಸಾಶಾಸ್ತ್ರ ವಿಭಾಗ,
ರಾಜೀವಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠಂ, ಶೃಂಗೇರಿ.

ಚಿಂತನ .....

ಈ ಎಲ್ಲ ವಿಚಾರಗಳಿಗೂ ಆಧಾರ – ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ಸಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು. ಆದರಣೀಯರಾಗಿರುತ್ತಾರೆಯೇ ವಿನ: ಅವರೆಂದಿಗೂ ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವಿಲ್ಲ, ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ಸಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು(ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನ ಭಿನ್ನ ನಡವಳಿಕೆಗಳನ್ನು 'ಇದೇ ನಮ್ಮ ಸಂಪ್ರದಾಯ – ಆಚಾರ' ಎಂಬ ಬ್ರಹ್ಮಾಸ್ತ್ರವಂತಹ ! ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರ ಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ ಪ್ರಕ್ರಿಯೆಗೇ – ಅಂತಹ ವ್ಯವಸ್ಥಿತವಾದ ನಡವಳಿಕೆಗೇ ಸಂಪ್ರದಾಯ – ಆಚಾರ ಎಂದು ಹೆಸರೇ ಹೊರತು, ನಾವು ನೀವು ಮಾಡುವಂತಹ, ಆಚರಿಸುವಂತಹ, ಶಾಸ್ತ್ರಗಳಲ್ಲಿಲ್ಲದಿರುವ, ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ ಸಂಪ್ರದಾಯ ಎಂದು ಹೇಳಲು ಬರುವುದಿಲ್ಲ!!. ಏಕೆಂದರೆ ಋಷಿಗಳಿಂದ ರಚಿತವಾಗಿರುವ ಸಕಲ ಶಾಸ್ತ್ರ ಗ್ರಂಥಗಳು ಕೂಡ ಕೇವಲ ಆಯಾ ವೇದ – ವೇದದ ಶಾಖೆ – ವೇದ ಅಂಗಗಳನ್ನು ಮಾನದಂಡವಾಗಿ ಇಟ್ಟುಕೊಂಡು, ಅವುಗಳನ್ನು ಅನುಸರಿಸಿ ರಚನೆಯಾಗಿವೆಯೇ ಹೊರತು ಇಂದಿನ ಸಮಾಜದಲ್ಲಿ ಕಂಡುಬರುವ ಯಾವುದೇ ಮತ, ಸಮುದಾಯ, ಒಳಪಂಗಡ (ಉದಾ : ಸಂಕೇತಿಗಳನ್ನು, ಹವ್ಯಕರನ್ನು, ಕಮ್ಮೆಗಳನ್ನು, ಮಾಧ್ವರನ್ನು, ಸ್ಮಾರ್ತರನ್ನು, ಐಯ್ಯಂಗಾರರನ್ನು...!!!)ಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚನೆಯಾಗಿಲ್ಲ.

ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು,

ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।

ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಅಂದರೆ, ತಪ್ಪು – ಸರಿ, ನ್ಯಾಯ–ಅನ್ಯಾಯ ಈ ವಿಷಯಗಳಲ್ಲಿ ಶಾಸ್ತ್ರಗಳೇ ಪ್ರಮಾಣವಾಗಿವೆ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತಃ ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರಃ ।

ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ ಎರಡೇ ಆದ್ಯತೆ । ಶಿಷ್ಟಾಚಾರಕ್ಕೆ ಕಿರೀ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ(ವಿರೋಧವಲ್ಲದ) ಅಥವಾ ಯಾವುದೇ ಶಾಸ್ತ್ರದ ಆಧಾರ ವಾಕ್ಯಗಳು ಸಿಗದಿದ್ದಾಗ ಮಾತ್ರ ಶಿಷ್ಟಾಚಾರಕ್ಕೆ ಕಿರೀ ಆದ್ಯತೆ ॥ ಮತ್ತೂ,

ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವನುಷ್ಠೀಯತಾಮ್ ।

ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಇನ್ನು,

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।

ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. ೨ ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬೆಳಸಿಕೊಳ್ಳಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ. ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣು ಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.
ಕೊನೆಯದಾಗಿ,

ಅವಶ್ಯಂ ಪಿತರಾಚಾರಂ!, ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ಸದವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ(ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ, ಈ ಸಂಚಿಕೆಯನ್ನೂ ಹಿಂದಿನ ಸಂಚಿಕೆಗಳಂತೆಯೇ ಸ್ವೀಕರಿಸಿ ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತೇವೆ.

ವೇದಬ್ರಹ್ಮ ಶ್ರೀ ಎ.ಸಿ ಶಕ್ತಿಧರ ಶರ್ಮಾ.

1. ಮೂಲನಕ್ಷತ್ರ ಜನನ ಶಾಂತಿಃ

ಅಥ ಮನುಃ

ಅಥಾತಸ್ಸಂಪ್ರವಕ್ಷ್ಯಾಮಿ ಮೂಲಜಾತ ಹಿತಾಯ ಚ ।

ಮಾತಾಪಿತ್ರೋರ್ಧನಸ್ಯಾಪಿ ಕುಲಜ್ಞಾತಿ ಹಿತಾಯ ಚ ॥

ಮೂಲನಕ್ಷತ್ರದಲ್ಲಿ ಹುಟ್ಟಿದವರಿಗೂ, ಅವರ ತಾಯಿತಂದೆಗಳಿಗೂ, ಅವರ ವಂಶಸ್ಥರಿಗೂ ಹಿತವಾಗಲು (ಶ್ರೇಯಸ್ಸಾಗಲು) ಈ ಶಾಂತಿಯನ್ನು ಹೇಳುತ್ತೇವೆ ॥

ತ್ಯಾಗೋ ವಾ ಮೂಲಜಾತಸ್ಯ ಸ್ಯಾದಷ್ಟಾಬ್ದಾತ್ ಪ್ರದರ್ಶನಮ್ ।

ಅಭುಕ್ತಮೂಲ ಜಾತಾನಾಂ ಪರಿತ್ಯಾಗೋ ವಿಧೀಯತೇ ॥

ಈ ನಕ್ಷತ್ರದಲ್ಲಿ ಹುಟ್ಟಿದ ಮಗುವನ್ನು ೮ ವರ್ಷಗಳವರೆಗೆ ನೋಡಬಾರದು । ಮೂಲನಕ್ಷತ್ರದ ೧ ನೇ ಪಾದದಲ್ಲಿ ಜನಿಸಿದ ಮಗುವನ್ನು ತ್ಯಜಿಸಬೇಕು ॥

ಅದರ್ಶನಾದ್ವಾऽಪಿ ಪಿತುಸ್ಸ್ತು ತಿಷ್ಯೇತ್ಸಮಾಷ್ಟಕಮ್ ।

ಏವಂ ಚ ದುಹಿತುರ್ಗೇಯಂ ಮೂಲಜಾತಫಲಂ ಬುಧೈಃ ॥

ತಂದೆಯು ೮ ವರ್ಷಗಳವರೆಗೆ ನೋಡಬಾರದು । ಹೀಗೆಯೇ ಈ ನಕ್ಷತ್ರದಲ್ಲಿ ಹುಟ್ಟಿರುವ ಹೆಣ್ಣುಮಗುವನ್ನು ಬಿಡಬೇಕೆಂದು ತಿಳಿದವರು ಹೇಳುತ್ತಾರೆ ॥

ಗ್ರಂಥಾಂತರೇಷು ಕನ್ಯಾಯಾಃ ಫಲಂ ಅನ್ಯಥಾऽಹುಃ –

ನ ಬಾಲ ಹಂತಿ ಮೂಲರ್ಕ್ಷೇ ಪಿತರಂ ಮಾತರಂ ತಥಾ ।

ಮೂಲಜಾ ಶ್ವಶುರಂ ಹಂತಿ ವ್ಯಾಳಜಾ ಚ ತದಂಗನಾಮ್ ॥

ಈ ನಕ್ಷತ್ರದಲ್ಲಿ ಹುಟ್ಟಿರುವ ಹೆಣ್ಣುಮಗುವಿಗೆ, ಬೇರೆ ಗ್ರಂಥಗಳಲ್ಲಿ ಬೇರೆ ರೀತಿಯಲ್ಲಿ ಹೇಳುತ್ತಾರೆ – ಈ ನಕ್ಷತ್ರದಲ್ಲಿ ಹುಟ್ಟಿರುವ ಗಂಡುಮಗುವು ತಂದೆತಾಯಿಯರಿಗೆ ಅನಿಷ್ಟವಲ್ಲ । ಆದರೆ ಹೆಣ್ಣುಮಗುವು ಗಂಡನ ತಂದೆಗೂ(ಮಾವ), ಆಶ್ಲೇಷಾನಕ್ಷತ್ರದಲ್ಲಿ ಹುಟ್ಟಿದವಳು ಗಂಡನ ತಾಯಿ(ಅತ್ತೆ)ಗೂ ಅನಿಷ್ಟವನ್ನು ಉಂಟುಮಾಡುತ್ತಾಳೆ ॥

ಮಾಹೇಂದ್ರಜಾऽಗ್ರಜಂ ಹಂತಿ ದೇವರಂ ತು ದ್ವಿದೈವಜಾ ।

ಶಾಂತಿರ್ವಾ ಪುಷ್ಕಲಾಸ್ಯಾತ್ ಚೇತ್ತರ್ಹಿ ದೋಷೋ ನ ಕಸ್ಯಚಿತ್ ॥

ಜ್ಯೇಷ್ಠಾನಕ್ಷತ್ರದವಳು ಗಂಡನ ಅಣ್ಣನನ್ನೂ, ವಿಶಾಖಾನಕ್ಷತ್ರದವಳು ಗಂಡನ ಅಣ್ಣತಮ್ಮಂದಿರನ್ನೂ ನಾಶಮಾಡುತ್ತಾಳೆ । ಸರಿಯಾದ ಕ್ರಮದಲ್ಲಿ ಶಾಂತಿಯನ್ನು(ಆರಾಧನೆ) ಮಾಡಿದರೆ, ಎಲ್ಲಾ ದೋಷಗಳೂ ಪರಿಹಾರವಾಗುವುವು ॥

ಮುಖ್ಯಕಾಲಂ ಪ್ರವಕ್ಷ್ಯಾಮಿ ಶಾಂತಿಹೋಮಸ್ಯ ಯತ್ನತಃ ।

ಜಾತಸ್ಯ ದ್ವಾದಶಾಹೋ ವಾ ಜನ್ಮರ್ಕ್ಷೇ ವಾ ಶುಭೇದಿನೇ ॥

ಶಾಂತಿಹೋಮಕ್ಕೆ ಮುಖ್ಯಕಾಲವೆಂದರೆ – ಹುಟ್ಟಿದ ೧೨ ನೇ ದಿನ, ಅಥವಾ ಆ ನಕ್ಷತ್ರದ ಬೇರೇ ಒಳ್ಳೇದಿನದಲ್ಲಿ ಮಾಡಬೇಕು ॥

ಸಮಾಪ್ತಮೇ ದ್ವಾದಶಾಹೇ ಕುರ್ಯಾದ್ವಾ ಶಾಂತಿಮಾದರಾತ್ ।

ಯಥೈವ ಶಾಂತಿಕಂ ಕುರ್ಯಾತ್ ಕರ್ಮ ತತ್ರ ಪ್ರಚಕ್ಷ್ಮಹೇ ॥

ಆದರೆ ೧೨ ನೇ ದಿನವೇ ಉತ್ತಮಕಾಲವೆಂದು ತಿಳಿಯಬೇಕು । ಈ ಶಾಂತಿಕರ್ಮವನ್ನು ಹೇಗೆ ಮಾಡಬೇಕೆಂದು ತಿಳಿಸುತ್ತೇನೆ ॥

ಸುರಮೇ ಪುಣ್ಯದೇಶೇತು ಮಂಟಪಂ ಕಾರಯೇತ್ ಬುಧಃ ।

ಪುಣ್ಯೈರ್ಮಂತ್ರಿತೈಃ ತೋಯೈಃ ಪ್ರೋಕ್ಷಿತಾಯಂ ಕ್ಷಿತೌ ತತಃ ॥

ಒಳ್ಳೆಯ ಜಾಗದಲ್ಲಿ, ಮಂಟಪವನ್ನು ಮಾಡಬೇಕು । ಶುಚಿಗೊಳಿಸಿದ ನೆಲದಲ್ಲಿ, ಮಂತ್ರಗಳಿಂದ ಅಭಿಮಂತ್ರಿಸಿದ ನೀರನ್ನು ಪ್ರೋಕ್ಷಿಸಬೇಕು ॥

ತತ್ರೋದಕುಂಭಂ ಸುಶ್ಲಷ್ಣಂ ರಕ್ತಂ ವ್ರಣವಿವರ್ಜಿತಮ್ ।

ವಸ್ತ್ರಾವಕುಂಠಿತಂ ಕುರ್ಯಾತ್ ಪೂರಯೇತ್ತೀರ್ಥ ವಾರಿಣಾ ॥

ಅಲ್ಲಿ ಹೊಸದಾದ, ಭಿನ್ನವಾಗದಿರುವ ಕಲಶವನ್ನು ಇಡಬೇಕು । ಅದಕ್ಕೆ ನೀರನ್ನು ತುಂಬಿಸಿ, ವಸ್ತ್ರಗಳನ್ನು ಹೊದಿಸಬೇಕು ॥

ಕೂರ್ಚಹೇಮ ಸಮಾಯುಕ್ತಂ ಚೂತಪಲ್ಲವ ಸಂಯುತಮ್ ।

ಸ್ವಸ್ತಿಕೋಪರಿ ವಿನ್ಯಸ್ಯ ಸಕ್ಷೀರದ್ರುಮ ಪಲ್ಲವೈಃ ॥

ಆ ಕಲಶಕ್ಕೆ ಕೂರ್ಚ, ಚಿನ್ನ, ಮಾವಿನ ಚಿಗುರುಗಳನ್ನು ಹಾಕಬೇಕು । ಮನೆಯ ಈಶಾನ್ಯದಲ್ಲಿ, ಹಾಲುಬರುವ ಮರಗಳ(ಎಕ್ಕೆ–ಗೋಣಿ–ಅತ್ತಿ–ಬಸರಿ–ಆಲ–ಅರಳಿ) ಎಲೆಗಳನ್ನು ರಂಗವಲ್ಲಿಯ ಮೇಲೆ ಹರಡಿ ॥

ದ್ರೋಣ ವ್ರೀಹೀಂಶ್ಚ ನಿಕ್ಷಿಪ್ಯ ಐಶಾನೇ ಚ ನಿಧಾಪಯೇತ್ ।

ಪಂಚರತ್ನಂ ವಿನಿಕ್ಷಿಪ್ಯ ಸರ್ವೌಷಧಿ ಸಮನ್ವಿತಮ್ ॥

೮ ಸೇರು ಅಕ್ಕಿಯನ್ನು ಈಶಾನ್ಯದಲ್ಲಿ ಹರಡಿ । ಅದರಮೇಲೆ ಕಲಶಗಳನ್ನಿಟ್ಟು, ಅದರಲ್ಲಿ ೫ ರತ್ನಗಳು, ಔಷಧಿವನಸ್ಪತಿಗಳನ್ನು ಹಾಕಬೇಕು ॥

ಅರ್ಚಿತಂ ಗಂಧಪುಷ್ಪಾದ್ಯೈಃ ಶ್ರೀರುದ್ರಂ ಚ ಸ್ಪೃಶನ್ಜಪೇತ್ ।

ಷಡಂಗ ಸಹಿತಂ ಸಮ್ಯಕ್ ತಂ ಜಪೇತ್ ರುದ್ರಸಂಖ್ಯಯಾ ॥

ಗಂಧ, ಪೂಗಳಿಂದ ಆವಾಹಿತ ದೇವತೆಗಳನ್ನು ಪೂಜಿಸಿ, ಷಡಂಗ ಸಹಿತ ರುದ್ರಮಂತ್ರಗಳನ್ನು ಕಲಶವನ್ನು ಮುಟ್ಟಿಕೊಂಡು ೧೧ ಸಲ ಜಪಿಸಬೇಕು ॥

ಬಹ್ವೃಚೋ ರುದ್ರ ಸೂಕ್ತೈರ್ವಾ ಛಂದೋಗೋ ರುದ್ರ ಸಾಮಕೈಃ ।

ಏಕಾದಶಾವೃತ್ತಿ ತ್ರಿತ್ಯೇಕ ಸಂಖ್ಯಯಾ ಶಕ್ತಿತೋ ಜಪೇತ್ ॥

ಋಗ್ವೇದಿಗಳು, ರುದ್ರಸೂಕ್ತದಿಂದಲೂ – ಸಾಮವೇದಿಗಳು, ರುದ್ರಸಾಮದಿಂದಲೂ । ೧೧, ೮, ೩ ಅಥವಾ ೧ ಸಲ ಈ ರುದ್ರ ಪಾರಾಯಣವನ್ನು ಮಾಡಬೇಕು ॥

ತತ್ಪ್ರಾಪ್ರತಿರಥಂ ಸೂಕ್ತಂ ಶತರುದ್ರಾನುವಾಕಕಮ್ ।

ರಕ್ಷಾಮಂತ್ರಂ ತಥಾ ಪುಣ್ಯಂ ರಾಕ್ಷೋಘ್ನಂ ಚ ಸ್ಪೃಶನ್ಜಪೇತ್ ॥

ಆಶುಶ್ಶಿಶಾನೋ... ಮತ್ತು ರುದ್ರ... ಹಾಗೂ ರಾಕ್ಷೋಘ್ನಮಂತ್ರಗಳು... ಈ ಮಂತ್ರಗಳನ್ನೂ ಪಾರಾಯಣ ಮಾಡಬೇಕು ॥

ತ್ರ್ಯಂಬಕಂ ಜಪೇತ್ಸಮ್ಯಗಷ್ಟೋತ್ತರಸಹಸ್ರಕಮ್ ।

ಏಕವಾರಂ ತಥಾಜಾಪೀ ಪಾವಮಾನೀಂ ಸ್ಪೃಶನ್ಜಪೇತ್ ॥

ತ್ರ್ಯಂಬಕಂ ಯಜಾಮಹೇ... ಮಂತ್ರವನ್ನು ೧೦೦೮ ಸಲ ಜಪಿಸಬೇಕು । ಪವಮಾನ ಸೂಕ್ತವನ್ನೂ ೧ ಸಲ ಹೇಳಬೇಕು ॥

ಸ್ಥಾಪಯೇತ್ ತ್ರೀಣಿ ಕುಂಭಾನಿ ದ್ವಯಂ ವಾ ತದಲಾಭತಃ ।

ಶ್ರೀರುದ್ರಸ್ಯೈಕ ಕುಂಭಂ ಚ ಸರ್ವಮಂತ್ರಾಭಿಮಂತ್ರಿತಮ್ ॥

೩ ಅಥವ ೨ ಕಲಶಗಳನ್ನಾದರೂ ಇಡಬೇಕು । ರುದ್ರನಿಗೆ ೧ ಮತ್ತು ಉಳಿದ ದೇವತೆಗಳಿಗೆ ೧ ಕಲಶ ॥

ಅಥಾನ್ಯಂ ಚ ಶುಭಂ ಕುಂಭಂ ಪೂರ್ವೋಕ್ತೈರ್ಲಕ್ಷಣೈರ್ಯುತಮ್ ।

ಚತುಃಪ್ರಸ್ರವಣಂ ಕುರ್ಯಾತ್ ಪಂಚವಕ್ತ್ರಂ ಚ ತದ್ಭವೇತ್ ॥

ವಸ್ತ್ರಾವಕುಂಠಿತಂ ಕುರ್ಯಾತ್ ಪೂರಯೇತ್ ತೀರ್ಥ ವಾರಿಣಾ ।

ಪಂಚರತ್ನ ಸಮಾಯುಕ್ತಂ ಆಮ್ರಪಲ್ಲವ ಸಂಯುತಮ್ ॥

ವಸ್ತ್ರಗಳನ್ನು ಸುತ್ತಬೇಕು, ನದ್ಯಾದಿ ಪುಣ್ಯತೀರ್ಥಗಳನ್ನು ಕಲಶಗಳಿಗೆ ತುಂಬಬೇಕು । ೫ ರತ್ನ ಮತ್ತು ಮಾವಿನಎಲೆಗಳನ್ನು ಕಲಶಗಳಿಗೆ ಹಾಕಬೇಕು ॥

ಗಜಾಶ್ವರಥ್ಯಾವಲ್ಮೀಕ ಸಂಗಮಾದ್ರ್ಹ್ರದ ಗೋಕುಲಾತ್ ।

ರಾಜದ್ವಾರ ಪ್ರದೇಶಾಶ್ಚ ಮೃದಮಾನೀಯ ನಿಕ್ಷಿಪೇತ್ ॥

ಆನೆಯ ಪಾದಧೂಳಿ – ಕುದುರೆಯ ಪಾದಧೂಳಿ – ರಥದ ಧೂಳು – ಹುತ್ತದ ಮಣ್ಣು – ನದೀಮಣ್ಣು – ಗೋಶಾಲೆಯ ಮಣ್ಣು । ಅರಮನೆಯ ಮಣ್ಣು – ೫ಷ್ಟೂ ಮಣ್ಣುಗಳನ್ನು ತಂದು, ಕಲಶಗಳಿಗೆ ಹಾಕಬೇಕು ॥

ಕುಂಭಸ್ಯ ನೈಋತೇದೇಶೇ ಹೋಮದೇಶಂ ಪ್ರಕಲ್ಪಯೇತ್ ।

ಗೋಮಯಾ ಲೇಪಿತೇದೇಶೇ ಕುರ್ಯಾತ್ ಸ್ಥಂಡಿಲಮುತ್ತಮಮ್ ॥

ಕಲಶಗಳ ನೈಋತ್ಯಭಾಗದಲ್ಲಿ ಹೋಮಕುಂಡವನ್ನು । ಸಗಣಿಯಿಂದ ಸಾರಿಸಿ ರಚಿಸಬೇಕು ॥

ಕೃತ್ವಾऽಗ್ನಿಮುಖಿ ಪರ್ಯಂತಂ ಉಲ್ಲೇಖಾದಿ ಸ್ವಶಾಖಿಯಾ ।

ಪೂರ್ಣಪಾತ್ರ ನಿಧಾನಾಂತಂ ಕೃತ್ವಾ ಪೂಜಾಂ ಸಮಾಚರೇತ್ ॥

ಅಗ್ನಿಮುಖಿಪರ್ಯಂತವಾದ ಪ್ರಯೋಗವನ್ನು ತನ್ನ ವೇದಶಾಖೆಯಂತೆ ಮಾಡಬೇಕು । ಪೂರ್ಣಪಾತ್ರೆಯ ಪ್ರಯೋಗವನ್ನು ಮಾಡಿದ ಮೇಲೆ, ಪೂಜೆಯನ್ನು ಆರಂಭಿಸಬೇಕು ॥

ನಕ್ಷತ್ರದೇವತಾರೂಪಂ ಸುವರ್ಣೇನ ಪ್ರಯತ್ನತಃ ।

ನಿಷ್ಕಮಾತ್ರೇಣ ವಾ ಅರ್ಧೇನ ಪಾದೇನಾಥ ಸ್ವಶಕ್ತಿತಃ ॥

೧ ತೊಲ ಅಥವ ತನ್ನ ಶಕ್ತಿಗನುಸಾರವಾಗಿ, ಚಿನ್ನದಿಂದ ನಕ್ಷತ್ರದೇವತೆಯ ಪ್ರತಿಮೆಯನ್ನು ಇಡಬೇಕು ॥

ಪ್ರತಿಮಾಂ ಲಕ್ಷಣೇನೈಕಾಂ ಕಾರಯಿತ್ವಾ ವಿಚಕ್ಷಣಃ ।

ಯದ್ವಾಮೌಲ್ಯಂ ಸುವರ್ಣಸ್ಯ ಸ್ಥಾಪಯಿತ್ವಾ ಪ್ರಪೂಜಯೇತ್ ॥

ಬುದ್ಧಿವಂತನಾದವನು ಪ್ರಧಾನ ದೇವತೆಯ ಪ್ರತಿಮೆಯನ್ನು ಚಿನ್ನದಲ್ಲಿ ಮಾಡಿಸಬೇಕು । ಅಥವಾ ಆ ಚಿನ್ನದ ಮೌಲ್ಯವನ್ನಾದರೂ ಇಡಬೇಕು ॥

ಸುವರ್ಣಂ ಸರ್ವದೈವತ್ಯಂ ಸರ್ವದೇವಾತ್ಮಕೋಽನಲಃ ।

ಸರ್ವದೇವಾತ್ಮಕೋ ವಿಪ್ರಃ ಸರ್ವದೇವಮಯೋ ಹರಿಃ ॥

ಚಿನ್ನದಲ್ಲಿ ಎಲ್ಲಾ ದೇವತೆಗಳೂ ಇದ್ದಾರೆ । ಅಗ್ನಿಯಲ್ಲಿಯೂ ಎಲ್ಲಾ ದೇವತೆಗಳೂ ಇದ್ದಾರೆ । ಹಾಗೆಯೇ, ಬ್ರಾಹ್ಮಣರಲ್ಲೂ ಮತ್ತು ವಿಷ್ಣುವಿನಲ್ಲೂ ಎಲ್ಲಾ ದೇವತೆಗಳೂ ಇದ್ದಾರೆ ॥

ಸಂಸ್ಮರೇನ್ನಿರ್ಋತಿಂ ಶ್ಯಾಮಂ ಸುಮುಖಂ ನರವಾಹನಮ್ ।

ರಕ್ಷೋಽಧಿಪಂ ಖಡ್ಗಹಸ್ತಂ ದಿವ್ಯಾಭರಣ ಭೂಷಿತಮ್ ॥

ನಂತರ, ಕಪ್ಪಾಗಿರುವ – ಒಳ್ಳೆಯಮುಖವಿದ ನರವಾಹನನಾದ । ರಕ್ಷಣೆಗೆ ಒಡೆಯನಾದ, ಕತ್ತಿಯನ್ನು ಕೈಯಲ್ಲಿ ಹಿಡಿದಿರುವ, ಒಳ್ಳೆಯ ಆಭರಣಗಳನ್ನು ಧರಿಸಿರುವ, ನಿರ್ಋತಿ ದೇವತೆಯನ್ನು ಧ್ಯಾನಿಸಬೇಕು ॥

ಪ್ರತಿಮಾ ಪೂಜನಾರ್ಥಾಯ ವಸ್ತ್ರಯುಗ್ಮಂ ಪ್ರಕಲ್ಪಯೇತ್ ।

ಪಂಕಜಂ ಕಾರಯೇದ್ಭೂಮೌ ರಕ್ತಾಭೈರ್ವ್ರೀಹಿ ತಂಡುಲೈಃ ॥

ಪೂಜೆಗಾಗಿ, ೨ ವಸ್ತ್ರಗಳನ್ನು ಇಡಬೇಕು । ಕೆಂಪುಅಕ್ಕಿಗಳಿಂದ(ಹಿಟ್ಟು) ಕಮಲವನ್ನು ನೆಲದಲ್ಲಿ ಬಿಡಿಸಬೇಕು ॥

ಚತುರ್ವಿಂಶದ್ದಳೋಪೇತಂ ಶುಕ್ಲೈರ್ವಾ ಕರ್ಣಿಕಾನ್ವಿತಮ್ ।

ತಸ್ಯೋಪರಿ ನ್ಯಸೇತ್ಪಾತ್ರಂ ಸ್ವರ್ಣಂ ವಾ ರೌಪ್ಯಮೃಣ್ಮಯಮ್ ॥

೨೪ ದಳಗಳ ಕಮಲವನ್ನು ಬಿಳಿ ಅಕ್ಕಿ (ಹಿಟ್ಟು)ಗಳಿಂದ ಬಿಡಿಸಬೇಕು । ಅದರ ಮೇಲೆ ಚಿನ್ನ, ಬೆಳ್ಳಿ ಅಥವಾ ಮಣ್ಣಿನ ಕಲಶಗಳನ್ನು ಇಡಬೇಕು ॥

ಶುದ್ಧ ವಸ್ತ್ರೇಣ ಸಂಛಾದ್ಯ ತತ್ರ ಮೂಲಾನಿ ನಿಕ್ಷಿಪೇತ್ ।

(ಮೂಲಾನೀತಿ ಶತಮೂಲಾನಿ) ತದಭಾವೇತು –

ಬಿಳಿವಸ್ತ್ರಗಳಿಂದ ಅಲಂಕರಿಸಿ, ದೂರ್ವೆ ಅಥವ ಲಾವಂಚಗಳನ್ನು ಹಾಕಬೇಕು । ಇವು ಸಿಗದಿದ್ದರೆ –

ವಿಷ್ಣುಕ್ರಾಂತಾ ಸಹದೇವೀ ತುಲಸೀ ತು ಶತಾವರೀ ।

ಮೂಲಾನೀಮಾನಿ ಗೃಹ್ಣೀಯಾಚ್ಛತಾಲಾಭೇ ವಿಶೇಷತಃ ॥

ವಿಷ್ಣುಕ್ರಾಂತಿ, ಸಹದೇವೀ, ತುಳಸಿ, ಶತಾವರಿ । ಈ ಸಸ್ಯಗಳ ಮೂಲಗಳನ್ನು ತಿಳಿದುಕೊಳ್ಳಬೇಕು, ಇದರಲ್ಲಿ ಶತಾವರಿ ಸಸ್ಯವು ಸಿಕ್ಕಿದರೆ ಬಹಳ ವಿಶೇಷವು ॥

ಸ್ಥಾಪಯೇತ್ಕರ್ಣಿಕಾಮಧ್ಯೇ ವಸ್ತ್ರಗಂಧಾದ್ಯಲಂಕೃತಮ್ ।

ಕೂರ್ಚಂ ಹೇಮಜಲೋಪೇತಂ ಕುಂಕುಮೌಷಧಿ ಸಂಯುತಮ್ ॥

ಈ ಎಲ್ಲಾ ಸಸ್ಯಗಳನ್ನೂ ವಸ್ತ್ರಗಂಧಾದಿಗಳಿಂದ ಅಲಂಕೃತವಾದ, ಕಲಶಗಳ ಮಧ್ಯೇ ಇಡಬೇಕು। ಅದು(ಕಲಶ) ಕೂರ್ಚ, ಚಿನ್ನದ ಸ್ಪರ್ಷವಾಗಿರುವ ನೀರು ಹಾಗೂ ಕುಂಕುಮ ಔಷಧಿಗಳಿಂದ ಕೂಡಿದ್ದಾಗಿರಬೇಕು ॥

ಕುಂಭೋಪರಿ ನ್ಯಸೇದ್ವಿದ್ವಾನ್ ಮೂಲನಕ್ಷತ್ರದೇವತಾಮ್ ।

ಅಧಿಪ್ರತ್ಯಧಿದೇವೌ ಚ ದಕ್ಷಿಣೋತ್ತರದೇಶಯೋಃ ॥

ಕಲಶದಲ್ಲಿ ಮೂಲನಕ್ಷತ್ರದ ದೇವತೆಯನ್ನು ಆವಾಹಿಸಿ। ದಕ್ಷಿಣ ಮತ್ತು ಉತ್ತರದ ಕಲಶಗಳಲ್ಲಿ ಕ್ರಮವಾಗಿ ಅಧಿ, ಪ್ರತ್ಯಧಿ ದೇವತೆಗಳ ಸಹಿತವಾಗಿ(ಇಂದ್ರ–ಆಪ) ಆವಾಹನೆ ಮಾಡಬೇಕು ॥

ಅಧಿದೇವಂ ಯಜೇದಾದೌ ಜ್ಯೇಷ್ಠಾನಕ್ಷತ್ರದೇವತಾಮ್ ।

ನಿರ್ಋತಿಂ ಪೂಜಯೇನ್ಮಧ್ಯೇ ಮೂಲನಕ್ಷತ್ರದೇವತಾಮ್ ॥

ಜ್ಯೇಷ್ಠಾನಕ್ಷತ್ರದ ಅಧಿದೇವತೆಯನ್ನು ಮೊದಲು ಹೋಮಿಸಬೇಕು। ನಂತರ ನಿರ್ಋತಿ ದೇವತೆಯಾದ ಮೂಲಾನಕ್ಷತ್ರದೇವತೆಯನ್ನು ಮಧ್ಯದಲ್ಲಿ ಪೂಜಿಸಬೇಕು ॥

ಪಶ್ಚಾತ್ಪ್ರತ್ಯಧಿದೇವಂ ತು ಪೂರ್ವಾಷಾಢಾಧಿದೇವತಾಮ್ ।

ಐಂದ್ರಾದೀಶಾನಪರ್ಯಂತಂ ಚತುರ್ವಿಂಶತಿತಾರಕಾಃ ॥

ನಂತರ, ಪ್ರತ್ಯಧಿದೇವತೆಯಾದ ಪೂರ್ವಷಾಢಾನಕ್ಷತ್ರದೇವತೆಯನ್ನು ಇಂದ್ರ, ಈಶಾನ ಪರ್ಯಂತವಾಗಿ ದಿಕ್ಪಾಲಕದೇವತೆಗಳನ್ನೂ ಮತ್ತೂ ೨೪ ನಕ್ಷತ್ರದೇವತೆಗಳನ್ನೂ ॥

ಉತ್ತರಾಷಾಢಋಕ್ಷಾದಿ ಅನೂರಾಧಾಂತಮರ್ಚಯೇತ್ ।

ಸ್ವಸ್ವಮಂತ್ರೈಸ್ತಥಾ ಚಾಪಿ ನಾಮಭಿರ್ವಾ ಪ್ರಪೂಜಯೇತ್ ॥

ಉತ್ತರಾಷಾಢಾ ನಕ್ಷತ್ರ ದೇವತೆಯಿಂದ ಪಿಡಿದು, ಅನೂರಾಧಾನಕ್ಷತ್ರದೇವತೆಯವರೆಗೂ ಪೂಜೆ ಮಾಡಬೇಕು। ಎಲ್ಲಾ ನಕ್ಷತ್ರದೇವತೆಗಳನ್ನೂ, ಆಯಾಯಾ ನಕ್ಷತ್ರ ಮಂತ್ರಗಳಿಂದ ಅಥವಾ ನಾಮಗಳಿಂದ ಪೂಜೆಯನ್ನು ಮಾಡಬೇಕು ॥

ಸ್ವಲಿಂಗೋಕ್ತೈಃ ಸ್ವಮಂತ್ರೈಶ್ಚ ಪ್ರಧಾನತ್ರಿತಯಂ ಯಜೇತ್ ।

ಪಂಚಾಮೃತೇನ ಸಂಸ್ನಾಪ್ಯಾವಾಹನಾದಿಭಿರರ್ಚಯೇತ್ ॥

ಆಯಾಯಾ ನಕ್ಷತ್ರಗಳ ಗುರುತುಗಳನ್ನು ಸೂಚಿಸುವ ಮಂತ್ರಗಳಿಂದ ಅಧಿಪ್ರತ್ಯಧಿದೇವತೆಗಳಿಂದ ಕೂಡಿದ, ಪ್ರಧಾನ ನಕ್ಷತ್ರದೇವತಾ ಮಂತ್ರಗಳಿಂದ ಹೋಮಮಾಡಬೇಕು । ಪಂಚಾಮೃತದಿಂದ ಅಭಿಷೇಕ ಮಾಡಿ, ಉಪಚಾರಪೂಜೆಗಳನ್ನು ಮಾಡಬೇಕು ॥

ಉಪಚಾರೈಷ್ಷೋಡಶಭಿಃ ಯದ್ವಾ ಪಂಚೋಪಚಾರಕೈಃ ।

ರಕ್ತಚಂದನಗಂಧಾದ್ಯೈಃ ಪುಷ್ಪೈಃ ಕೃಷ್ಣಸಿತಾದಿಭಿಃ ॥

೧೬ ಅಥವಾ ೫ ಉಪಚಾರಗಳಿಂದ ಅರ್ಚಿಸಬೇಕು । ಕೆಂಪುಗಂಧ – ಕಪ್ಪು,ಬಿಳಿ ಹೂಗಳಿಂದ ಪೂಜಿಸಬೇಕು ॥

ಮೇಷಶೃಂಗಾದಿಧೂಪೈಶ್ಚ ಘೃತದೀಪೈಸ್ತಥೈವ ಚ ।

ಸುರಾಪೋಲಿಕಮಾಂಸಾದ್ಯೈರ್ನೈವೇದ್ಯೈರೋದನಾದಿಭಿಃ ॥

ಕುರಿಯ ಕೋಡುಗಳಿಂದ, ಧೂಪಗಳಿಂದ, ತುಪ್ಪದದೀಪಗಳಿಂದಲೂ । ಹೆಂಡ, ಮೀನು, ಮಾಂಸ, ಅನ್ನಾದಿಗಳಿಂದ ಕೂಡ ಆರಾಧನೆ ಮಾಡಬೇಕು ॥

ಮತ್ಸ್ಯಮಾಂಸಸುರಾದೀನಿ ಬ್ರಾಹ್ಮಣಾನಾಂ ವಿವರ್ಜಯೇತ್ ।

ಸುರಾಸ್ಥಾನೇ ಪ್ರದಾತವ್ಯಂ ಕ್ಷೀರಂ ಸೈಂಧವಮಿಶ್ರಿತಮ್ ॥

ಬ್ರಾಹ್ಮಣರು – ಮೀನು, ಹೆಂಡ, ಮಾಂಸಗಳಿಂದ ಆರಾಧನೆ ಮಾಡಬಾರದು । ಬ್ರಾಹ್ಮಣರು ಹೆಂಡದ ಸ್ಥಾನದಲ್ಲಿ ಸೈಂಧವ ಮಿಶ್ರಿತ ಹಾಲನ್ನು ನೈವೇದ್ಯಕ್ಕಾಗಿ ಬಳಸಬೇಕು ॥

ಪಾಯಸಂ ಲವಣೋಪೇತಂ ಮಾಂಸಸ್ಥಾನೇ ಪ್ರಕಲ್ಪಯೇತ್ ।

ಉಕ್ತಗಂಧಾದ್ಯಲಾಭೇತು ಯಥಾಲಾಭಂ ಸಮರ್ಪಯೇತ್ ॥

ಮಾಂಸದ ಸ್ಥಾನದಲ್ಲಿ, ಉಪ್ಪಿನಿಂದ ಕೂಡಿದ ಪಾಯಸವನ್ನು ನೈವೇದ್ಯ ಮಾಡಬೇಕು । ಹೇಳಿದಂತಹ ಗಂಧಾದಿಗಳು ಸಿಗದಿದ್ದರೆ, ಯಾವ ವಸ್ತುಗಳು ಸಿಗುತ್ತವೆಯೋ ಅವುಗಳಿಂದಲೇ ಭಕ್ತಿಯಿಂದ ಪೂಜಿಸಬೇಕು ॥

ಪುಷ್ಪಾಂತಂ ತು ಸಮಭ್ಯರ್ಚ್ಯ ಹೋಮಂ ಕುರ್ಯಾದ್ಯಥೋದಿತಮ್ ।

ನಿರ್ವಾಪಪ್ರೋಕ್ಷಣಾದೀನಿ ಚರೋಃ ಕುರ್ಯಾದ್ಯಥಾವಿಧಿ ॥

ಪುಷ್ಪ ಪೂಜೆಯವರೆಗೆ ಪೂಜೆಯನ್ನು ಮಾಡಿ, ಅನಂತರ ಯಥಾವಿಧಿಯಾಗಿ ಹೋಮಿಸಬೇಕು । ಚರು ಹೋಮದಲ್ಲಿ, ಚರುವನ್ನು ಇಟ್ಟುಕೊಳ್ಳುವ ವಿಧಿಯೇ ಮೊದಲಾಗಿ ಹೋಮ, ಮತ್ತು ಪ್ರೋಕ್ಷಣಾದಿಗಳನ್ನು ಯಥಾವಿಧಿಯಾಗಿ ॥

ಕುಂಭಾಭಿಮಂತ್ರಣಂ ಕುರ್ಯಾದ್ದಕ್ಷಿಣೇನ ಕರೇಣ ತು ।

ಮೃತ್ಯುಪ್ರಶಮನಾರ್ಥಾಯ ಜಪೇತ್ತ್ರ್ಯಂಬಕಂ ಶತಮ್ ॥

ನಂತರ, ಬಲಕ್ಕೈಯಿಂದ ಕಲಶವನ್ನು ಮುಟ್ಟಿಕೊಂಡು, ಮೃತ್ಯುವಿನ ಪರಿಹಾರಕ್ಕಾಗಿ ೧೦೦ ಸಲ ತ್ರ್ಯಂಬಕಮಂತ್ರ ಜಪವನ್ನು ಮಾಡಬೇಕು ॥

ರುದ್ರಂ ಕುಂಭೋಕ್ತಮಾರ್ಗೇಣ ಕುಂಭಂ ಸ್ಪೃಷ್ಟ್ವಾऽಭಿಮಂತ್ರಯೇತ್ ।

ಧೂಪಂ ದೀಪಂ ಚ ನೈವೇದ್ಯಂ ಕುಂಭಯುಗ್ಮೇ ನಿವೇದಯೇತ್ ॥

ಶಾಸ್ತ್ರದಲ್ಲಿ ಹೇಳಿದ ರೀತಿಯಲ್ಲಿ, ರುದ್ರಕಲಶವನ್ನು ಸ್ಥಾಪನೆಮಾಡಿ, ಆ ಕಲಶವನ್ನು ಹಿಡಿದುಕೊಂಡು ರುದ್ರಮಂತ್ರವನ್ನು ಆವಾಹಿಸಬೇಕು । ನಂತರ ಆವಾಹಿಸಿರುವ ದೇವತೆಗಳ ಕಲಶಗಳಿಗೆ ಯಥಾವಿಧಿಯಾಗಿ ಪೂಜೆಯನ್ನು ಮಾಡಬೇಕು ॥

ಪ್ರಸಾದಾಯ ತತೋದೇವಾನ್ ನಮಸ್ಕೃತ್ಯ ಕ್ಷಮಾಪಯೇತ್ ।

ನಿರ್ವಾಪ ಪ್ರೋಕ್ಷಣಾದೀನಿ ಚರೋಃ ಕುರ್ಯಾತ್ ಯಥಾವಿಧಿ ॥

ದೇವತೆಗಳಿಗೆ ನಮಿಸಿ, ಅವರ ಅನುಗ್ರಹಕ್ಕಾಗಿ ಪ್ರಾರ್ಥನೆ ಮಾಡಬೇಕು, ಮಾಡಿರಬಹುದಾದ ತಪ್ಪುಗಳಿಗೆ ಕ್ಷಮೆಯನ್ನೂ ಕೇಳಬೇಕು । ಚರುವನ್ನು ಮಂತ್ರಸಹಿತವಾಗಿ ದೇವತೋದ್ದೇಶಕ್ಕಾಗಿ ಪಾಕಿಕೊಳ್ಳುವುದು ಮತ್ತು ಪ್ರೋಕ್ಷಣಾದಿಗಳನ್ನು ಯಥಾವಿಧಿಯಾಗಿ ಮಾಡಬೇಕು ॥

ಅನ್ಯತ್ರ ಶ್ರಪಯೇದನ್ನಂ ತಿಲಮಿಶ್ರಂ ತು ಕಾರಯೇತ್ ।

ತದನ್ನಂ ಕೃಸರೇತ್ಯುಕ್ತಂ ಸರ್ವತ್ರೈವಂ ಪ್ರಕೀರ್ತಿತಮ್ ॥

ಬೇರೇಕಡೆಯಲ್ಲಿ ಅನ್ನವನ್ನು ಮಾಡಿ, ಅದಕ್ಕೆ ಎಳ್ಳನ್ನು ಸೇರಿಸಬೇಕು । ಆ ಅನ್ನವನ್ನು ಕೃಸರ ಎಂದು ಎಲ್ಲಕಡೆಯಲ್ಲೂ ಹೇಳುತ್ತಾರೆ ॥.

ಹವಿರ್ಗೃಹೀತ್ವಾ ವಿಧಿವನ್ನಿರ್ಋತ್ಯೈ ಬಹ್ವೃಚೋ ಹುವೇತ್ ।

ಮೋಷುಣಃ ಪರಾಪರೇತಿ ಯತ್ತೇ ದೇವೀತಿ ವಾ ಪುನಃ ॥

ಹವಿಸ್ಸನ್ನು ತೆಗೆದುಕೊಂಡು ವಿಧಿಯಂತೆ, ಋಗ್ವೇದಿಗಳು ನಿರ್ಋತಿ ದೇವತೆಗೆ ಹೋಮಿಸಬೇಕು । ಮೋಷುಣ ಪರಾಪರ... ಮತ್ತು ಯತ್ತೇದೇವೀ..... ಎಂಬ ಮಂತ್ರದಿಂದ ಹೋಮಿಸಬೇಕು ॥

ಪಾಯಸಂ ಘೃತ ಸಂಮಿಶ್ರಂ ಹುವೇತ್ ಅಷ್ಟೋತ್ತರಂಶತಮ್ ।

ಸಮಿದಾಜ್ಯ ಚರೂನ್ ಪಶ್ಚಾತ್ ಶಕ್ತಿತತ್ಸಂಖ್ಯಯಾ ಹುವೇತ್ ॥

ತುಪ್ಪಮಿಶ್ರಿತವಾದ ಪಾಯಸದಿಂದ ೧೦೮ ಸಲ ಹೋಮಿಸಬೇಕು । ನಂತರ ಸಮಿತ್ – ತುಪ್ಪ –ಚರುಗಳಿಂದ ಯಥಾಶಕ್ತಿಯಾಗಿ ಹೋಮಿಸಬೇಕು ॥

ಅಧಿದೇವತಯೋಶ್ಚೈವ ಜುಹುಯಾತ್ ಸ್ವಸ್ವಮಂತ್ರತಃ ।

ಚತುರ್ಥ್ಯಂತೈಃ ನಮೋಽಂತೈಶ್ಚ ಸ್ವಾಹಾಂತೈಃ ಸ್ವಸ್ವಮಂತ್ರತಃ ॥

ಅಧಿಪ್ರತ್ಯಧಿದೇವತೆಗಳಿಗೆ ಆಯಾಯಾ ಮಂತ್ರಗಳಿಂದ ಹೋಮಿಸಬೇಕು । ಚತುರ್ಥೀವಿಭಕ್ತಿಯಿಂದ ನಮಃ ಎಂದು ಮತ್ತು ಸ್ವಾಹಾ ಎಂದು ಪದಾಂತವಾಗಿ ಆಯಾಯಾ ಮಂತ್ರಗಳಿಂದ ಹೋಮಿಸಬೇಕು ॥

ನಕ್ಷತ್ರದೇವತಾಭ್ಯಶ್ಚ ಪಾಯಸೇನತು ಹೋಮಯೇತ್ ।

ಕೃಣುಷ್ವೇತಿ ಚ ಪಂಚಋಕ್‌ಭಿಃ ಜುಹುಯಾತ್ ಕೃಸರಂ ತತಃ ॥

ನಕ್ಷತ್ರದೇವತೆಗಳಿಗೆ, ಪಾಯಸದಿಂದ ಹೋಮಿಸಬೇಕು । ಕೃಣುಷ್ವಪಾಜ....., ಎಂಬ ೫ ಮಂತ್ರಗಳಿಂದ ಕೃಸರವನ್ನು ಹೋಮಿಸಬೇಕು ॥

ಗಾಯತ್ರ್ಯಾ ಜಾತವೇದಸೇ ತ್ರ್ಯಂಬಕಮಿತಿ ಕ್ರಮಾತ್ ।

ಸೀರಾಯುಂಜಂತಿ ತಾಮಗ್ನಿಂ ವಾಸ್ತೋಷ್ಪತ್ಯಗ್ನಿಮೇವ ಚ ॥

ಗಾಯತ್ರೀ....., ಜಾತವೇದಸೇ ೧ ಮಂತ್ರ, ತ್ರ್ಯಂಬಕಮಂತ್ರ । ಸೀರಾಯುಂಜಂತಿ....., ತಾಮಗ್ನಿಂವರ್ಣಾಂ....., ವಾಸ್ತೋಷ್ಪತೇ....., ಮತ್ತು ಅಗ್ನಿಮಂತ್ರದಿಂದ ಕ್ರಮವಾಗಿ ಹೋಮಿಸಬೇಕು ॥

ಕ್ಷೇತ್ರಸ್ಯಪತಿನಾ ಮಂತ್ರೈಃ ತ್ರಿಭಿರಗ್ನಿರ್ಯಥೋದಿತೈಃ ।

ಗಣಾನಾಂತ್ವಾ ಶ್ರೀಸೂಕ್ತೇನ ಸಮಿದಾಜ್ಯ ಚರೂನ್ ಹುವೇತ್ ॥

ಕ್ಷೇತ್ರಸ್ಯಪತಿನಾ....., ಕ್ಷೇತ್ರಸ್ಯಪತೇ....., ಮತ್ತು ಅಗ್ನೇನಯ....., ಎಂಬ ೩ ಅಗ್ನಿಗೆ ಸಂಬಂಧಿಸಿದ ಮಂತ್ರಗಳಿಂದ, ಹಾಗೂ ಗಣಾನಾಂ ತ್ವಾ....., ಶ್ರೀಸೂಕ್ತ..., ಮಂತ್ರಗಳಿಂದಲೂ ಕೂಡ ಸಮಿತ್, ಚರು, ಆಜ್ಯದ್ರವ್ಯಗಳಿಂದ ॥

ಅಷ್ಟೋತ್ತರಶತಂ ವಾऽಥ ಅಷ್ಟಾವಿಂಶತಿ ಮೇವ ವಾ ।

ಅಷ್ಟಾಷ್ಟ ಸಂಖ್ಯಯಾ ವಾऽಥ ಜುಹುಯಾತ್ ಶಕ್ತಿತೋ ಬುಧಃ ॥

108, 28, ಅಥವಾ 8 ಸಲ ವಿದ್ವಾಂಸರು ಹೋಮಿಸಬೇಕು ॥

ದೋಷಮಲ್ಪಂ ಮಹತ್ ಸರ್ವಂ ಸಮಿದಾದೀನ್ ಪ್ರಕಲ್ಪಯೇತ್ ।

ತ್ವಂ ನಸ್ಸೋಮೇತಿ ಪಾಯಸಂ ಜುಹುಯಾತ್ತು ತ್ರಯೋದಶ ॥

ದೋಷವು ಸ್ವಲ್ಪವಿದ್ದರೆ, ಅಲ್ಪಸಂಖ್ಯೆಯಿಂದ ಹೋಮವನ್ನು ಮಾಡಬೇಕು, ದೋಷವು ಹೆಚ್ಚಿದ್ದರೆ ಹೆಚ್ಚಿನ ಸಂಖ್ಯೆಯಲ್ಲಿ ಹೋಮಿಸಬೇಕು । ತ್ವಂ ನಸ್ಸೋಮ....., ಎಂಬ ಮಂತ್ರದಿಂದ, ಪಾಯಸವನ್ನು ೧೩ ಸಲ ಹೋಮಿಸಬೇಕು ।

ಚತುರ್ಗೃಹೀತಮಾಜ್ಯಂ ಚ ಯಾ ತೇ ರುದ್ರೇತಿ ಮಂತ್ರತಃ ।

ಸ್ರುವೇಣ ಜುಹುಯಾದಾಜ್ಯಂ ಮಹಾವ್ಯಾಹೃತಿಭಿಃ ಕ್ರಮಾತ್ ॥

೪ ಸಲ ತುಪ್ಪವನ್ನು ಹಾಕಿಕೊಂಡು, ಯಾ ತೇ ರುದ್ರ....., ಎಂಬ ಮಂತ್ರದಿಂದ ಸ್ರುವದಲ್ಲಿ ಹೋಮಿಸಬೇಕು । ಹಾಗೆಯೇ ಮಹಾವ್ಯಾಹೃತಿಗಳನ್ನೂ ಕ್ರಮವಾಗಿ ಸ್ರುವದಿಂದ ಹೋಮಿಸಬೇಕು ॥

ಹುತ್ವಾ ಸ್ವಿಷ್ಟಕೃತಂ ಪಶ್ಚಾತ್ ಪ್ರಾಯಶ್ಚಿತ್ತಂ ಸಮಾಪಯೇತ್ ।

ಆಚಾರ್ಯೋ ಯಜಮಾನೋ ವಾ ಅಗ್ನಿಂ ಪೂರ್ಣಾಹುತಿಂ ಹುವೇತ್ ॥

ಪ್ರಧಾನಹೋಮಗಳ ನಂತರ, ಸ್ವಿಷ್ಟಕೃತ್ ಹೋಮವನ್ನು ಮಾಡಿ, ಪ್ರಾಯಶ್ಚಿತ್ತಾದಿ ಹೋಮಗಳನ್ನೂ ಮಾಡಬೇಕು । ಆಚಾರ್ಯರು ಅಥವಾ ಯಜಮಾನನು ಅಗ್ನಿಗೆ ಪೂರ್ಣಾಹುತಿಯನ್ನು ಮಾಡಬೇಕು ॥

ಸಮುದ್ರಾದೂರ್ಮಿ ಸೂಕ್ತೇನ ಪ್ರಾಜಾಪತ್ಯ ಋಚಾ ತಥಾ ।

ಪೂರ್ಣಾದರ್ವೀ ಸಪ್ತತೇಽಗ್ನೇ ಏತೈಃ ಪೂರ್ಣಾಹುತಿಂ ಹುವೇತ್ ।

ಏವಂ ಪೂರ್ಣಾಹುತಿಂ ಹುತ್ವಾ ಹೋಮಶೇಷಂ ಸಮಾಪಯೇತ್ ॥

ಸಮುದ್ರಾದೂರ್ಮಿ....., ಎಂಬ ಸೂಕ್ತದಿಂದ ಹಾಗೂ ಪ್ರಾಜಾಪತ್ಯ ಋಕ್ಕಿನಿಂದ । ಹಾಗೂ ಪೂರ್ಣಾದರ್ವಿ....., ಹಾಗೂ ಸಪ್ತ ತೇ ಅಗ್ನೇ....., ಎಂಬ ಮಂತ್ರಗಳಿಂದ ಪೂರ್ಣಾಹುತಿಯನ್ನು ಮಾಡಬೇಕು । ಹೀಗೆ ಪೂರ್ಣಾಹುತಿಯನ್ನು ಮಾಡಿ, ಹೋಮವನ್ನು ವಿಧಿಯಂತೆ ಕ್ರಮವಾಗಿ ಮುಗಿಸಬೇಕು ॥

ಅಭಿಷೇಕವಿಧಿಂ ವಕ್ಷ್ಯೇ ಸರ್ವಾಚಾರ್ಯೈರುದೀರಿತಮ್ ।

ಭದ್ರಾಸನೋಪವಿಷ್ಟಸ್ಯ ಯಜಮಾನಸ್ಯ ಋತ್ವಿಜಃ ॥

ಈಗ ನಾವು, ಎಲ್ಲ ಆಚಾರ್ಯರುಗಳಿಂದಲೂ ಹೇಳಲ್ಪಟ್ಟ ಅಭಿಷೇಕವಿಧಿಯನ್ನು ಹೇಳುತ್ತೇವೆ । ಭದ್ರಾಸನದಲ್ಲಿ ಕುಳಿತ ॥

ದಾರಪುತ್ರ ಸಮೇತಸ್ಯ ಕುರ್ಯುಸ್ಸರ್ವಾಭಿಷೇಚನಮ್ ।

ಅಕ್ಷೀಭ್ಯಾಮಿತಿ ಸೂಕ್ತೇನ ಪಾವಮಾನೀಭಿರೇವ ಚ ॥

ಪೆಂಡತಿ, ಮಕ್ಕಳಿಂದ ಕೂಡಿದ, ಯಜಮಾನನಿಗೆ, ಎಲ್ಲಾ ಕಲಶಗಳ ನೀರಿನಿಂದ ಋತ್ವಿಜರು ಅಭಿಷೇಕವನ್ನು ಮಾಡಬೇಕು । ಅಕ್ಷೀಭ್ಯಾಂ ತೇ....., ಹಾಗೂ ಪವಮಾನ ಸೂಕ್ತಗಳಿಂದ ॥

ಆಪೋಹಿಷ್ಠೇತಿ ನವಭಿಃ ಆಪ ಇದ್ಯೈದ್ವಯೇನ ಚ ।

ಸಹಸ್ರಾಕ್ಷಋಚೇನಾಪಿ ದೇವಸ್ಯತ್ವೇತಿ ಮಂತ್ರಕೈಃ ॥

ಶಿವಸಂಕಲ್ಪ ಮಂತ್ರೇಣ ವಕ್ಷ್ಯಮಾನೈಶ್ಚ ಮಂತ್ರಕೈಃ ॥

ಹಾಗೂ ಆಪೋಹಿಷ್ಠಾ...., ಎಂಬ ೯ ಆಬ್ದೇವತಾ ಮಂತ್ರಗಳಿಂದ, ಆಪ ಇದ್ಯಾ ಉ...., ಎಂಬ ೨ ಮಂತ್ರಗಳಿಂದ । ಸಹಸ್ರಾಕ್ಷ....., ಎಂಬ ೩ ಋಗ್ವೇದಮಂತ್ರಗಳಿಂದ ಹಾಗೂ ದೇವಸ್ಯ ತ್ವಾ....., ಮಂತ್ರಗಳಿಂದ ॥ ಹಾಗೂ ಶಿವಸಂಕಲ್ಪ...., ಹಾಗೂ ದಿಕ್ಪಾಲಕದೇವತೆಗಳನ್ನುದ್ದೇಶಿಸಿ ಈ ಕೆಳಗೆ ಹೇಳುವ ಮಂತ್ರಗಳಿಂದಲೂ ಅಭಿಷೇಕವನ್ನು ಯಜಮಾನ ಸಹಿತ ಕುಟುಂಬಕ್ಕೆ ಮಾಡಬೇಕು ॥

ಯೋಽಸೌ ವಜ್ರಧರೋ ದೇವೋ ಮಹೇಂದ್ರೋ ಗಜವಾಹನಃ ।

ಮೂಲಜಾತಶಿಶೋರ್ದೋಷಂ ಮಾತಾಪಿತ್ರೋರ್ವ್ಯಪೋಹತು ॥

ಯೋಽಸೌ ಶಕ್ತಿಧರೋ ದೇವೋ ಹುತಭುಕ್ ಮೇಷವಾಹನಃ ।

ಸಪ್ತಜಿಹ್ವಶ್ಚ ಮೇಷೋಽಗ್ನಿರ್ಮೂಲದೋಷಂ ವ್ಯಪೋಹತು ॥

ಯೋಽಸೌ ದಂಡಧರೋ ದೇವೋ ಯಮೋ ಮಹಿಷವಾಹನಃ ।

ಮೂಲಜಾತ ಶಿಶೋರ್ದೋಷಂ ವ್ಯಪೋಹತು ಯಮಸ್ಸದಾ ॥

ಯೋಽಸೌ ಖಡ್ಗಧರೋ ದೇವೋ ನಿರ್ಋತೀ ರಾಕ್ಷಸಾಧಿಪಃ ।

ಪ್ರಶಾಮಯತು ಮೂಲೋತ್ಥಂ ದೋಷಂ ಗಂಡಾಂತ ಸಂಭವಮ್ ॥

ಯೋಽಸೌ ಪಾಶಧರೋ ದೇವೋ ವರುಣಶ್ಚ ಜಲೇಶ್ವರಃ ।

ನಕ್ರವಾಹಃ ಪ್ರಚೇತಾಽಂಹೋ ಮೂಲೋತ್ಥಂ ಸ ವ್ಯಪೋಹತು ॥

ಯೋಽಸೌ ದೇವೋ ಜಗತ್ಪ್ರಾಣೋ ಮಾರುತೋ ಮೃಗವಾಹನಃ ।

ಪ್ರಶಾಮಯತು ಮೂಲೋತ್ಥಂ ದೋಷಂ ಬಾಲಸ್ಯ ಶಾಂತಿದಃ ॥

ಯೋಸೌ ನಿಧಿಪತಿರ್ದೇವೋ ಗದಾಭೃದ್ವಾಜಿ ವಾಹನಃ ।

ಮಾತಾಪಿತ್ರೋಶ್ಶಿಶೋಶ್ಚೈವ ಮೂಲದೋಷಂ ವ್ಯಪೋಹತು ॥

ಯೋಽಸೌ ಪಶುಪತಿರ್ದೇವಃ ಪಿನಾಕೀವೃಷವಾಹನಃ ।

ಆಶ್ಲೇಷಾ ಮೂಲ ಗಂಡಾಂತಂ ದೋಷಮಾಶು ವ್ಯಪೋಹತು ॥

ವಿಘ್ನೇಶಃ ಕ್ಷೇತ್ರಪೋ ದುರ್ಗಾ ಲೋಕಪಾಲಾ ನವಗ್ರಹಾಃ ।

ಸರ್ವದೋಷ ಪ್ರಶಮನಂ ಸರ್ವೇ ಕುರ್ವಂತು ಶಾಂತಿದಾಃ ॥

ತಚ್ಛಂಯೋರಭಿಷೇಕಂ ತು ಸರ್ವದೋಷೋಪ ಶಾಂತಿದಮ್ ।

ಸರ್ವಕಾಮಪ್ರದಂ ದಿವ್ಯಂ ಮಂಗಲಾನಾಂ ಚ ಮಂಗಲಮ್ ॥

ನಂತರ, ತಚ್ಛಂ ಯೋಃ....., ಎಂಬ ಪುರುಷಸೂಕ್ತ ಮಂತ್ರಗಳಿಂದ ಎಲ್ಲಾ ದೋಷಗಳನ್ನೂ ಪೋಗಲಾಡಿಸುವುದಕ್ಕಾಗಿ । ಹಾಗೂ ಎಲ್ಲಾ ಇಷ್ಟಾರ್ಥಪೂರ್ತಿಗಾಗಿ ದಿವ್ಯವಾದ ಮಂಗಳಕ್ಕೂ ಮಂಗಳಕರವಾದ ಸೌಖ್ಯವು ಉಂಟಾಗಲು ಅಭಿಷೇಕ ಮಾಡಬೇಕು ॥

ವಸ್ತ್ರಾಂತರಿತ ಕುಂಭಾಭ್ಯಾಂ ಪಶ್ಚಾತ್ತು ಸ್ನಾಪಯೇದ್ಬುಧಃ ।

ತತಃ ಶುಕ್ಲಾಂಬರಧರಶ್ಶುಕ್ಲಮಾಲ್ಯಾನುಲೇಪನಃ ॥

ನಂತರ, ಬಟ್ಟೆಯನ್ನು ಮುಚ್ಚಿದ ೨ ಕಲಶಗಳಿಂದ, ಉಳಿದ ನೀರಿನಿಂದ ಅಭಿಷೇಕವನ್ನು ವಿದ್ವಾಂಸರು ಮಾಡಬೇಕು । ನಂತರ ಯಜಮಾನ ದಂಪತಿಗಳು, ಶುಭ್ರವಾದ ವಸ್ತ್ರಗಳನ್ನು ಧರಿಸಿದವರಾಗಿ, ಬಿಳಿಹೂವಿನ ಮಾಲೆಯನ್ನು, ಗಂಧಾದಿ ಸುಗಂಧದ್ರವ್ಯಗಳನ್ನು ಹಾಕಿಕೊಂಡು ॥

ಯಜಮಾನೋ ದಕ್ಷಿಣಾಭಿಸ್ತು ತೋಷಯೇದೃತ್ವಿಗಾದಿಕಾನ್ ।

ಧೇನುಂ ಪಯಸ್ವಿನೀಂ ದದ್ಯಾತ್ ಆಚಾರ್ಯಾಯ ಸವತ್ಸಕಾಮ್ ॥

ಯಜಮಾನನು, ಋತ್ವಿಜರನ್ನು ಯಥೇಷ್ಟ ದಕ್ಷಿಣೆಗಳಿಂದ ಸಂತೋಷಗೊಳಿಸಬೇಕು । ನಂತರ ಆಚಾರ್ಯನಿಗೆ ವತ್ಸ ಸಹಿತವಾದ ಧೇನುವನ್ನು ದಕ್ಷಿಣೆಯಾಗಿ ಕೊಡಬೇಕು ॥

ನಿರ್ಋತಿ ಪ್ರತಿಮಾಂ ವಸ್ತ್ರಂ ಕುಂಭಂ ಹೇಮ ಚ ದಾಪಯೇತ್ ।

ಗ್ರಹಾರ್ಥ ವಸ್ತ್ರ ಪ್ರತಿಮಾಸ್ತತ್ತದ್ಗ್ಹೋಭೂಶ್ಚ ದಾಪಯೇತ್ ॥

ನಂತರ, ಪೂಜಿಸಲ್ಪಟ್ಟ ನಿರ್ಋತಿ ದೇವತೆಯ ಪ್ರತಿಮೆಯನ್ನು, ವಸ್ತ್ರವನ್ನೂ, ಕಲಶವನ್ನೂ, ಚಿನ್ನವನ್ನು ಕೊಡಬೇಕು । ಗ್ರಹಕ್ಕಾಗಿ ಇಟ್ಟಂತಹ ವಸ್ತ್ರಗಳು, ಆಯಾಗ್ರಹಗಳ ಪ್ರತಿಮೆ ಮತ್ತು ಪ್ರತಿಯೊಂದು ಗ್ರಹಕ್ಕೂ ಗೋ, ಭೂ ದಕ್ಷಿಣೆಯನ್ನು ಕೊಡಬೇಕು ॥

ಶ್ರೀರುದ್ರ ಜಾಪಿನೇದೇಯಃ ಕೃಷ್ಣೋಽನಡ್ವಾನ್ ಪ್ರಯತ್ನತಃ ।

ತತ್ಕುಂಭ ವಸ್ತ್ರ ಪ್ರತಿಮಾಸ್ತಸ್ಮೈ ದದ್ಯಾತ್ ಪ್ರಯತ್ನತಃ ॥

ರುದ್ರಪಾರಾಯಣವನ್ನು ಮಾಡಿದವರಿಗೆ, ಕಪ್ಪು ಎತ್ತನ್ನು ಕೊಡಬೇಕು । ಹಾಗೂ ಆ ರುದ್ರಕಲಶ, ವಸ್ತ್ರ, ಪ್ರತಿಮೆಗಳನ್ನೂ ಕೊಡಬೇಕು ॥

ಇತರೇಭ್ಯೋಽಪಿ ವಿಪ್ರೇಭ್ಯಃ ಶಕ್ತ್ಯಾ ದದ್ಯಾಚ್ಚ ದಕ್ಷಿಣಾಮ್ ।

ಉಕ್ತಾ ಅಲಾಭೇ ತತೋ ದದ್ಯಾದಾಚಾರ್ಯ ಬ್ರಹ್ಮ ಋತ್ವಿಜಾಮ್ ॥

ಉಳಿದ ಬ್ರಾಹ್ಮಣರಿಗೂ ಯಥಾಶಕ್ತಿ ದಕ್ಷಿಣೆಯನ್ನು ಕೊಡಬೇಕು । ಶಕ್ತಿ ಇಲ್ಲದಿದ್ದರೆ, ಬ್ರಹ್ಮ, ಆಚಾರ್ಯ, ಋತ್ವಿಜರಿಗೆ ದಕ್ಷಿಣೆ ಕೊಡಬೇಕು ॥

ತತ್ತನ್ಮೂಲ್ಯಂ ಪ್ರದಾತವ್ಯಂ ಶಕ್ತ್ಯಾ ವಾಽಥ ಪ್ರದಾಪಯೇತ್ ।

ಆಚಾರ್ಯಾಯ ಚ ಯದ್ದತ್ತಂ ತದರ್ಧಂ ಬ್ರಹ್ಮಣೋ ಭವೇತ್ ॥

ಆಯಾಯಾ ಮೌಲ್ಯಕ್ಕನುಗುಣವಾಗಿ, ಯಥಾಶಕ್ತಿಯಾಗಿ ದಕ್ಷಿಣೆಯನ್ನು ಕೊಡಬೇಕು । ಆಚಾರ್ಯರಿಗೆ, ಎಷ್ಟು ದಕ್ಷಿಣೆಯೋ ಅದರ ಅರ್ಧ ಬ್ರಹ್ಮನಿಗೆ ದಕ್ಷಿಣೆ ॥

ಸದಸ್ಯಾಯ ಬ್ರಹ್ಮಣೋಽರ್ಧಂ ಋತ್ವಿಗ್ಭ್ಯಶ್ಚ ತದರ್ಧಕಮ್ ।

ಗೃಹ್ಣೀಯಾತ್ ಆಶಿಷಸ್ತೇಭ್ಯಃ ಪ್ರಣಮ್ಯಾಥ ಕ್ಷಮಾಪಯೇತ್ ॥

ಬ್ರಹ್ಮದಕ್ಷಿಣೆಯ ಅರ್ಧದಷ್ಟು ಸದಸ್ಯರಿಗೆ, ಸದಸ್ಯದಕ್ಷಿಣೆಯ ಅರ್ಧದಷ್ಟು ಒಬ್ಬೊಬ್ಬ ಋತ್ವಿಜರಿಗೆ । ಅವರಿಂದ ಆಶೀರ್ವಾದವನ್ನು ಪಡೆದು, ನಮಸ್ಕರಿಸಿ ಕ್ಷಮೆಯನ್ನು ಯಾಚಿಸಬೇಕು ॥

ದದ್ಯಾದನ್ನಂ ಪಾಯಸಾದಿ ಬ್ರಾಹ್ಮಣಾನ್ ಭೋಜಯೇತ್ ಶತಮ್ ।

ಅಲಾಭೇಸತಿ ಪಂಚಾಶದ್ದಶಕಂ ತದಭಾವತಃ ॥

ಆಮೇಲೆ, ಅನ್ನ, ಪಾಯಸಗಳನ್ನು ದಾನಮಾಡಿ, ಭೋಜನವನ್ನು ೧೦೦ ಜನ ಬ್ರಾಹ್ಮಣರಿಗೆ ಮಾಡಿಸಬೇಕು । ಅಭಾವದಲ್ಲಿ ೫೦ ಅಥವಾ ಅದರ ಅಭಾವದಲ್ಲಿ ೧೦ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು ॥

ಸರ್ವಶಾಂತೇಶ್ಚ ಪಠನಂ ಬ್ರಾಹ್ಮಣೈರಾಶಿಷಂ ತಥಾ ।

ಗೃಹೀ ಕ್ಷಮಾಪಯೇದ್ವಿದ್ವಾನ್ ನಿರ್ಋತಿಃ ಪ್ರೀಯತಾಮಿತಿ ॥

ಎಲ್ಲಾ ಶಾಂತಿಮಂತ್ರಗಳ ಪಠಣವನ್ನು ಮಾಡಿ, ಬ್ರಾಹ್ಮಣರಿಂದ ಆಶೀರ್ವಾದವನ್ನು ಪಡೆದು । ಗೃಹಸ್ಥನಾದ ಯಜಮಾನನು ಅವರಲ್ಲಿ ಕ್ಷಮೆಯಾಚಿಸಿ, ನಿರ್ಋತಿ ದೇವನು ಸಂತುಷ್ಟನಾಗಲಿ ಎಂದು ಬ್ರಾಹ್ಮಣರಿಂದ ಆಶೀರ್ವಾದ ಪಡೆಯಬೇಕು ॥

ವಿಧಾನೇ ಚರಿತೇsಸ್ಮಿಂಸ್ತು ತತಃ ಶಾಂತಿರ್ಭವೇದ್ಧ್ರುವಮ್ ।

ಗಂಡಾಂತೇsಪ್ಯೇವ ಕರ್ತವ್ಯಂ ಪುಷ್ಯಾದ್ಯೇ ತದ್ವದೇವತು ॥

ಈರೀತಿ ವಿಧಿವತ್ತಾಗಿ ಮಾಡಿದರೆ, ಈ ಯಜಮಾನನಲ್ಲಿ ಶಾಂತಿಯು ಸ್ಥಿರವಾಗಿ ನೆಲೆಸುತ್ತದೆ । ಯಾವುದೇ ರೀತಿಯ ಆಪತ್ತು ಬಂದಾಗಲೂ(ಗಂಡ ಯೋಗವಿದ್ದಾಗಲೂ) ಮತ್ತು ಪುಷ್ಯಾದಿ ನಕ್ಷತ್ರಜನನಶಾಂತಿಗಳನ್ನೂ ಸಹಾ ಹೀಗೆಯೇ ಆಚರಿಸಬೇಕು ॥

ಮಾಸಾಷ್ಟಕೇ ದ್ವಾದಶಾಹೇ ಕುರ್ಯಾದ್ವಾ ಶಾಂತಿಮಾದರಾತ್ ।

ಇತ್ಯುಕ್ತಂ ಮನುನಾ ಸಮ್ಯಕ್ ಮೂಲಜಾತ ಹಿತಾಯ ಚ ॥

ಮಾತಾಪಿತ್ರೋರ್ಧನಸ್ಯಾಪಿ ಬಂಧೋಶ್ಚೋಕೋಪ ಶಾಂತಯೇ ।

ಹುಟ್ಟಿದ ೮ ನೇ ತಿಂಗಳಲ್ಲಿ ಅಥವಾ ೧೨ ನೇ ದಿನದಲ್ಲಿ ಈ ಶಾಂತಿಯನ್ನು ಶ್ರದ್ಧೆಯಿಂದ ಮಾಡಬೇಕು । ಈ ರೀತಿಯಾಗಿ ಮೂಲಾನಕ್ಷತ್ರದಲ್ಲಿ ಹುಟ್ಟುದ ಮಗುವಿನಿಂದ ಉಂಟಾಗುವ ದೋಷಗಳಿಗೆ ಮನುಮಹರ್ಷಿಗಳು ಈ ಶಾಂತಿಯನ್ನು ಹೇಳಿದ್ದಾರೆ । ಈ ಶಾಂತಿಯಿಂದ ತಂದೆತಾಯಿಗಳ ಹಾಗೂ ಸಂಪತ್ತಿನ ಹಾಗೂ ಬಂಧುಗಳ ದುಃಖ, ಕಷ್ಟಗಳು ಪರಿಹಾರವಾಗುತ್ತವೆ ॥

॥ ಇತಿ ಮನುಪ್ರೋಕ್ತ ಮೂಲನಕ್ಷತ್ರ ಜನನ ಶಾಂತಿವಿಧಿಃ ॥

* ಈ ಶಾಂತಿಯಲ್ಲಿ, ವಿಶೇಷವಾಗಿ ಬೇಕಾದ ವಸ್ತುಗಳು ಮತ್ತು ಮಂತ್ರಗಳು –

* ಕಲಶ, ವಸ್ತ್ರ, ಹಾಲುಬರುವ ಮರಗಳ ಚಿಗುರು(ಎಕ್ಕೆ, ಗೋಣಿ, ಅತ್ತಿ, ಬಸರಿ, ಅಲ, ಅರಳಿ), ೫ ರತ್ನಗಳು, ಮೂಲನಕ್ಷತ್ರ ದೇವತೆಯ ಪ್ರತಿಮೆ, ಕೆಂಪು ಅಥವಾ ಬಿಳಿಬಣ್ಣದ ಕಮಲ ಚಿತ್ರ, ವಿಷ್ಣುಕ್ರಾಂತಿ, ಸಹದೇವಿ, ತುಳಸಿ, ಶತಾವರೀ ಸಸ್ಯಗಳ ಪತ್ರೆಗಳು, ಕೆಂಪುಗಂಧ, ಕಪ್ಪು,ಬಿಳಿ ಹೂಗಳು, ಕುರಿಯ ಕೊಂಬು, ಹೆಂಡ, ಮೀನು, ಮಾಂಸ, ಅನ್ನ, ಸೈಂಧವ ಲವಣ ಮಿಶ್ರಿತಹಾಲು, ಸೈಂಧವಲವಣ ಮಿಶ್ರಿತ ಪಾಯಸ, ಚರು, ಎಳ್ಳು, ತುಪ್ಪದ ಪಾಯಸಾ, ಸಮಿತ್, ತುಪ್ಪ, ರುದ್ರಪ್ರತಿಮೆ, ಕಪ್ಪು ಎತ್ತು.

* ಷಡಂಗ ಸಹಿತ ೧೧/೮/೩/೧ ಸಲ ರುದ್ರಜಪ. ಆಶುಶ್ಶಿಶಾನೋ, ರಾಕ್ಷೋಘ್ನ, ತ್ರ್ಯಂಬಕ ಮಂತ್ರ ೧೦೦೮, ಪವಮಾನಮಂತ್ರ, ನಿರ್ಋತಿ ಮಂತ್ರ, ಮೂಲನಕ್ಷತ್ರದ ಮತ್ತು ಅದರ ಅಧಿ, ಪ್ರತ್ಯಧಿದೇವತೆಗಳಮಂತ್ರ, ದಿಕ್ಪಾಲಕರ ಮಂತ್ರ, ೨೪ ನಕ್ಷತ್ರದೇವತೆಗಳ ಮಂತ್ರ, ಮೋಷುಣ ಪರಾಪರ, ಯತ್ತೇದೇವೀ, ಕೃಣುಷ್ವಪಾಜ ೫ ಮಂತ್ರ, ಗಾಯತ್ರೀಮಂತ್ರ, ಜಾತವೇದಸೇ ೧ ಮಂತ್ರ, ಸೀರಾಯುಂಜಂತಿ, ತಾಮಗ್ನಿವರ್ಣಾಂ, ವಾಸ್ತು, ಅಗ್ನಿ, ಕ್ಷೇತ್ರಪಾಲ, ಅಗ್ನೇನಯ, ಕ್ಷೇತ್ರಸ್ಯಪತೇ, ಗಣಾನಾಂ ತ್ವಾ, ಶ್ರೀಸೂಕ್ತ, ತ್ವಂನಸ್ಸೋಮ, ಯಾ ತೇ ರುದ್ರ, ಸಮುದ್ರಾದೂರ್ಮಿ, ಪೂರ್ಣಾದರ್ವಿಪರಾ, ಸಪ್ತ ತೇ ಅಗ್ನೇ, ಅಕ್ಷ್ಣೀಭ್ಯಾಂ, ಆಪೋಹಿಷ್ಠಾ, ಆಪ ಇದ್ವಾ ಉ, ಸಹಸ್ರಾಕ್ಷ(ಋಗ್ವೇದ), ದೇವಸ್ಯ ತ್ವಾ, ಶಿವಸಂಕಲ್ಪ, ಪುರುಷಸೂಕ್ತ.

* ದೋಷಕ್ಕೆ ತಕ್ಕಂತೆ, ಜಪ/ಹೋಮಗಳ ಸಂಖ್ಯೆ ಇರುತ್ತದೆ.

****

೨. ಅಥ ಏಕನಕ್ಷತ್ರ ಜನನ ಶಾಂತಿಃ

ಅಥ ಶೌನಕಃ

ಏಕಸ್ಮಿನ್ನೇವ ನಕ್ಷತ್ರೇ ಭ್ರಾತ್ರೋರ್ವಾ ಪಿತೃ ಪುತ್ರಯೋಃ ।

ಪ್ರಸೂತಿಶ್ಚೇತ್ತಯೋರ್ಮೃತ್ಯುಃ ಭವೇದೇಕಸ್ಯ ನಿಶ್ಚಯಃ ॥

ಅಣ್ಣತಮ್ಮ ಅಥವಾ ಅಕ್ಕತಂಗಿ ಅಥವಾ ತಂದೆಮಕ್ಕಳಾಗಲೀ । ಒಂದೇ ನಕ್ಷತ್ರದಲ್ಲಿ ಹುಟ್ಟಿದರೆ, ಒಬ್ಬರು ಸಾಯುವುದು ನಿಶ್ಚಯ ॥

ಶೌನಕೋಽಹಂ ಪ್ರವಕ್ಷ್ಯಾಮಿ ನಕ್ಷತ್ರೇಕಸ್ಯ ಶಾಂತಿಕಂ ।

ಮಾತೃನಕ್ಷತ್ರ ಜಾತಸ್ಯ ಪಿತ್ರರಿಷ್ಟಂ ತಥೈವ ಚ ॥

ಶೌನಕಋಷಿಯಾದ ನಾನು ಏಕನಕ್ಷತ್ರ ಜನನ ದೋಷವನ್ನೂ ಮತ್ತು ಶಾಂತಿಯನ್ನೂ ಹೇಳುತ್ತೇನೆ । ತಾಯಿಯ ನಕ್ಷತ್ರದಲ್ಲಿ ಹುಟ್ಟಿದರೆ, ತಂದೆಗೆ ಅರಿಷ್ಟವೂ ಹಾಗೆಯೇ ॥

ಪಿತೃನಕ್ಷತ್ರ ಜಾತಸ್ಯ ಪಿತ್ರರಿಷ್ಟಂ ಭವೇದ್ಧ್ರುವಂ ।

ತನ್ನಕ್ಷತ್ರೇ ಪಾದಯುಕ್ತೇ ತತ್ರ ಜಾತಂ ಶಿಶುಂ ತ್ಯಜೇತ್ ॥

ತಂದೆಯ ನಕ್ಷತ್ರದಲ್ಲಿ ಹುಟ್ಟಿದರೂ, ತಂದೆಗೇ ಕೆಟ್ಟವಾಗುವುದು । ಒಂದೇ ನಕ್ಷತ್ರದಲ್ಲಿ, ಒಂದೇ ಪಾದದಲ್ಲಿ ಹುಟ್ಟಿದ ಮಗುವನ್ನು ತ್ಯಜಿಸಬೇಕು ॥

ತಸ್ಯ ನಕ್ಷತ್ರ ಜಾತಸ್ಯ ನ ಶ್ರೋತವ್ಯೋ ಧ್ವನಿಃ ಪಿತುಃ ।

ಜಾತಸ್ಯ ದ್ವಾದಶಾಹೇ ತು ಜನ್ಮರ್ಕ್ಷೇ ವಾ ಶುಭೇ ದಿನೇ ॥

ಆ ಪಾದದಲ್ಲಿ ಹುಟ್ಟಿದ ಮಗುವಿನ ಧ್ವನಿಯನ್ನೂ ಕೂಡ ತಂದೆಯು ಕೇಳಬಾರದು । ಹುಟ್ಟಿದ ೧೨ ನೇ ದಿನ ಅಥವಾ ಆ ನಕ್ಷತ್ರದ ದಿನ ಅಥವಾ ಪಂಚಾಂಗಶುದ್ಧಿಯಿರುವ ಒಳ್ಳೆಯದಿನದಲ್ಲಿ ॥

ಗೋಮುಖಿಪ್ರಸವಂ ಕುರ್ಯಾತ್ ಗೋದಾನಂ ಚ ತತಃ ಪರಂ ।

ಸರ್ವಾರಿಷ್ಟ ವಿನಾಶಾಯ ಗೋಮುಖಿಪ್ರಸವೋ ಭವೇತ್ ॥

ಗೋಮುಖಿಪ್ರಸವ ಶಾಂತಿಯನ್ನೂ ಮತ್ತೂ ಗೋದಾನವನ್ನೂ ಕೂಡ ಮಾಡಬೇಕು । ಎಲ್ಲಾ ಪೀಡೆಗಳ ನಾಶಕ್ಕಾಗಿ ಗೋಮುಖಿಪ್ರಸವ ಶಾಂತಿಯನ್ನು ಮಾಡಲೇಬೇಕು ॥

ಅಥಾತಸ್ಸಂಪ್ರವಕ್ಷ್ಯಾಮಿ ಶಾಂತಿಕರ್ಮ ವಿಧಾನತಃ ।

ಗೃಹಸ್ಯೈಶಾನ ದಿಗ್ಭಾಗೇ ಹೋಮದೇಶಂ ಪ್ರಕಲ್ಪಯೇತ್ ॥

ಆದ್ದರಿಂದ ಆ ಶಾಂತಿಕರ್ಮದ ಕ್ರಮವನ್ನು ಹೇಳುತ್ತೇನೆ । ಮನೆಯ ಈಶಾನ್ಯದಲ್ಲಿ, ನೆಲವನ್ನು ಸ್ವಚ್ಛಗೊಳಿಸಿ, ಹೋಮಕುಂಡವನ್ನು ಸ್ಥಾಪಿಸಬೇಕು ॥

ತಸ್ಮಾದೀಶಾನ ದಿಗ್ಭಾಗೇ ಗೋಮಯಾಲೇಪಿತೇ ಶುಭೇ ।

ವ್ರೀಹಿರಾಶಿಂ ಚ ನಿಕ್ಷಿಪ್ಯ ಸ್ಥಾಪಯೇದರ್ವಣಂ ಘಟಂ ॥

ಅದರ ಈಶಾನ್ಯದಲ್ಲಿ, ಸಗಣಿಯಿಂದ ನೆಲವನ್ನು ಸಾರಿಸಿ । ಅಕ್ಕಿಯರಾಶಿಯನ್ನು ಹಾಕಿ, ಅದರಮೇಲೆ ಒಳ್ಳೆಯ ಕಲಶಗಳನ್ನು ಇಡಬೇಕು ॥

ಆಚಾರ್ಯಂ ವರಯೇತ್ತತ್ರ ಶಾಂತಿಕರ್ಮಣಿ ಕೋವಿದಂ ।

ಪುಣ್ಯಾಹಂ ವಾಚಯಿತ್ವಾ ತು ನವಗ್ರಹ ಪುರಸ್ಸರಂ ॥

ಈ ಶಾಂತಿಕರ್ಮವನ್ನು ತಿಳಿದಿರುವ ಪುರೋಹಿತರನ್ನು ಆಚಾರ್ಯಸ್ಥಾನಕ್ಕೆ ಆಹ್ವಾನಿಸಬೇಕು । ಪುಣ್ಯಾಹವಾಚನ ಮಾಡಿ, ನವಗ್ರಹಗಳನ್ನು ಸ್ಥಾಪಿಸಿ, ಆರಾಧಿಸಬೇಕು ॥

ಕುಂಭದ್ವಯಂ ಚ ನಿಕ್ಷಿಪ್ಯ ಪೂರಯೇನ್ನಿರ್ಮಲೋದಕಂ ।

ಪಂಚಗವ್ಯಂ ಪಂಚರತ್ನಂ ಪಂಚತ್ವಕ್ಪಂಚ ಪಲ್ಲವಾನ್ ॥

೨ ಕಲಶಗಳನ್ನು ಸ್ಥಾಪಿಸಿ, ಶುದ್ಧವಾದ ನೀರನ್ನು ತುಂಬಿಸಬೇಕು । ಆ ನೀರಿಗೇ, ಪಂಚಗವ್ಯ – ಪಂಚರತ್ನ – ಪಂಚತ್ವಕ್(ತೊಗಟೆ/ಬೇರು) – ಪಂಚಪಲ್ಲವ(ಚಿಗುರುಎಲೆ)ಗಳನ್ನೂ ಹಾಕಬೇಕು ॥

ಕುಶಕೂರ್ಚಂ ಚ ನಿಕ್ಷಿಪ್ಯ ಮೃದೌಷಧಿ ವಿಧಾನತಃ ।

ತದೃಕ್ಷದೇವತಾರೂಪಾಂ ಪ್ರತಿಮಾಂ ಕಾರಯೇದ್ಬುಧಃ ॥

ಹಾಗೆಯೇ, ದರ್ಭೆಯಕೂರ್ಚ – ಔಷಧಿಯುಕ್ತ ಮಣ್ಣನ್ನೂ ಹಾಕಬೇಕು । ಆ ನಕ್ಷತ್ರದೇವತೆಯ ಪ್ರತಿಮೆಯನ್ನೂ ತಿಳಿದವರು ಇಡುತ್ತಾರೆ ॥

ನಿಷ್ಕಮಾತ್ರಸುವರ್ಣೇನ ಪಾದೇನಾಥ ಸ್ವಶಕ್ತಿತಃ ।

ಪ್ರತಿಮಾಂ ಕಾರಯಿತ್ವಾ ತು ಯಜಮಾನಸ್ತು ಋತ್ವಿಜಾಃ ॥

ಸಾಮರ್ಥ್ಯವಿದ್ದಲ್ಲಿ, ನಿಷ್ಕ ಅಳತೆಯ(೧ ತೊಲ) ಚಿನ್ನದಿಂದ ಪ್ರತಿಮೆಯನ್ನು ಮಾಡಿಸಬೇಕು । ನಂತರ ಋತ್ವಿಜರನ್ನು ಯಜಮಾನನು ಆಹ್ವಾನಿಸಬೇಕು ॥

ಧಾನ್ಯೋಪರಿ ನ್ಯಸೇತ್ಪಾತ್ರಂ ವಸ್ತ್ರಯುಗ್ಮೇನ ವೇಷ್ಟಯೇತ್ ।

ತನ್ನಕ್ಷತ್ರೋಕ್ತ ಮಂತ್ರೇಣ ಅರ್ಚಯೇತ್ಕಲಶೋಪರಿ ॥

ಧಾನ್ಯಗಳಮೇಲೆ ಸ್ಥಾಪಿಸಿರುವ ಕಲಶಗಳನ್ನು, ವಸ್ತ್ರಗಳಿಂದ ಸುತ್ತಬೇಕು । ಆ ನಕ್ಷತ್ರದ ಮಂತ್ರಗಳಿಂದ ದೇವತೆಯನ್ನು ಕಲಶದಲ್ಲಿ ಆವಾಹಿಸಿ, ಪೂಜಿಸಬೇಕು ॥

ಉಪಚಾರೈಷ್ಷೋಡಶಭಿಃ ಜಪೇತ್ತಲ್ಲಿಂಗ ಮಂತ್ರಕಂ ।

ತ್ರಯಂಬಕೇನ ಮಂತ್ರೇಣ ರುದ್ರಕುಂಭಂ ಸ್ಪೃಶನ್ ಜಪೇತ್ ॥

ಆ ನಕ್ಷತ್ರದ ಮಂತ್ರದಿಂದ ಷೋಡಷೋಪಚಾರಗಳನ್ನು ನಡೆಸಬೇಕು । ತ್ರ್ಯಂಬಕಮಂತ್ರದಿಂದ ಒಂದುಕಲಶಕ್ಕೆ ರುದ್ರನನ್ನು ಆವಾಹಿಸಬೇಕು ॥

ಕುಂಭಸ್ಯ ಪಶ್ಚಿಮೇದೇಶೇ ಸ್ಥಂಡಿಲೈಸ್ಸಮಲಂಕೃತೇ ।

ಅನ್ವಾಧಾನಾದಿಕಂ ಕರ್ಮ ಅಗ್ನಿಮುಖಾಂತಮಾಚರೇತ್ ॥

ಕಲಶಗಳ ಪಶ್ಚಿಮಭಾಗದಲ್ಲಿ, ಹೋಮಕುಂಡವನ್ನು ಸ್ಥಾಪಿಸಿ, ಅಲಂಕಾರಾದಿಗಳನ್ನು ಮಾಡಿ । ಅನ್ವಾಧಾನಾದಿ, ಅಗ್ನಿಮುಖಾಂತ ಪರ್ಯಂತವಾಗಿ ಪ್ರಯೋಗವನ್ನು ಮಾಡಬೇಕು ॥

ತನ್ನಕ್ಷತ್ರೋಕ್ತಮಂತ್ರೇಣ ಸಮಿದಾಜ್ಯಚರೂನ್ ಹುವೇತ್ ।

ಅಷ್ಟೋತ್ತರ ಸಹಸ್ರಂ ತು ಅಷ್ಟೋತ್ತರಶತಂ ತು ವಾ ॥

ಆ ನಕ್ಷತ್ರದ ಮಂತ್ರಗಳಿಂದ, ಸಮಿತ್–ಆಜ್ಯ–ಚರುದ್ರವ್ಯಗಳಿಂದ । ೧೦೦೮ ಅಥವಾ ೧೦೮ ಸಂಖ್ಯೆಯಲ್ಲಿ ಹೋಮಮಾಡಬೇಕು ॥

ಮೃತ್ಯುಂಜಯೇನ ಮಂತ್ರೇಣ ತಿಲಮಷ್ಟೋತ್ತರಂ ಶತಂ ।

ಗಾಯತ್ರ್ಯಾ ಚ ಹುವೇತ್ತತ್ರ ದೂರ್ವಾಶ್ಚ ಶತಸಂಖ್ಯಯಾ ॥

ಮೃತ್ಯುಂಜಯ ಮಂತ್ರದಿಂದ, ೧೦೮ ಸಂಖ್ಯೆಯಲ್ಲಿ, ಎಳ್ಳಿನಹೋಮವನ್ನೂ । ಮತ್ತೂ ಗಾಯತ್ರೀ ಮಂತ್ರದಿಂದ, ೧೦೮ ಸಂಖ್ಯೆಯಲ್ಲಿ, ದೂರ್ವಾಹೋಮವನ್ನೂ ಮಾಡುವುದು ॥

ಅಷ್ಟಾವಿಂಶತಿಮಷ್ಟೌ ವಾ ಹೋಮಂ ಕುರ್ಯಾತ್ ವಿಧಾನತಃ ।

ತತಸ್ಸ್ವಿಷ್ಟಕೃತಂ ಹುತ್ವಾ ಹೋಮಶೇಷಂ ಸಮಾಪಯೇತ್ ॥

ಅಥವಾ ೨೮ ಸಂಖ್ಯೆಯಿಂದಲೂ, ಈ ಹೋಮಗಳನ್ನು ಮಾಡಬಹುದು । ನಂತರ ಸ್ವಿಷ್ಟಕೃತ್ ಮುಂತಾದ ಪ್ರಯೋಗಗಳನ್ನು ಮಾಡಿ ಹೋಮವನ್ನು ಸಮಾಪ್ತಿಗೊಳಿಸಬೇಕು ॥

ಭದ್ರಾಸನೋಪವಿಷ್ಟಸ್ಯ ಅಭಿಷೇಕಂ ಸಮಾಚರೇತ್ ।

ಆಚಾರ್ಯೋಮೂಲಮಂತ್ರೇಣ ಋತ್ವಿಗ್ಭಿಸ್ಸಹ ಮಾರ್ಜಯೇತ್ ॥

ಸರಿಯಾದ ಆಸನದಲ್ಲಿ, ಮಗುವನ್ನು ಕೂರಿಸಿ, ಕಲಶಗಳ ನೀರಿನಿಂದ । ಆಚಾರ್ಯರು ಮತ್ತು ಋತ್ವಿಜರು ಆ ನಕ್ಷತ್ರದ ಮಂತ್ರಗಳಿಂದ ಸ್ನಾನಮಾಡಿಸಬೇಕು ॥

ಆಪ್ಯೋಹಿಷ್ಠೇತಿ ಸೂಕ್ತೇನ ಅಕ್ಷ್ಣೋಭ್ಯಾಮಿತಿ ಸೂಕ್ತತಃ ।

ತನ್ನಕ್ಷತ್ರೋಕ್ತ ಮಂತ್ರೇಣ ಪಾವಮಾನೀಭಿರೇವ ಚ ॥

ಹಾಗೆಯೇ, ಆಪ್ಯೋಹಿಷ್ಠಾ - ಅಕ್ಷ್ಣೋಭ್ಯಾಂ । ಆಯಾ ನಕ್ಷತ್ರ ಮಂತ್ರದಿಂದಲೂ, ಪವಮಾನಮಂತ್ರಗಳಿಂದಲೂ ಹಾಗೂ ॥

ಸಮುದ್ರಜ್ಯೇಷ್ಠಾ ಇತ್ಯಾದಿಮಂತ್ರೈಶ್ಚೈವಾಭಿಷೇಚಯೇತ್ ।

ಅಭಿಷೇಕಾಪ್ಲುತಂ ವಸ್ತ್ರಂ ಆಚಾರ್ಯಾಯ ನಿವೇದಯೇತ್ ॥

ಸಮುದ್ರಜ್ಯೇಷ್ಠಾ ಇತ್ಯಾದಿ ಮಂತ್ರಗಳಿಂದಲೂ ಸಹ ಮಗುವಿಗೆ ಅಭಿಷೇಕಮಾಡಬೇಕು । ಅಭಿಷೇಕದಸಮಯದಲ್ಲಿ ಮಗುವು ಉಟ್ಟಿರುವ ಒದ್ದೆಯಾದ ಆ ಬಟ್ಟೆಗಳನ್ನು ಆಚಾರ್ಯರಿಗೆ ಕೊಡಬೇಕು ॥

ಆಚಾರ್ಯಾಯ ಚ ಗಾಂ ದದ್ಯಾತ್ ಸುಶೀಲಾಂ ಚ ಪಯಸ್ವಿನೀಮ್ ।

ಅತ್ರೋಪಕರಣಂ ಸರ್ವಮಾಚಾರ್ಯಾಯ ನಿವೇದಯೇತ್ ॥

ಚೆನ್ನಾಗಿ ಹಾಲುಕೊಡುವ, ಸಾಧುವಾದ ಹಸುವನ್ನೂ । ಮತ್ತೂ ಅಲ್ಲಿ ಉಪಯೋಗಿಸಿರುವ ಅಕ್ಕಿ, ಕಾಯಿ ಮುಂತಾದ ಎಲ್ಲವನ್ನೂ ಆಚಾರ್ಯರಿಗೆ ಕೊಡಬೇಕು ॥

ಯದಿ ಶಾಂತಿಂ ನ ಕುರ್ಯಾಚ್ಚೇತ್ ಷಣ್ಮಾಸಾನ್ಮೃತ್ಯುಮಾಪ್ನುಯಾತ್ ।

ತಸ್ಮಾತ್ಸರ್ವ ಪ್ರಯತ್ನೇನ ಶಾಂತಿಂ ಕುರ್ಯಾದ್ಯಥಾವಿಧಿ ॥

ಬ್ರಾಹ್ಮಣಾನ್ಭೋಜಯೇತ್ ಪಶ್ಚಾತ್ ಆಶಿಷೋ ವಾಚಯೇತ್ತತಃ ॥

ಈ ರೀತಿಯಾಗಿ ಶಾಂತಿಯನ್ನು ಮಾಡಿಕೊಳ್ಳದಿದ್ದರೆ, ೬ ತಿಂಗಳಲ್ಲಿ ಕುಟುಂಬದಲ್ಲಿ ಸಾವುಂಟಾಗುತ್ತದೆ । ಹಾಗಾಗಿ ಸರ್ವಪ್ರಯತ್ನದಿಂದ ಈ ಶಾಂತಿಕರ್ಮವನ್ನು ವಿಧಿಯಂತೆ ಸರಿಯಾಗಿ ಮಾಡಬೇಕು ॥ ಕರ್ಮದ ಕೊನೆಯಲ್ಲಿ ಬ್ರಾಹ್ಮಣರಿಗೆ ಊಟಹಾಕಿ, ಅವರಿಂದ ಆಶೀರ್ವಾದ ಪಡೆಯಬೇಕು ॥

॥ ಇತಿ ಶೌನಕೀಯೇ ಏಕನಕ್ಷತ್ರ ಜನನ ಶಾಂತಿಃ ॥

* ಈ ಶಾಂತಿಯಲ್ಲಿ, ವಿಶೇಷವಾಗಿ ಬೇಕಾದ ವಸ್ತುಗಳು ಮತ್ತು ಮಂತ್ರಗಳು –

* ಗೋದಾನ, ಗೋ ಪ್ರಸವ ಶಾಂತಿ, ಕಲಶಗಳು, ನಕ್ಷತ್ರದೇವತೆಯ ಪ್ರತಿಮೆ, ಸಗಣಿ, ಪಂಚಗವ್ಯ, ಪಂಚರತ್ನ, ವನಸ್ಪತಿಗಳು, ಮೃತ್ತಿಕೆ, ಸಮಿತ್, ಚರು, ತುಪ್ಪ, ಚಿನ್ನ, ಎಳ್ಳು, ದೂರ್ವೆ, ವಸ್ತ್ರ, ದಕ್ಷಿಣಾದಿ ಅನ್ನದಾನ.

* ಗಾಯತ್ರೀಮಂತ್ರ, ತ್ರ್ಯಂಬಕಮಂತ್ರ, ನವಗ್ರಹಮಂತ್ರ, ನಕ್ಷತ್ರಮಂತ್ರ, ಅಬ್ದೇವತಾಮಂತ್ರ, ಅಶ್ವಿನೀಭ್ಯಾಂ, ಸಮುದ್ರಜ್ಯೇಷ್ಠಾ.

****

೩. ಗೋಮುಖಿ ಜನನ ಶಾಂತಿಃ

ಅಥ ಗರ್ಗಃ

ಪ್ರಣಿಪತ್ಯ ರವಿಂ ವಕ್ಷ್ಯೇ ಪ್ರಾಯಶ್ಚಿತ್ತಮನುಸ್ಮರನ್ ।

ಸರ್ವಾರಿಷ್ಟ ವಿನಾಶಾಯ ಯದುಕ್ತಂ ಜ್ಯೌತಿಷಾರ್ಣವೇ ॥

ಗ್ರಹಗಳ ನಾಯಕನಾದ ರವಿಯನ್ನು ನಮಿಸಿ, ಪ್ರಾಯಶ್ಚಿತ್ತಸ್ವರೂಪವಾದ । ಸರ್ವ ಅನಿಷ್ಟಗಳ ನಿವಾರಣೆಗಾಗಿ ಜ್ಯೋತಿಷಾರ್ಣವವೆಂಬ ಗ್ರಂಥದಲ್ಲಿ ಹೇಳಿರುವಂತೆ ॥

ಮಾತ್ಸಾರಿಷ್ಟೇ ಪಿತ್ಸಾರಿಷ್ಟೇ ಆತ್ಮಾರಿಷ್ಟೇ ತಥೈವ ಚ ।

ಪ್ರಾಯಶ್ಚಿತ್ತಂ ತದಾಕುರ್ಯಾತ್ ತತ್ತದ್ದೋಷಸ್ಯ ಶಾಂತಯೇ ॥

ತಾಯಿ, ತಂದೆ ಮತ್ತು ನನಗೂ ಕೂಡ ಅರಿಷ್ಟ ಉಂಟಾಗುವ । ಯಾವ ದೋಷವಿದೆಯೋ ಅದರ ಪರಿಹಾರಕ್ಕಾಗಿ, ಪ್ರಾಯಶ್ಚಿತ್ತವಾಗಿ ಶಾಂತಿಯನ್ನು ಮಾಡಬೇಕು ॥

ಪೂಷಾಶ್ವಿನೋರ್ಗುರೌ ಸರ್ಪ ಮಖಾ ಚಿತ್ರೇಂದು ಮೂಲಕೇ ।

ಏಷು ಋಕ್ಷೇಷು ಜಾತಸ್ಯ ಕುರ್ಯಾದ್ಗೋಜನನಂ ತಥಾ ॥

ರೇವತಿ – ಅಶ್ವಿನಿ – ಪುಷ್ಯ – ಆಶ್ಲೇಷಾ – ಮಖ – ಚಿತ್ರಾ – ಮೃಗಶಿರಾ – ಮೂಲ । ಈ ನಕ್ಷತ್ರಗಳಲ್ಲಿ ಹುಟ್ಟಿರುವ ಮಕ್ಕಳಿಗೆ ಈ ಶಾಂತಿಯನ್ನು ಮಾಡಬೇಕು ॥

ಜನ್ಮರ್ಕ್ಷೇ ವಾ ತ್ರಿಜನ್ಮರ್ಕ್ಷೇ ಶುಭೇವಾರೇ ಶುಭೇದಿನೇ ।

ಕೃತ್ವಾಭ್ಯಂಗಾದಿಕಂ ಸರ್ವಂ ಗೃಹಾಲಂಕಾರ ಪೂರ್ವಕಂ ॥

ಗೋಮುಖಿ ಜನನವೆಂಬ ಈ ಶಾಂತಿಯನ್ನು ಹುಟ್ಟಿದ ಆ ನಕ್ಷತ್ರದಲ್ಲಿ ಅಥವಾ ಪಂಚಾಂಗ ಶುದ್ಧಿಯಿರುವ ದಿನಗಳಲ್ಲಿ । ಮಂಗಳಸ್ನಾನ ಮಾಡಿಕೊಂಡು, ಮನೆಯನ್ನು ಅಲಂಕರಿಸಿ ॥

ಗೋಮಯೇನೋಪಲಿಪ್ಯಾಥ ಗೃಹಸ್ಯೈಶಾನಭಾಗಕೇ ।

ಪಂಕಜಂ ಕರ್ಣಿಕಾಯುಕ್ತಂ ರಜೋಭಿಶ್ಚ್ವೇತವರ್ಣಕೈಃ ॥

ಸಗಣಿಯಿಂದ ಮನೆಯನ್ನು ಸಾರಿಸಿ, ಮನೆಯ ಈಶಾನ್ಯಭಾಗದಲ್ಲಿ । ಬಿಳಿ ಹಾಗೂ ಹಳದಿಬಣ್ಣದ, ಧೂಳಿನಿಂದ ಕೂಡಿರುವ ಕುಮುದ, ಶಂಖಪುಷ್ಪಗಳನ್ನು ಹಾಗೂ ॥

व्रीहीन्संस्तत्र विनिक्षिप्य यथावित्तानुसारतः ।

नवशूर्पन्तु तन्मध्ये रक्तवस्त्रं प्रसारयेत् ॥

ತನ್ನ ಸಂಪತ್ತಿಗೆ ತಕ್ಕಂತೆ ಭತ್ತವನ್ನು ಹರಡಬೇಕು । ಹೊಸದಾದ ಮೊರವನ್ನು ಕೆಂಪುಬಟ್ಟೆಯಿಂದ ಅಲಂಕರಿಸಬೇಕು ॥

स्थापयित्वा शिशुं तत्र पुनस्सूत्रेण वेष्टयेत् ।

प्राङ्मस्तकमवाक्पादं तिलगर्भगतं शिशुम् ॥

ಮಗುವನ್ನು ಅದರಲ್ಲಿ ಮಲಗಿಸಿ, ಪುನಃ ಬಟ್ಟೆಯನ್ನು ಹೊದಿಸಬೇಕು । ಪೂರ್ವಕ್ಕೆ ತಲೆ, ಪಶ್ಚಿಮಕ್ಕೆ ಕಾಲುಗಳಿರುವಂತೆ ಮಗುವನ್ನು ಮಲಗಿಸಬೇಕು ॥ ಗೋವಿನ ಮುಖವನ್ನು ಆ ಮಗುವಿಗೆ ತೋರಿಸಿ, ಅದರ ಮುಖದಿಂದ ಈ ಮಗುವು ಹುಟ್ಟಿತೆಂದು ಭಾವಿಸಬೇಕು । ವಿಷ್ಣುರ್ಯೋನಿಂ...ಎಂಬ ಸೂಕ್ತಮಂತ್ರಗಳಿಂದ ಆ ಮಗುವನ್ನು ಹಸುವಿನ ಅಡಿಯಲ್ಲಿ ಮಲಗಿಸಬೇಕು ॥

गवामंगेषु मंत्रेण गवामंगेषु संस्पृशेत् ।

विष्णोश्श्रैष्ठ्येन मंत्रेण गो प्रसूतं तु बालकं ॥

ಗವಾಮಂಗೇಷು... ಮಂತ್ರದಿಂದ, ಗೋವಿನ ಅಂಗಾಂಗಗಳಿಗೆಲ್ಲಾ ಮಗುವನ್ನು ಮುಟ್ಟಿಸಬೇಕು । ವಿಷ್ಣೋಶ್ಶ್ರೈಷ್ಠೇನ... ಮಂತ್ರವನ್ನು ಹೇಳಿ, ಗೋವಿನಿಂದಲೇ ಈ ಮಗುವು ಹುಟ್ಟಿತೆಂದು ಭಾವಿಸಬೇಕು ॥

आचार्यस्तं समादाय पश्चान्मात्रे ददेत् पिता ।

माता जघन्यभागस्था शिशुमानीय गोमुखात् ॥

ಆಚಾರ್ಯರು ಮಗುವನ್ನು ಎತ್ತಿಕೊಂಡು, ಆಮೇಲೆ ತಂದೆಯೂ ಎತ್ತಿಕೊಂಡು, ತನ್ನ ಹೆಂಡತಿಗೆ ಕೊಡಬೇಕು । ತಾಯಿಯು, ಮಗುವನ್ನು ಗೋವಿನ ತೊಡೆಯ ಭಾಗದಿಂದ, ಬಾಯಿಯವರೆಗೆ ತಗುಲಿಸಿಕೊಂಡು ಹೋಗಬೇಕು ॥

ततः पित्रे तदा दद्यात् ततो मात्रे प्रदापयेत् ।

वस्त्रेस्थाप्य पिताऽस्याथ पुत्रस्य मुखमीक्षयेत् ॥

ನಂತರ, ತಂದೆಯ ಕೈಗೆ ಮಗುವನ್ನು ಕೊಡಬೇಕು । ತಂದೆಯು, ಹಾಸಿರುವ ಬಟ್ಟೆಯಮೇಲೆ ಮಲಗಿಸಿ, ತಂದೆತಾಯಿಯರು ಮಗುವಿನ ಮುಖವನ್ನು ನೋಡಬೇಕು ॥

ಗೋಮೂತ್ರಂ ಗೋಮಯಂ ಕ್ಷೀರಂ ದಧಿ ಸರ್ಪಿಶ್ಚ ಸಂಯುತಂ ।

ಆಪ್ಯೋಹಿಷ್ಠಾದಿಭಿರ್ಮಂತ್ರೈಃ ಅಭಿಷಿಂಚೇತ್ತತಶ್ಶಿಶುಂ ॥

ಪಂಚಗವ್ಯ ಮಂತ್ರಗಳಿಂದ, ಪಂಚಗವ್ಯಗಳನ್ನು । ಆಪ್ಯೋಹಿಷ್ಠಾದಿ ಅಭಿಷೇಕ ಮಂತ್ರಗಳಿಂದ ಅಭಿಷೇಕ ಮಾಡಬೇಕು ॥

ಮೂರ್ಧ್ನಿಚಾಘ್ರಾಯ ಸತ್ಪುತ್ರಂ ತನ್ಮಂತ್ರೇಣ ತದಾ ಪಿತಾ ।

ಅಂಗಾದಂಗಾತ್ಸಂಭವಸಿ ಹೃದಯಾದಧಿಜಾಯತೇ ॥

ಮಗುವಿನ ತಲೆಯನ್ನು ತಂದೆಯು । ಅಂಗಾದಂಗಾತ್...ಮಂತ್ರದಿಂದ ಮೂಸಬೇಕು ॥

ಆತ್ಮಾ ವೈ ಪುತ್ರನಾಮಾಸಿ ಸಜೀವ ಶರದಶ್ಶತಂ ।

ಮೂರ್ಧನಿ ತ್ರಿರವಘ್ರಾಯ ತಂ ಶಿಶುಂ ಸ್ಥಾಪಯೇತ್ತತಃ ॥

ಮತ್ತೇ, ಆತ್ಮಾ ವೈ... ಮಂತ್ರದಿಂದ । ೩ ಬಾರಿ ತಲೆಯನ್ನು ಮೂಸಿ, ನಂತರ ಮಲಗಿಸಬೇಕು ॥

ಪುಣ್ಯಾಹಂ ವಾಚಯೇತ್ ಪಶ್ಚಾತ್ ಬ್ರಾಹ್ಮಣೈರ್ವೇದಪಾರಗೈಃ ।

ದರಿದ್ರಾಯಾಥ ವಿಪ್ರಾಯ ತಾಂ ಗಾಂ ಚಾಭ್ಯರ್ಚ್ಯದಾಪಯೇತ್ ॥

ನಂತರ, ಬ್ರಾಹ್ಮಣರು ಪುಣ್ಯಾಹವಾಚನ ಮಂತ್ರಗಳಿಂದ. ಪುಣ್ಯಾಹಕಲಶದ ತೀರ್ಥವನ್ನು ಮಗು ಮತ್ತು ತಂದೆತಾಯಿಯರಿಗೆ ಪ್ರೋಕ್ಷಿಸಬೇಕು । ಬಳಿಕ ಬಡವನಾದ, ಸಾತ್ವಿಕನಾದ ಬ್ರಾಹ್ಮಣನಿಗೆ ಹಸುವನ್ನು ಪೂಜಿಸಿ, ದಾನಮಾಡಬೇಕು ॥

ಗೋ ವಸ್ತ್ರ ಸ್ವರ್ಣ ಧಾನ್ಯಾದಿ ದದ್ಯಾದರ್ಘಾದಿತಃ ಕ್ರಮಾತ್ ।

ಯಥಾಶಕ್ತಿ ಧನಂ ದದ್ಯಾತ್ ಬ್ರಾಹ್ಮಣೇಭ್ಯಸ್ತದಾ ಪಿತಾ ॥

ಜೊತೆಯಲ್ಲಿ, ವಸ್ತ್ರ–ಚಿನ್ನ–ಧಾನ್ಯಗಳನ್ನೂ ಕ್ರಮವಾಗಿ ಕೊಡುವುದು । ಮಿಕ್ಕ ಬ್ರಾಹ್ಮಣರಿಗೆ ಯಥಾಶಕ್ತಿ ದಕ್ಷಿಣೆ ಕೊಡಬೇಕು ॥

ತತೋ ಹೋಮಂ ಪ್ರಕುರ್ವೀತ ಸ್ವಸ್ವ ಶಾಖೋಕ್ತಮಾರ್ಗತಃ ।

ಉಲ್ಲೇಖನಾದಿಕಂ ಕೃತ್ವಾ ಮುಖಾಂತ ಕ್ರಮಮಾಚರೇತ್ ॥

ಆಮೇಲೆ, ತನ್ನ ಶಾಖೆಗೆ(ವೇದ) ಅನುಗುಣವಾಗಿ, ಹೋಮ ಮಾಡಬೇಕು । ರೇಖಾಕರಣವೇ ಮೊದಲಾಗಿ, ಮುಖಾಂತದವರೆಗೆ ಪ್ರಯೋಗವನ್ನು ಮಾಡುವುದು ॥

ಗೃಹಸ್ಯೈಶಾನದಿಗ್ಭಾಗೇ ಧಾನ್ಯೋಪರಿ ಶುಭಂ ಘಟಂ ।

ಪಂಚಗವ್ಯಂ ಘಟೇ ಸ್ಥಾಪ್ಯ ತಿಲಂ ತತ್ರ ವಿನಿಕ್ಷಿಪೇತ್ ॥

ಮನೆಯ ಈಶಾನ್ಯದಲ್ಲಿ, ಧಾನ್ಯಗಳಮೇಲೆ ಕಲಶವನ್ನು ಇಡಬೇಕು । ಆ ಕಲಶಕ್ಕೆ ನೀರು-ಪಂಚಗವ್ಯ-ಎಳ್ಳನ್ನು ಹಾಕಬೇಕು ॥

ಕ್ಷೀರದ್ರುಮಕಷಾಯಾಂಶ್ಚ ಪಂಚರತ್ನಾನಿ ನಿಕ್ಷಿಪೇತ್ ।

ವಸ್ತ್ರಯುಗ್ಮಂ ಚ ಸಂಸ್ಥಾಪ್ಯ ಗಂಧಾದಿಭಿರಥಾರ್ಚಯೇತ್ ॥

ಹಾಲುಬರುವ ೫ ಮರಗಳ ಚಿಗುರು, ಚೆಕ್ಕೆ ಮತ್ತು ೫ ರತ್ನಗಳನ್ನು ಹಾಕಬೇಕು । ಜೋಡಿವಸ್ತ್ರಗಳನ್ನು ಇಟ್ಟು, ಗಂಧಾದಿಗಳಿಂದ ಪೂಜಿಸಬೇಕು ॥

ವಿಷ್ಣುಂ ವರುಣಮಭ್ಯರ್ಚ್ಯ ಪ್ರತಿಮಾಯಾಂ ವಿಧಾನತಃ ।

ಯತ ಇಂದ್ರಾದಿಭಿರ್ಮಂತ್ರೈಃ ಕುಂಭಂ ಸ್ಪೃಷ್ಟ್ವಾऽಭಿಮಂತ್ರಯೇತ್ ॥

ಆ ಕಲಶಕ್ಕೆ ವಿಷ್ಣು-ವರುಣ-ಇಂದ್ರಾದಿ ಮಂತ್ರಗಳಿಂದ ಆಯಾಯಾ ದೇವತೆಗಳನ್ನು ಆವಾಹಿಸಿ ಪೂಜಿಸಬೇಕು ॥

ದಧಿ ಮಧ್ವಾಜ್ಯಯುಕ್ತೇನ ಹೋಮಂ ಕುರ್ಯಾದ್ವಿಧಾನತಃ ।

ಚರುಣೇತಿ ಶೇಷಃ -

ಆಪೋಹಿಷ್ಠೇತಿ ತಿಸೃಭಿಃ ಅಪ್ಸು ಮೇ ಸೋಮ ಇತ್ಯಪಿ ॥

ಮೊಸರು-ಜೇನುತುಪ್ಪ-ತುಪ್ಪಗಳನ್ನು ಹಾಕಿರುವ ಚರುವಿನಿಂದ ಹೋಮಿಸಬೇಕು ।

ಆಪೋಹಿಷ್ಠಾ..., ಎಂಬ ೩ ಮಂತ್ರಗಳು, ಅಪ್ಸು ಮೇ ಸೋಮ..., ಮಂತ್ರದಿಂದಲೂ ॥

ತದ್ವಿಷ್ಣೋರಿತಿ ಮಂತ್ರೇಣ ಅಕ್ಷೀಭ್ಯಾಮಿತಿ ಸೂಕ್ತತಃ ।

ಋಗ್ಭಿರಾಭಿಃ ಪ್ರತ್ಯೃಚಂ ಚ ಅಷ್ಟಾವಿಂಶತಿ ಸಂಖ್ಯಯಾ ॥

ತದ್ವಿಷ್ಣೋಃ – ಅಕ್ಷೀಭ್ಯಾಂ ಎಂಬ ಋಕ್‌ಗಳಿಂದ । ೨೮ ಸಂಖ್ಯೆಗಳಿಂದ ಹೋಮಿಸಬೇಕು ॥

ಅಶಕ್ತಶ್ಚಾಷ್ಟಸಂಖ್ಯಾ ವಾ ದಧಿ ಮಧ್ವಾಜ್ಯ ಸಂಯುತಂ ।

ಆದಿತ್ಯಾದಿ ಗ್ರಹಾಣಾಂ ಚ ಹೋಮಂ ಕುರ್ಯಾತ್ ಸಮಂತ್ರಕಂ ॥

ಅಶಕ್ತರಾದವರು, ೮ ಸಂಖ್ಯೆಗಳಲ್ಲಿ, ಮೊಸರು–ಜೇನುತುಪ್ಪ–ತುಪ್ಪಗಳಿಂದ । ನವಗ್ರಹಮಂತ್ರಗಳಿಂದ ಗ್ರಹಗಳಿಗೆ ಹೋಮಿಸಬೇಕು ॥

॥ ಇತಿ ಗೋಮುಖಿ ಜನನ ಶಾಂತಿಃ ॥

* ಈ ಶಾಂತಿಯಲ್ಲಿ ವಿಶೇಷವಾಗಿಬೇಕಾದ ವಸ್ತುಗಳು ಮತ್ತೂ ಮಂತ್ರಗಳು –

* ಕೆಂಪುಬಟ್ಟೆ, ಶಂಖಪುಷ್ಪ, ಮೊರ, ಹಸು, ಪಂಚಗವ್ಯ, ವಸ್ತ್ರ, ಚಿನ್ನ, ಧಾನ್ಯಗಳು, ಹಾಲುಬರುವ ೫ ಮರಗಳ ಚಿಗುರು + ತೊಗಟೆ, ಪಂಚರತ್ನ, ಕಲಶಕ್ಕೆ ವಸ್ತ್ರಗಳು, ಮೊಸರು, ಜೇನುತುಪ್ಪ, ತುಪ್ಪಗಳನ್ನು ಸೇರಿಸಿರುವ ಚರು ಹೋಮಕ್ಕೆ, ಗೋ, ವಸ್ತ್ರ, ಚಿನ್ನ, ಧಾನ್ಯ ದಾನಗಳು.

* ವಿಷ್ಣುರ್ಯೋನಿಂ ಸೂಕ್ತ, ಗವಾಮಂಗೇಷು ಶ್ಲೋಕ, ವಿಷ್ಣೋಶ್ರೇಷ್ಠೇನ ಮಂತ್ರ, ಪಂಚಗವ್ಯ ಮಂತ್ರ, ಆಪೋಹಿಷ್ಠಾದಿ ಆಬ್ದೇವತಾಮಂತ್ರ, ಅಂಗಾದಂಗಾತ್ ಮಂತ್ರ, ಆತ್ಮಾ ವೈ ಮಂತ್ರ, ಪುಣ್ಯಾಹ, ವಿಷ್ಣು, ವರುಣ, ಇಂದ್ರದೇವತೆಗಳನ್ನು ಆಯಾ ಮಂತ್ರಗಳಿಂದ ಆವಾಹನೆಮಾಡಬೇಕು, ಆಪೋಹಿಷ್ಠಾ ೩ ಮಂತ್ರ, ಅಪ್ಸು ಮೇ ಮಂತ್ರ, ತದ್ವಿಷ್ಣೋ, ಅಕ್ಷೀಭ್ಯಾಂ ಮತ್ತು ನವಗ್ರಹ ಮಂತ್ರಗಳು.

****

೪. ಆಶ್ಲೇಷಾ ನಕ್ಷತ್ರ ಜನನ ಶಾಂತಿಃ

ಅಥ ಮಾಧವೀಯ ಸಂಹಿತಾಯಾಂ

ಆಶ್ಲೇಷಾಯಾಂ ತು ಜಾತಾನಾಂ ಶಾಂತಿಂವಕ್ಷ್ಯಾಮ್ಯಶೇಷತಃ ।

ಜಾತಸ್ಯ ದ್ವಾದಶಾಹೇ ಚ ಶಾಂತಿಹೋಮಂ ಸಮಾಚರೇತ್ ॥

ಆಶ್ಲೇಷಾ ನಕ್ಷತ್ರದಲ್ಲಿ ಜನಿಸಿದವರ ಶಾಂತಿಯನ್ನು ಸಂಪೂರ್ಣವಾಗಿ ತಿಳಿಸುತ್ತೇನೆ । ಹುಟ್ಟಿದ ೧೨ ನೇ ದಿನ ಶಾಂತಿಯನ್ನು ಮಾಡಬೇಕು ॥

ಅಸಂಭವೇ ತು ಜನ್ಮರ್ಕ್ಷೇ ಅನ್ಯಸ್ಮಿನ್ವಾ ಶುಭೇದಿನೇ ।

ಸ್ನಾತೋಽಭ್ಯಂಗಾದಿಭಿಸ್ತಸ್ಮಿನ್ ವರಯೇದೃತ್ವಿಗಾದಿಕಾನ್ ॥

ಆಗದಿದ್ದರೆ, ಆ ನಕ್ಷತ್ರವಿರುವ ಬೇರೇದಿನದಲ್ಲಾದರೂ ಮಾಡಬಹುದು । ಮಂಗಳಸ್ನಾನವನ್ನು ಮಾಡಿ, ಋತ್ವಿಜರನ್ನು ಆಹ್ವಾನಿಸಬೇಕು ॥

ವಿಭವೇ ಪಂಚ ಕುಂಭಾಂಸ್ತು ದ್ವಯಂ ವಾ ತದಲಾಭತಃ ।

ದೇವತಾಃಸ್ಥಾಪಯೇಚ್ಛೈಕಂ ಏಕಂ ರುದ್ರಾಭಿಮಂತ್ರಣೇ ॥

ಶಕ್ತಿಯಿದ್ದರೆ, ೫ ಕಲಶಗಳನ್ನು ಇಲ್ಲದಿದ್ದರೆ, ೨ ಕಲಶಗಳನ್ನಾದರೂ ಸ್ಥಾಪಿಸಬೇಕು । ಒಂದನ್ನು ನಕ್ಷತ್ರದೇವತೆಗೂ ಇನ್ನೊಂದನ್ನು ರುದ್ರನಿಗೂ ಇಡಬೇಕು ॥

ಮೂಲಕ್ಷೋಕ್ತ ಪ್ರಕಾರೇಣ ಕುಂಭೇ ನಿಕ್ಷಿಪ್ಯ ಪೂಜಯೇತ್ ।

ಗೋಮಯಾಲೇಪಿತೇ ದೇಶೇ ಧ್ಯಾತ್ವಾದ್ಯೈಃ ಪರಿಶೋಭಿತೇ ॥

ಮೂಲನಕ್ಷತ್ರದ ಶಾಂತಿಯಲ್ಲಿ ಹೇಳಿರುವಂತೆ, ಪ್ರತಿಮೆಗಳನ್ನು ಕಲಶಗಳೊಂದಿಗೆ ಇಟ್ಟು, ಪೂಜಿಸಬೇಕು । ಸಗಣಿಯಿಂದ ಸಾರಿಸಿದ ನೆಲದಲ್ಲಿ ದೇವತಾ ಆರಾಧನಾ ಜಾಗವನ್ನು ಸಿದ್ಧಮಾಡಿಕೊಳ್ಳಬೇಕು ॥

ಪಂಕಜಂ ಕಾರಯೇತ್ತತ್ರ ಚತುರ್ವಿಂಶತಿ ದಳಾನ್ವಿತಂ ।

ತಂಡುಲೈಃ ಕಾರಯೇದ್ಯದ್ವಾ ರಕ್ತ ಪೀತಸಿತಾಕ್ಷತೈಃ ॥

೨೪ ದಳಗಳಿಂದ ಕೂಡಿದ ಕಮಲದ ಚಿತ್ರವನ್ನು ನೆಲದಲ್ಲಿ ಬಿಡಿಸಬೇಕು । ಕೆಂಪು ಅಥವಾ ಹಳದಿ ಬಣ್ಣಗಳಿಂದ ಕೂಡಿರುವ ಅಕ್ಕಿಯಿಂದಲೂ(ಅಕ್ಷತೆ) (ಅಥವಾ ಹಿಟ್ಟು) ಬಿಡಿಸಬೇಕು ॥

ಕರ್ಣಿಕಾಯಾಂ ನ್ಯಸೇದ್ಧೀಮಾನ್ ಸ್ಥಾಪಯೇತ್ತೇಷು ಕುಂಭಕಂ ।

ಆ ಕಲಶೇಷ್ವಿತ್ಯನಯಾ ಕಲಶಸ್ಥಾಪನಂ ಶುಭಂ ॥

ಆ ಕಮಲದ ದಳಗಳ ಮೇಲೆ ಕಲಶಗಳನ್ನು ಇಡಬೇಕು । ಆ ಕಲಶೇಷು... ಎಂಬ ಮಂತ್ರದಿಂದ ಕಲಶವನ್ನು ಇಡಬೇಕು ॥

ಇಮಂ ಮೇ ಗಂಗೇ ಮಂತ್ರೇಣ ಪೂರಯೇತ್ತೀರ್ಥವಾರಿಣಾ ।

ಕುಂಭಂ ಚ ವಸ್ತ್ರ ಗಂಧಾದ್ಯೈಃ ತತ್ತನ್ಮಂತ್ರೈಃ ಪ್ರಪೂಜಯೇತ್ ॥

ಇಮಂ ಮೇ ಗಂಗೇ... ಎಂಬ ಮಂತ್ರದಿಂದ ಕಲಶಗಳಿಗೆ ನೀರನ್ನು ತುಂಬಬೇಕು । ಹಾಗೂ ಕಲಶಗಳಿಗೆ ವಸ್ತ್ರ-ಗಂಧ ಮೊದಲಾದವುಗಳನ್ನು ಆಯಾಯಾ ಮಂತ್ರಗಳಿಂದ ಪೂಜಿಸಬೇಕು ॥

ಯಾಃ ಫಲಿನೀರಿತ್ಯನಯಾ ಕ್ಷಿಪೇದ್ವನೌಷಧಾದಿಕಾನ್ ।

ಕುಂಭೋಪರಿಸ್ಥ ಪಾತ್ರೇತು ಆಶ್ಲೇಷಾಪ್ರತಿಮಾಂ ಯಜೇತ್ ॥

ಯಾಃ ಫಲಿನೀಃ... ಎಂಬ ಮಂತ್ರಗಳಿಂದ ವನೌಷಧಿಗಳನ್ನು ಹಾಕಬೇಕು । ಕಲಶದ ಮೇಲೆ ಆಶ್ಲೇಷಾನಕ್ಷತ್ರದ ದೇವತೆಯಾದ ಸರ್ಪದ ಪ್ರತಿಮೆಯನ್ನು ಇಡಬೇಕು ॥

ನಿಷ್ಕ ನಿಷ್ಕಾರ್ಧಪಾದ್ಯೈರ್ವಾ ಕಾರಯಿತ್ವಾ ಸ್ವಶಕ್ತಿತಃ ।

ತತ್ತತ್ಪೂರ್ವೋಕ್ತ ನಕ್ಷತ್ರೇ ದಕ್ಷಿಣೋತ್ತರಯೋರ್ಯಜೇತ್ ॥

ಪ್ರತಿಮೆಯನ್ನು, ೧ ತೊಲ ಚಿನ್ನದಿಂದ ಅಥವ ಅದರ ಅರ್ಧಪ್ರಮಾಣ ಚಿನ್ನದಿಂದ ಅಥವಾ ಸಾಧ್ಯವಾದಷ್ಟು ಪ್ರಮಾಣದ ಚಿನ್ನದಿಂದ ಮಾಡಬೇಕು । ಉಳಿದ ಕಲಶಗಳಿಗೆ ಆಶ್ಲೇಷಾನಕ್ಷತ್ರದ ಹಿಂದುಮುಂದಿನ ನಕ್ಷತ್ರಗಳ ದೇವತೆಗಳನ್ನೂ ಆವಾಹಿಸಬೇಕು ॥

ಐಂದ್ರಾದೀಶಾನಪರ್ಯಂತಂ ಅನ್ಯಋಕ್ಷಾಣಿ ಪೂಜಯೇತ್ ।

ಮೂಲೋಕ್ತೇನ ವಿಧಾನೇನ ಕುಂಭಯೋರಭಿಮಂತ್ರಣಂ ॥

ಇಂದ್ರಾದಿ ಅಷ್ಟದಿಕ್ಪಾಲಕರನ್ನೂ ಮತ್ತು ಉಳಿದ ನಕ್ಷತ್ರ ದೇವತೆಗಳನ್ನೂ ಪೂಜಿಸಬೇಕು । ಮೂಲಾನಕ್ಷತ್ರ ಶಾಂತಿಯಲ್ಲಿ ಹೇಳಿರುವಂತೆ ಕಲಶಗಳನ್ನು ಅಭಿಮಂತ್ರಿಸಬೇಕು ॥

ರುದ್ರಂ ವಾ ರುದ್ರಕುಂಭೇ ತು ಪೂರ್ವವಚ್ಛೇಷಮಾಚರೇತ್ ।

ನಮೋ ಅಸ್ತು ಸರ್ಪೇಭ್ಯಃ ಪೂಜಾಮಂತ್ರ ಇತೀರಿತಃ ॥

ಹಿಂದೆಹೇಳಿರುವಂತೆ, ೧ ಕಲಶದಲ್ಲಿ ರುದ್ರನನ್ನು ಪೂಜಿಸಬೇಕು । ನಮೋ ಅಸ್ತು ಸರ್ಪೇಭ್ಯಃ .....ಎಂಬ ಮಂತ್ರಗಳಿಂದ ಆವಾಹನೆ–ಪೂಜೆಗಳನ್ನು ಮಾಡಬೇಕು ॥

ಸರ್ಪೋ ರಕ್ತಸ್ತ್ರಿನೇತ್ರಶ್ಚ ದ್ವಿಭುಜಃ ಪೀತವಸ್ತ್ರಕಃ ।

ಫಲಕಾಸಿಧರಸ್ತೀಕ್ಷ್ಣೋ ದಿವ್ಯಾಭರಣ ಭೂಷಿತಃ ॥

ಆ ಸರ್ಪದೇವತೆಯು, ಕೆಂಪಗಿದ್ದು ೩ಕಣ್ಣುಗಳು–೨ಕೈಗಳು–ಹಳದಿಬಟ್ಟೆಗಳನ್ನು ಧರಿಸಿರುವವನು । ಕತ್ತಿ ಹಿಡಿದಿರುವವನೂ–ಉಗ್ರನೂ–ಒಳ್ಳೆಯ ಆಭರಣಗಳನ್ನು ಧರಿಸಿರುವವನೂ ಎಂದು ॥

ಏವಂ ಧ್ಯಾತ್ವಾ ತತೋಽಭ್ಯರ್ಚ್ಯ ಹೋಮಕರ್ಮ ಸಮಾಚರೇತ್ ।

ಕರ್ತುಶ್ಶಾಖೋಕ್ತ ಮಾರ್ಗೇಣ ಆಚಾರ್ಯಸ್ಯಾಥವಾಚರೇತ್ ॥

ಧ್ಯಾನಿಸಿಕೊಂಡು, ಪೂಜಿಸಿ ಹೋಮಕರ್ಮ ಮಾಡಬೇಕು । ಯಜಮಾನನ ಶಾಖೆಯಂತೆ ಅಥವಾ ಆಚಾರ್ಯರ ಮಾರ್ಗದರ್ಶನದಂತೆ ಮಾಡಬೇಕು ॥

ಅಥೇಧ್ಮಾಧಾನ ಪರ್ಯಂತ ಉಪಲೇಪಾದಿ ಪೂರ್ವವತ್ ।

ಛಂದೋಗಾ ಬಹ್ವೃಚಾಶ್ಚೈವ ತಥಾಽನ್ಯೇ ತೈತ್ತಿರೀಯಕಾಃ ॥

ಅಗ್ನಿಪ್ರತಿಷ್ಠೆಯೇ ಮೊದಲಾಗಿ ೧ಧ್ಮಾಧಾನ ಪರ್ಯಂತವಾಗಿ ಪ್ರಯೋಗವನ್ನು ಮಾಡುವುದು । ೩ ವೇದಗಳ ಅನುಸಾರಿಗಳೂ ॥

ಅಗ್ನಿಕಾರ್ಯಮಶೇಷಂ ತು ಕರ್ತುರ್ಗೃಹ್ಯೋಕ್ತಮಾರ್ಗತಃ ।

ಹೋಮಂ ಕುರ್ಯಾತ್ ಪ್ರಯತ್ನೇನ ಆಚಾರ್ಯೋ ಬ್ರಾಹ್ಮಣೈಸ್ಸಹ ॥

ಕರ್ತೃವಿನ ಗೃಹ್ಯಕರ್ಮಗಳನ್ನು ಆದೇಶಿಸುವ ಗ್ರಂಥಗಳಲ್ಲಿ ಹೇಳಿರುವಂತೆಯೇ ಅಗ್ನಿಯಲ್ಲಿನ ಎಲ್ಲಾ ವಿಧಿಗಳನ್ನೂ । ಆಚಾರ್ಯರು ಮತ್ತು ಋತ್ವಿಜರು ಶ್ರದ್ಧೆಯಿಂದ ಹೋಮಿಸಬೇಕು ॥

ಸಮಿದಾಜ್ಯ ಚರೂನ್ ಹುತ್ವಾ ಗಾಯತ್ರ್ಯಾಽಷ್ಟಶತಂ ಕ್ರಮಾತ್ ।

ಗಾಯತ್ರ್ಯಾ ಸ್ವಿಷ್ಟಕೃದ್ಧೋಮಂ ಹೋಮಶೇಷಂ ಸಮಾಪಯೇತ್ ॥

ಸಮಿತ್ತು–ಚರು–ತುಪ್ಪಗಳಿಂದ, ೧೦೮ಸಂಖ್ಯೆಯಲ್ಲಿ ಗಾಯತ್ರೀಹೋಮವನ್ನು ಮಾಡಬೇಕು । ಗಾಯತ್ರೀಮಂತ್ರದಿಂದಲೇ ಸ್ವಿಷ್ಟಕೃತ್ ಹೋಮವನ್ನು ಮಾಡಿ, ಹೋಮಕರ್ಮಗಳನ್ನು ಮುಗಿಸಬೇಕು ॥

ದಾರಪುತ್ರ ಸಮೇತಸ್ಯ ಯಜಮಾನಸ್ಯ ಪೂರ್ವವತ್ ।

ಅಭಿಷಿಂಚೇತ್ತಥಾऽಚಾರ್ಯೋ ಋತ್ವಿಗ್ಭಿಸ್ಸಹಿತಶ್ಶುಭಃ ॥

ಆಚಾರ್ಯ, ಋತ್ವಿಜರುಗಳು ಹೆಂಡತಿ-ಮಕ್ಕಳ ಸಹಿತನಾಗಿರುವ ಯಜಮಾನನಿಗೆ । ಕಲಶಗಳ ತೀರ್ಥವನ್ನು ಅಭಿಷೇಕ ಮಾಡಬೇಕು ॥

ಅಭಿಮಂತ್ರಿತ ಕುಂಭಾದ್ಭಿಃ ಅಭಿಷೇಚನಮಾಚರೇತ್ ।

ತಥಾ ಪೌರಾಣಮಂತ್ರೈಶ್ಚ ಪಲ್ಲವೈರಭಿಷಿಂಚಯೇತ್ ॥

ಆ ತೀರ್ಥವನ್ನು, ಪುರಾಣಶ್ಲೋಕಗಳನ್ನು ಹೇಳುತ್ತಾ, ಪಲ್ಲವ(ಚಿಗುರು)ಗಳಿಂದ ಅಭಿಷೇಕ ಮಾಡಬೇಕು ॥

ಆಶ್ಲೇಷಾ ಋಕ್ಷಜಾತಸ್ಯ ಮಾತಾಪಿತ್ರೋರ್ಧನಸ್ಯ ಚ ।

ಭ್ರಾತೃಜ್ಞಾತಿ ಕುಲಸ್ಥಾನಾಂ ದೋಷಂ ಸರ್ವಂ ವ್ಯಪೋಹತು ॥

ಆಶ್ಲೇಷಾನಕ್ಷತ್ರದಲ್ಲಿ ಹುಟ್ಟಿರುವ ಇವನಿಗೂ, ತಂದೆತಾಯಿಗಳಿಗೂ, ಸಂಪತ್ತಿಗೂ । ಸಹೋದರರಿಗೂ, ಜ್ಞಾತಿಗಳಿಗೂ, ಕುಲದವರಿಗೂ ಕೂಡ ಉಂಟಾಗಿರುವ ದೋಷವೆಲ್ಲವೂ ಪರಿಹಾರವಾಗಲಿ ॥

ಪಿತರಸ್ಸರ್ವಭೂತಾನಾಂ ರಕ್ಷಂತು ಪಿತರಸ್ಸದಾ ।

ಸರ್ವನಕ್ಷತ್ರ ಜಾತಸ್ಯ ವಿತ್ತಂ ಚ ಜ್ಞಾತಿ ಬಾಂಧವಾನ್ ॥

ಯಜಮಾನನ ಎಲ್ಲಾ ಪಿತೃದೇವತೆಗಳೂ ಇವನನ್ನು ಕಾಪಾಡಲಿ । ಎಲ್ಲಾ ನಕ್ಷತ್ರಗಳಲ್ಲಿ ಹುಟ್ಟಿರುವ ಬಂಧುಬಾಂಧವರೂ ॥

ಏವಂ ಕೃತೇऽಭಿಷೇಕೇತು ಸರ್ಪಶಾಂತಿರ್ಭವೇದ್ಧ್ರುವಂ ।

ತತಶ್ಶುಕ್ಲಾಂಬರಧರೋ ಯಜಮಾನಸ್ಸುಭೂಷಿತಃ ॥

ಅಭಿಷೇಕ ಮಾಡುವುದರಿಂದ, ಈ ಸರ್ಪಶಾಂತಿಯು(ಆಶ್ಲೇಷಾ) ಖಂಡಿತವಾಗಿಯೂ ಆಗುವುದು । ನಂತರ ಯಜಮಾನನು ಶುಭ್ರವಾದ, ಬಿಳಿಬಟ್ಟೆಯನ್ನು ಧರಿಸುವುದು ॥

ದಕ್ಷಿಣಾಭಿಸ್ತತೋ ವಿಪ್ರಾನ್ ಮೂಲವಚ್ಚ ಪ್ರಪೂಜಯೇತ್ ।

ಭುಕ್ತವದ್ಭ್ಯಶ್ಚ ವಿಪ್ರೇಭ್ಯಃ ಸ್ವೀಕುರ್ಯಾದಾಶಿಷೋ ಗೃಹೀ ॥

ಮೂಲನಕ್ಷತ್ರದ ಶಾಂತಿಯಲ್ಲಿ ಹೇಳಿರುವಂತೆ ದಕ್ಷಿಣೆ–ಕಲಶ–ವಸ್ತ್ರಗಳನ್ನು ಬ್ರಾಹ್ಮಣರಿಗೆ ಕೊಡಬೇಕು । ಏಪ್ರರಿಗೆ ಊಟಮಾಡಿಸಿ, ಅವರಿಂದ ಆಶೀರ್ವಾದ ಪಡೆಯಬೇಕು ॥

ಇತ್ಯುಕ್ತೇನ ವಿಧಾನೇನ ಸರ್ವಾರಿಷ್ಟಂ ವ್ಯಪೋಹತಿ ।

ಸರ್ವಕಾಮಾರ್ಥ ಸಿದ್ಧಿಶ್ಚ ವೇದೋಕ್ತಾಯುರ್ಭವಿಷ್ಯತಿ ॥

ಈ ರೀತಿ ಮಾಡುವುದರಿಂದ ಎಲ್ಲಾ ರೀತಿಯ ಅಶುಭವೂ ಪರಿಹಾರವಾಗುವುದು । ಅಲ್ಲದೇ ಇಷ್ಟಾರ್ಥಸಿದ್ಧಿಯಾಗಿ ವೇದೋಕ್ತ ಆಯುಷ್ಯವೂ ದೊರಕುವುದು ॥

ಇತ್ಯುಕ್ತಂ ವೇದಶಾಸ್ತ್ರಾರ್ಥಂ ಸಾರಮಾಗಮಚೋದಿತಮ್ ।

ಮಾನವಾನಾಂ ಹಿತಾರ್ಥಾಯ ಮನುನಾ ಸರ್ವಕಾಮದಂ ॥

ಹೀಗೆ ವೇದಶಾಸ್ತ್ರಗಳಲ್ಲಿ ಹೇಳಿರುವುದನ್ನು ನಡೆಸಬೇಕು । ಹೀಗೆಂದು ಎಲ್ಲಾ ಇಷ್ಟಾರ್ಥಗಳನ್ನೂ ಪೂರೈಸಲು ಮನುಮಹರ್ಷಿಗಳು ಮಾನವರ ಹಿತಕ್ಕೋಸ್ಕರ ಹೇಳಿರುತ್ತಾರೆ ॥

ಸರ್ಪಾಧೀಶ ನಮಸ್ತುಭ್ಯಂ ನಾಗಾನಾಂ ಚ ಗಣಾಧಿಪ ।

ಗೃಹಾಣಾರ್ಘ್ಯಂ ಮಯಾದತ್ತಂ ಸರ್ವಾರಿಷ್ಟ ಪ್ರಶಾಂತಯೇ ॥

ಮೂಲನಕ್ಷತ್ರವತ್ಕುರ್ಯಾತ್ ಸರ್ಪಗಂಡೇ ಸ್ವನಾಮತಃ ॥

ಎಲ್ಲಾ ಅಶುಭಗಳ ನಿವಾರಣೆಗಾಗಿ ನಾಗರಾಜನೇ ನಿನಗೆ ನಮಸ್ಕಾರವು ನಾಗಗಳಿಗೆಲ್ಲಾ ಒಡೆಯನೇ । ನಾನು ಕೊಟ್ಟ ಅರ್ಘ್ಯವನ್ನು ಸ್ವೀಕರಿಸು ॥ ಮೂಲನಕ್ಷತ್ರ ಜನನಶಾಂತಿಯಂತೆಯೇ ಈ ಸರ್ಪ(ಆಶ್ಲೇಷಾನಕ್ಷತ್ರ) ನಕ್ಷತ್ರಜನನ ಶಾಂತಿಯನ್ನು ಮಾಡಬೇಕು ॥

॥ ಇತಿ ಮಾಧವೀಯೇ ಆಶ್ಲೇಷಾನಕ್ಷತ್ರ ಜನನ ಶಾಂತಿಃ ॥

* ಈ ಶಾಂತಿಯಲ್ಲಿ ವಿಶೇಷವಾಗಿ ಬೇಕಾದ ವಸ್ತುಗಳು ಮತ್ತೂ ಮಂತ್ರಗಳು –

* ೫ ಅಥವಾ ೨ ಕಲಶಗಳು, ಚಿನ್ನದಿಂದ ಸರ್ಪದ ಪ್ರತಿಮೆ, ಕೆಂಪು, ಹಳದಿ ಬಣ್ಣಗಳಿಂದ, ೨೪ ದಳಗಳ ಕಮಲದ ಚಿತ್ರ, ಸಮಿತ್, ಚರು, ಆಜ್ಯ, ವಸ್ತ್ರ, ಪ್ರತಿಮೆ, ದಕ್ಷಿಣಾ ದಾನಗಳು.

* ಕಲಶಸ್ಥಾಪನೆಯ, ಆಶ್ಲೇಷಾ ನಕ್ಷತ್ರದ, ಆಶ್ಲೇಷಾನಕ್ಷತ್ರದ ಹಿಂದುಮುಂದಿನ ನಕ್ಷತ್ರಗಳ, ಎಲ್ಲಾ ನಕ್ಷತ್ರಗಳ ಮಂತ್ರ, ದಿಕ್ಪಾಲಕರ, ರುದ್ರ, ಗಾಯತ್ರೀಮಂತ್ರಗಳು.

****

೫. ಜ್ಯೇಷ್ಠಾ ನಕ್ಷತ್ರ ಜನನ ಶಾಂತಿಃ

ಅಥ ವೃದ್ಧಗಾರ್ಗ್ಯಃ

ಸುಖಾಸೀನಂ ಮುನಿಶ್ರೇಷ್ಠಂ ಗರ್ಗಂ ಮುನಿಗಣಾನ್ವಿತಂ ।

ಕೃತಾಂಜಲಿಪುಟೋ ಭೂತ್ವಾ ಪರಿಪಪ್ರಚ್ಛ ಶೌನಕಃ ॥

ಸುಖಾಸೀನದಲ್ಲಿ ಋಷಿಗಳೊಡನೆ ಕುಳಿತಿರುವ ಶ್ರೇಷ್ಠಮುನಿಗಳಾದ ಗರ್ಗಋಷಿಗಳನ್ನು । ವಿನಯದಿಂದ ಶೌನಕರು ಈರೀತಿಯಾಗಿ ಕೇಳುತ್ತಾರೆ ॥

ಜ್ಯೇಷ್ಠಾನಕ್ಷತ್ರ ಸಂಭೂತ ಗಂಡದೋಷವಿನಿರ್ಣಯಂ ।

ತಸ್ಯ ಶಾಂತಿಂ ವಿಧಾನಂ ಚ ವದ ಮೇ ಮುನಿಸತ್ತಮ ॥

ಜ್ಯೇಷ್ಠಾನಕ್ಷತ್ರದಲ್ಲಿ ಹುಟ್ಟಿದವರಿಗೆ ಉಂಟಾಗುವ ತೊಂದರೆಗಳನ್ನು । ಅದಕ್ಕೆ ಪರಿಹಾರವನ್ನೂ ಹೇಳಿರಿ ಎಂದು ಪ್ರಾರ್ಥಿಸಿದರು ॥

ಶೌನಕಸ್ಯ ವಚಶ್ಶ್ರುತ್ವಾ ಪ್ರತ್ಯುವಾಚ ಮಹಾಮುನಿಃ ।

ಶೃಣು ಶೌನಕ ಯತ್ನೇನ ಗಂಡದೋಷ ವಿನಿರ್ಣಯಂ ॥

ಶೌನಕರ ಮಾತನ್ನು ಕೇಳಿ, ಆ ಗರ್ಗರು ಈರೀತಿ ಹೇಳಿದರು । ಎಲೈ ಶೌನಕರೇ, ಈ ನಕ್ಷತ್ರದಲ್ಲಿ ಹುಟ್ಟಿದವರ ದೋಷವನ್ನೂ ॥

ತಸ್ಯ ಶಾಂತಿಂ ವಿಧಾನಂ ಚ ಯಥಾವತ್ಕಥಯಾಮ್ಯಹಂ ।

ಘಟಿಕೈಕಾ ಚ ಮಿತ್ರಾಂತೇ ಜ್ಯೇಷ್ಠಾದೌ ಘಟಿಕಾದ್ವಯಂ ॥

ಅದಕ್ಕೆ ಪರಿಹಾರವನ್ನೂ ಸರಿಯಾಗಿ ಹೇಳುತ್ತೇನೆ ಕೇಳಿರಿ । ಮಿತ್ರ(ರವಿ) ದೇವತಾಕವಾದ ಅನೂರಾಧ ನಕ್ಷತ್ರದ ತುದಿಯ ಘಳಿಗೆ(ಕೊನೆಯ ೨೪ ನಿಮಿಷ) ಮತ್ತು ಜ್ಯೇಷ್ಠಾನಕ್ಷತ್ರದ ಮೊದಲಿನ ೨ ಘಳಿಗೆ(ಮೊದಲಿನ ೪೮ ನಿಮಿಷ) ॥

ತಯೋಸ್ಸಂಧಿರಿತಿ ಜ್ಞೇಯಃ ಶಿಶುಗಂಡಸ್ಯಮೀರಿತಃ ।

ಪ್ರಥಮೇ ಚ ದ್ವಿತೀಯೇ ಚ ಜ್ಯೇಷ್ಠರ್ಕ್ಷೇ ಚ ತೃತೀಯಕೇ ॥

ಈ ಅವಧಿಗಳನ್ನು ಶಿಶುಗಂಡ(ದೋಷ) ಎಂದು ಕರೆಯುತ್ತಾರೆ । ಜ್ಯೇಷ್ಠಾನಕ್ಷತ್ರದಲ್ಲಿ, ೧–೨ ಮತ್ತು ೩ ನೇ ಪಾದಗಳಲ್ಲಿ ॥

ಪಾದತ್ರಯೇ ಜಾತನರೋ ಜ್ಯೇಷ್ಠೇಽಪ್ಯತ್ರ ಪ್ರಜಾಯತೇ ।

ಜ್ಯೇಷ್ಠಾಂತ್ಯ ಪಾದಜಾತಸ್ತು ಪಿತುಸ್ಸ್ವಸ್ಯ ವಿನಾಶಕಃ ॥

ಈ ಪಾದಗಳಲ್ಲಿ, ಹಿರಿಯ ಮಗನು ಜನಿಸಿದರೂ ಸಹಾ । ಹಾಗೆಯೇ, ೪ ನೇ ಪಾದದಲ್ಲಿ ಹುಟ್ಟಿದವನೂ ಸಹಾ ತಂದೆಗೂ, ತನಗೂ ಅನಿಷ್ಟಕಾರಿಯಾಗುತ್ತಾನೆ ॥

ಜಾಯತೇ ನಾತ್ರ ಸಂದೇಹೋ ದಶಾಹಾಭ್ಯಂತರೇ ತಥಾ ।

ಜ್ಯೇಷ್ಠರ್ಕ್ಷೇ ಕನ್ಯಕಾ ಜಾತಾ ಹಂತಿ ಶೀಘ್ರಂ ಧವಾಗ್ರಜಂ ॥

೧೦ ದಿನಗಳ ಒಳಗೆ ದೋಷವು ಉಂಟಾಗುತ್ತದೆ, ಇದರಲ್ಲಿ ಸಂದೇಹವಿಲ್ಲ । ಜ್ಯೇಷ್ಠಾ ನಕ್ಷತ್ರದಲ್ಲಿ ಹುಟ್ಟಿದ ಹೆಣ್ಣುಮಗು ಗಂಡನ ಅಣ್ಣನನ್ನು ಬೇಗ ನಾಶಮಾಡುತ್ತಾಳೆ (ಅಶ್ರೇಯಸ್ಸು) ॥

ತಚ್ಛಾಂತಿ ತಸ್ಯ ವಕ್ಷ್ಯಾಮಿ ಗಂಡದೋಷ ಪ್ರಶಾಂತಯೇ ।

ಸುದಿನೇ ಶುಭನಕ್ಷತ್ರೇ ಚಂದ್ರತಾರಾ ಬಲಾನ್ವಿತೇ ॥

ಆದ್ದರಿಂದ ಅದಕ್ಕೆ ಪರಿಹಾರವನ್ನು ಹೇಳುತ್ತೇನೆ । ಪಂಚಾಂಗ ಶುದ್ಧಿಯಿರುವ ದಿನಗಳಲ್ಲಿ ॥

ಸೂತಕಾಂತೇ ತಥಾ ಕುರ್ಯಾತ್ ಜ್ಯೇಷ್ಠಾಶಾಂತಿಂ ವಿಧಾನತಃ ।

ವಜ್ರಾಂಕುಶಧರಂ ದೇವಂ ಐರಾವತ ಗಜಾನ್ವಿತಮ್ ॥

ಸೂತಕ ಕಳೆದ ನಂತರ, ಜ್ಯೇಷ್ಠಾನಕ್ಷತ್ರದ ಜನನ ಶಾಂತಿಯನ್ನು ವಿಧಿಯಂತೆ ಮಾಡಬೇಕು । ವಜ್ರಾಯುಧವನ್ನು ಹೊಂದಿ, ಐರಾವತದ ಮೇಲೆ ಕುಳಿತಿರುವ ॥

ಕುರ್ಯಾತ್ ಶಚೀಪತಿಂ ರಮ್ಯಂ ದೇವೇಂದ್ರಂ ಸುರನಾಯಕಮ್ ।

ಕರ್ಷಮಾತ್ರ ಸುವರ್ಣೇನ ಕರ್ಷಾರ್ಧಂ ವಾಥ ಪಾದತಃ ॥

ಶಚೀದೇವಿಯ ಗಂಡನಾದ, ಸುಂದರನಾದ, ದೇವತೆಗಳ ನಾಯಕನಾದ ಇಂದ್ರನ । ಮೂರ್ತಿಯನ್ನು, ಒಂದು ಗುಲಗಂಜಿ ಪ್ರಮಾಣ ಅಥವ ೬ ತೊಲ ಅಥವ ೩ ತೊಲ ಚಿನ್ನದಿಂದ ಮಾಡಿಸಬೇಕು ॥

ತದ್ವಿಧಾನೇನ ಕುರ್ವೀತ ವಿತ್ತಶಾಠ್ಯಂ ನ ಕಾರಯೇತ್ ।

ಶಾಲಿತಂಡುಲ ಸಂಪೂರ್ಣಂ ಕುಂಭಸ್ಯೋಪರಿ ಪೂಜಯೇತ್ ॥

ಧನವನ್ನು ಖರ್ಚುಮಾಡಲು ಜಿಪುಣತನ ತೋರಿಸಬಾರದು । ಅಕ್ಕಿಯರಾಶಿಯ ಮೇಲೆ ಕಲಶಗಳನ್ನಿಟ್ಟು ಪೂಜಿಸಬೇಕು ॥

ಇಂದ್ರಾಯೇಂದೋ ಮರುತ್ವತ ಇತಿ ಮಂತ್ರೇಣ ವಾಗ್ಯತಃ ।

ಗಂಧಪುಷ್ಪೈರ್ಧೂಪ ದೀಪೈರ್ನಾನಾ ಭಕ್ಷ್ಯ ನಿವೇದನೈಃ ॥

ಇಂದ್ರಾಯೇಂದೋ...., ಮರುತ್ವಾಗ್ಂ....., ಈ ಮಂತ್ರಗಳಿಂದ ಪೂಜಿಸಬೇಕು । ಗಂಧ, ಪುಷ್ಪ, ಧೂಪ, ದೀಪ, ವಿವಿಧ ನೈವೇದ್ಯಗಳನ್ನು ಸಮರ್ಪಿಸಬೇಕು ॥

ಪೂಜಯೇದ್ವಿಧಿನಾ ವಿಪ್ರ ಲೋಕಪಾಲ ಗಣಾನ್ವಿತಮ್ ।

ರಕ್ತವಸ್ತ್ರದ್ವಯೋಪೇತಂ ಪೂಜಯೇತ್ ಸುರನಾಯಕಮ್ ॥

ದಿಕ್ಪಾಲಕರನ್ನೂ ಸಹ ಪೂಜಿಸಬೇಕು । ಕೆಂಪುಬಣ್ಣದ ೨ ವಸ್ತ್ರಗಳನ್ನು ಇಡಬೇಕು ॥

ತತ್ರ ಸಂಸ್ಥಾಪಯೇತ್ ಕುಂಭಾನ್ ಚತುರ್ದಿಕ್ಷು ವಿಶೇಷತಃ ।

ತನ್ಮಧ್ಯೇ ಸ್ಥಾಪಯೇತ್ ಕುಂಭಂ ಶತಚ್ಛಿದ್ರ ಸಮನ್ವಿತಮ್ ॥

೪ ದಿಕ್ಕುಗಳಲ್ಲಿಯೂ ಕಲಶಗಳನ್ನು ಇಟ್ಟು । ಅವುಗಳ ಮಧ್ಯದಲ್ಲಿ ಇನ್ನೊಂದು ಕಲಶವನ್ನು ರಂಧ್ರಗಳಿರುವ ಪಾತ್ರೆಯೊಂದಿಗೆ ಇಡಬೇಕು ॥

ಪುಣ್ಯೋದಕ ಸಮಾಯುಕ್ತಾನ್ ವಸ್ತ್ರಯುಗ್ಮಾಭಿ ವೇಷ್ಟಿತಾನ್ ।

ಕುಂಭೇಷು ವಿನ್ಯಸೇತ್ ಧೀಮಾನ್ ಪಂಚಗವ್ಯಂ ಸಮಂತ್ರಕಮ್ ॥

ಅದಕ್ಕೆ ಶುದ್ಧಜಲ ಹಾಕಿ, ವಸ್ತ್ರಗಳಿಂದ ಅಲಂಕರಿಸಬೇಕು । ಪಂಚಗವ್ಯವನ್ನು ಮಂತ್ರಸಹಿತವಾಗಿ ಹಾಕಬೇಕು ॥

ಪಂಚಾಮೃತಂ ಪಂಚರತ್ನಂ ಮೃತ್ತಿಕಾಃ ಪಂಚಸಂಜ್ಞಿಕಾಃ ।

ಪಂಚವೃಕ್ಷ ಕಷಾಯಾಂಶ್ಚ ಪಂಚಪಲ್ಲವ ಕಾಂಸ್ಯಥಾ ॥

ಪಂಚಾಮೃತ, ಪಂಚರತ್ನ, ೫ ವಿಧದ ಮಣ್ಣು । ೫ ವಿಧಮರದ ಚಿಗುರು, ೫ ವಿಧಮರದ ತೊಗಟೆ ಇವುಗಳನ್ನೂ ಹಾಕಬೇಕು ॥

ಸುವರ್ಣ ಕುಶ ದೂರ್ವಾಶ್ಚ ಶತೌಶಧಿಮಪಿ ಕ್ಷಿಪೇತ್ ।

ಪೂಜಯೇತ್ ವಾರುಣ್ಯೈರ್ಮಂತ್ರೈಃ ಕುಂಭಾನ್ ಧೀಮಾನ್ ಪ್ರಯತ್ನತಃ ॥

ಚಿನ್ನ, ದೂರ್ವೆ, ದರ್ಭೆ, ಶತೌಷಧಿ (ಸಸ್ಯವಿಶೇಷ) ಇವುಗಳನ್ನೂ ಹಾಕಬೇಕು । ವರುಣಮಂತ್ರಗಳಿಂದ ಪೂಜಿಸಬೇಕು ॥

ತ್ವನ್ನೋ ಅಗ್ನೇ ಜಪೇದಾದೌ ಸತ್ವಂನೋಽಪಿ ದ್ವಿತೀಯಕಮ್ ।

ಸಮುದ್ರಜ್ಯೇಷ್ಠಾ ಇತಿ ಚ ಇಮಂ ಗಂಗೇ ಚತುರ್ಥಕಮ್ ॥

ತ್ವನ್ನೋ ಅಗ್ನೇ..., ಸತ್ವನ್ನೋ ಅಗ್ನೇ... ಮಂತ್ರಗಳಿಂದ । ಹಾಗೆಯೇ, ಸಮುದ್ರಜ್ಯೇಷ್ಠಾ..., ಇಮಂ ಮೇ ಗಂಗೇ... ಈ ಮಂತ್ರಗಳನ್ನು ಕ್ರಮವಾಗಿ ಹೇಳಬೇಕು(ಆವಾಹಿಸಬೇಕು) ॥

ಪೂಜಯೇತ್ ವಸ್ತ್ರ ಪುಷ್ಪಾದ್ಯೈಃ ಚತುರಃ ಕಲಶಾನಪಿ ।

ಜಪಂ ಕುರ್ಯುಃ ಪ್ರಯತ್ನೇನ ಮಂತ್ರೈರಭಿರ್ದ್ವಿಜೋತ್ತಮ ॥

ಹೀಗೆ ವಸ್ತ್ರ, ಹೂಗಳಿಂದ ೪ ಕಲಶಗಳನ್ನೂ ಪೂಜಿಸಬೇಕು । ಮುಂದೆ ಹೇಳುವ ಮಂತ್ರಗಳನ್ನು ಶ್ರದ್ಧೆಯಿಂದ ಬ್ರಾಹ್ಮಣರು ಜಪಿಸಬೇಕು ॥

ಆನೋಭದ್ರಾ ಜಪೇದಾದೌ ಭದ್ರಾ ಅಗ್ನೇ ದ್ವಿತೀಯಕಮ್ ।

ತೃತೀಯಂ ಪುರುಷಸೂಕ್ತಂ ಚ ಕದ್ರುದ್ರಾಯ ಚತುರ್ಥಕಮ್ ॥

ಆನೋಭದ್ರಾಃ..., ಭದ್ರಾ ಅಗ್ನೇ..., । ಪುರುಷಸೂಕ್ತ..., ಕದ್ರುದ್ರಾಯ..., ಮುಂತಾದ ಮಂತ್ರಗಳನ್ನು ಕ್ರಮವಾಗಿ ಜಪಿಸಬೇಕು ॥

ಆಚಾರ್ಯೋ ಮೂಲಮಂತ್ರೇಣ ಜಪಂ ಕುರ್ಯಾತ್ ವಿಶೇಷತಃ ।

ಇಂದ್ರಸೂಕ್ತಂ ರುದ್ರಜಾಪ್ಯಂ ಜಪೇತ್ ಮೃತ್ಯುಂಜಯಂ ತತಃ ॥

ಆಚಾರ್ಯರು ಮೂಲಮಂತ್ರವನ್ನು ವಿಶೇಷವಾಗಿ ಜಪಿಸಬೇಕು । ಇಂದ್ರಸೂಕ್ತ..., ರುದ್ರ..., ಮತ್ತು ಮೃತ್ಯುಂಜಯ ಮಂತ್ರಗಳನ್ನೂ ಜಪಿಸಬೇಕು ॥

ಇತ್ಥಂ ಸಂಪೂಜ್ಯ ದೇವೇಂದ್ರಂ ವರುಣಂ ಕುಂಭ ಸಂಸ್ಥಿತಮ್ ।

ಸುಸಂಕಲ್ಪ್ಯ ವಿಧಾನೇನ ಹೋಮಕರ್ಮ ತತಶ್ಚರೇತ್ ॥

ಈ ರೀತಿಯಲ್ಲಿ, ಇಂದ್ರ–ವರುಣರನ್ನು ಕಲಶದಲ್ಲಿ ಆವಾಹಿಸಿ ಪೂಜಿಸಬೇಕು । ಸಂಕಲ್ಪ ಪೂರ್ವಕವಾಗಿ ಸರಿಯಾದ ವಿಧಾನದಿಂದ ಹೋಮಕರ್ಮವನ್ನು ಆರಂಭಿಸಬೇಕು ॥

ಸಮಿದ್ಭಿರ್ಬ್ರಹ್ಮ ವೃಕ್ಷಸ್ಯ ಶತಮಷ್ಟೋತ್ತರಂ ತಥಾ ।

ಸರ್ಪಿಷಾ ಚರುಣಾ ಚೈವ ಮೂಲಮಂತ್ರೇಣ ವಾಗ್ಯತಃ ॥

೧೦೮ ಆರಳೀ ಸಮಿತ್ತನ್ನು । ಚರು, ಆಜ್ಯಗಳೊಡನೆ ಮೂಲಮಂತ್ರದಿಂದ ಹೋಮಿಸಬೇಕು ॥

ಹುವೇಜ್ಜಾಪ್ಯಂ ಚ ತೇನೈವ ಯತ ಇಂದ್ರಭಯೇತಿ ಚ ।

ತಿಲಾನ್ ವ್ಯಾಹೃತಿಭಿರ್ಹುತ್ವಾ ಶತಮಷ್ಟೋತ್ತರಂ ಪೃಥಕ್ ॥

ನಂತರ ಆದೇಂದ್ರವ್ಯಗಳಿಂದ, ೧೦೮ ಸಂಖ್ಯೆಯಲ್ಲಿ ಯತ ಇಂದ್ರ..., ಮಂತ್ರದಿಂದ ಹೋಮಿಸಬೇಕು । ಆಮೇಲೆ ಕೇವಲ ತಿಲದಿಂದ, ೧೦೮ ಸಂಖ್ಯೆಯಲ್ಲಿ ಸಮಸ್ತವ್ಯಾಹೃತಿ..., ಹೋಮವನ್ನೂ ಮಾಡುವುದು ॥

ಭಾರ್ಯಾ ಶಿಶು ಸಮೋಪೇತಂ ಯಜಮಾನಂ ವಿಶೇಷತಃ ।

ಅಭಿಷೇಕಂ ಪ್ರಕುರ್ವೀತ ಸೂಕ್ತೈರ್ವಾರುಣ ಸಂಜ್ಞಿಕೈಃ ॥

ಹೆಂಡತಿ ಮಕ್ಕಳೊಂದಿಗೆ ಯಜಮಾನನ್ನು ಕೂರಿಸಿ । ಮುಂದಿನ ಮಂತ್ರಗಳಿಂದ ಅಭಿಷೇಕ ಮಾಡಬೇಕು ॥

ಸಮುದ್ರಜ್ಯೇಷ್ಠಾದಿ ಮಂತ್ರೈಃ ಇಮಂ ಮೇ ವರುಣೇತಿ ಚ ।

ದ್ಯೌಶ್ಶಾಂತೇತ್ಯಾದಿಭಿರ್ಮಂತ್ರೈಃ ಅಭಿಷೇಕಂ ಸಮಾಚರೇತ್ ॥

ಸಮುದ್ರಜ್ಯೇಷ್ಠಾ..., ಇಮಂ ಮೇ ವರುಣ..., । ಮತ್ತು ದ್ಯೌಶ್ಶಾಂತಾ..., ಇತ್ಯಾದಿ ಮಂತ್ರಗಳಿಂದ ಅಭಿಷೇಕವನ್ನು ಮಾಡುವುದು ॥

ಅಭಿಷೇಕೇ ನಿವೃತ್ತೇತು ಯಜಮಾನಸ್ಸಮಾಹಿತಃ ।

ಶುಕ್ಲಾಂಬರಾಣಿ ಧೃತ್ವಾऽಥ ಕುರ್ಯಾತ್ ಆಜ್ಯಾವಲೋಕನಮ್ ॥

ಅಭಿಷೇಕಕ್ಕೆ ಉಪಯೋಗಿಸಿದ ಒದ್ದೆಬಟ್ಟೆಯನ್ನು ತೆಗೆದು । ಬಿಳಿಬಟ್ಟೆಯನ್ನು ಧರಿಸಿ, ಕರಗಿರುವ ತುಪ್ಪದಲ್ಲಿ ತನ್ನಮುಖವನ್ನು ॥

ರೂಪಂ ರೂಪೇತಿ ಮಂತ್ರೇಣ ಚಿತ್ರಂ ತಚ್ಚಕ್ಷುರೇವ ವಾ ।

ದೇವತಾ ಪುರತಃ ಸ್ಥಿತ್ವಾ ಧೂಪದೀಪಂ ನಿವೇದಯೇತ್ ॥

ರೂಪಂ ರೂಪಂ... ಎಂಬ ಮಂತ್ರದಿಂದ ನೋಡಿಕೊಳ್ಳಬೇಕು । ಉತ್ತರಪೂಜೆಯನ್ನು ಮಾಡುವುದು ॥

ಗೃಹಾಣಾರ್ಘ್ಯಂ ಮಯಾದತ್ತಂ ಗಂಡದೋಷ ಪ್ರಶಾಂತಯೇ ।

ಕಾರ್ಯಂ ಯತ್ಪೂಜಕಾದೀನಾಂ ಕಾರಿತಂ ಯತ್ಫಲಂ ಶುಭಮ್ ॥

ದೇವೇಂದ್ರನೇ ಮೊದಲಾಗಿ, ಆವಾಹಿಸಿರುವ ದೇವತೆಗಳಿಗೆಲ್ಲಾ, ಈ ನಕ್ಷತ್ರದಲ್ಲಿ ಜನಿಸಿದ ದೋಷ ನಿವಾರಣೆಗಾಗಿ ಪ್ರಾರ್ಥಿಸಿ, ಅರ್ಘ್ಯವನ್ನು ಕೊಡುವುದು ॥

ಲಬ್ಧ್ವಾ ತು ತತ್ಫಲಂ ಸರ್ವಂ ದೇವೇಂದ್ರಾಯ ಸಮರ್ಪಯೇತ್ ।

ಆಚಾರ್ಯಾಯ ಚ ಗಾಂ ದದ್ಯಾತ್ ಸುಶೀಲಾಂ ಚ ಪಯಸ್ವಿನೀಮ್ ॥

ಈ ಎಲ್ಲಾ ಕರ್ಮವನ್ನು ಇಂದ್ರನಿಗೆ ಸಮರ್ಪಿಸಬೇಕು । ಒಳ್ಳೆಯ, ಹಾಲುಕೊಡುವ ಹಸುವನ್ನು ಆಚಾರ್ಯರಿಗೆ ಕೊಡಬೇಕು ॥

ರಕ್ತವರ್ಣಾಂ ವಸ್ತ್ರಯುತಾಂ ಸರ್ವಾಲಂಕಾರ ಭೂಷಿತಾಮ್ ।

ವಸ್ತ್ರಯುಗ್ಮಪಿಧಾನಾಂ ಚ ಪ್ರತಿಮಾಂ ಚ ಸದಕ್ಷಿಣಾಮ್ ॥

ಪೂಜಿಸಿರುವ, ವಸ್ತ್ರ–ಪ್ರತಿಮೆ–ದಕ್ಷಿಣೆಗಳನ್ನು ಋತ್ವಿಗಾದಿಗಳಿಗೆ ಕೊಡಬೇಕು ॥

ಯಕ್ಷ ಗಂಧರ್ವ ಸಿದ್ಧೈಶ್ಚ ಪೂಜಿತೋಽಸಿ ಶಚೀಪತೇ ।

ದಾನೇನಾನೇನ ದೇವೇಶ ಗಂಡದೋಷಂ ವಿನಾಶಯ ॥

ಈ ದಾನಾದಿ ಕರ್ಮಗಳಿಂದ ಎಲೈ ಇಂದ್ರನೇ ನೀನು ಸುಪ್ರೀತನಾಗಿ ಈ ನಕ್ಷತ್ರಜನನ ದೋಷವನ್ನು ಪರಿಹರಿಸು ಎಂದು ಪ್ರಾರ್ಥಿಸುವುದು ॥

ಅಷ್ಟೋತ್ತರಶತಾಂ ಸಂಖ್ಯಾಂ ಕುರ್ಯಾತ್ ಬ್ರಾಹ್ಮಣ ಭೋಜನೇ ।

ತೇಭ್ಯೋಽಪಿ ದಕ್ಷಿಣಾಂ ದತ್ವಾ ಪ್ರಣಿಪತ್ಯ ಕ್ಷಮಾಪಯೇತ್ ॥

೧೦೮ ಬ್ರಾಹ್ಮಣರಿಗೆ ಅನ್ನದಾನ ಮಾಡಿ । ಅವರಿಗೂ ಸಪ ಯಥಾಶಕ್ತಿ ದಕ್ಷಿಣೆಗಳನ್ನು ಕೊಟ್ಟು, ನಮಸ್ಕರಿಸಬೇಕು ॥

ಇಮಾಂ ಕೃತ್ವಾ ಜ್ಯೇಷ್ಠಾಶಾಂತಿಂ ಯಥಾ ವಿದ್ಧ್ಯುಕ್ತಮಾಗರ್ತಃ ।

ಗಂಡದೋಷಂ ವಿನಿರ್ಜಿತ್ಯ ಆಯುಷ್ಮಾನ್ ಜಾಯತೇನರಃ ॥

ಹೀಗೆ ಜ್ಯೇಷ್ಠಾನಕ್ಷತ್ರ ಜನನ ಶಾಂತಿಯನ್ನು ವಿಧಿಯಂತೆ ಮಾಡಿದವರಿಗೆ । ದೋಷವು ನಿವಾರಣೆಯಾಗಿ, ಆಯಸ್ಸು ವೃದ್ಧಿಯಾಗುತ್ತವೆ ॥

ಇತ್ಯುಕ್ತಂ ವೃದ್ಧಗಾರ್ಗ್ಯೇಣ ಶೌನಕಾಯ ವಿಶೇಷತಃ ।

ಜ್ಯೇಷ್ಠಾನಕ್ಷತ್ರ ಸಂಭೂತ ಗಂಡದೋಷ ಪ್ರಶಾಂತಯೇ ॥

ಹೀಗೆ ಗರ್ಗರು, ಶೌನಕಋಷಿಗಳಿಗೆ ಜ್ಯೇಷ್ಠಾನಕ್ಷತ್ರದ ಜನನ ಶಾಂತಿಯನ್ನು ಹೇಳಿದರು ॥

ಅಜ್ಞಾನಾದ್ವಾ ಅಥವಾ ಜ್ಞಾನಾದ್ವೈಕಲ್ಯಾತ್ಸಾಧನಸ್ಯ ವಾ ।

ಯನ್ನ್ಯೂನಮತಿರಿಕ್ತಂ ವಾ ತತ್ಸರ್ವಂ ಕ್ಷಂತುಮರ್ಹಸಿ ॥

ನಾನು ಮಾಡಿರಬಹುದಾದ ಎಲ್ಲಾ ರೀತಿಯ ತಪ್ಪುಗಳನ್ನೂ ಮನ್ನಿಸಿ ಹರಸಿರಿ, ಎಂದು ಭಗವಂತನಲ್ಲಿ ಪ್ರಾರ್ಥಿಸುವುದು ॥

॥ ಇತಿ ವೃದ್ಧಗಾರ್ಗ್ಯೋಕ್ತ ಜ್ಯೇಷ್ಠಾನಕ್ಷತ್ರ ಜನನ ಶಾಂತಿಃ ॥

* ಈ ಶಾಂತಿಯಲ್ಲಿ ವಿಶೇಷವಾಗಿ ಬೇಕಾದ ವಸ್ತುಗಳು ಮತ್ತು ಮಂತ್ರಗಳು –

* ಇಂದ್ರನ ಪ್ರತಿಮೆ, ಅಕ್ಕಿ, ಕಲಶ, ಕೆಂಪುವಸ್ತ್ರ, ವಸ್ತ್ರ, ಗಂಧ, ಹೂ, ಪಂಚಗವ್ಯ, ಪಂಚರತ್ನ, ಪಂಚಮೃತ್ತಿಕೆ, ಪಂಚಾಮೃತ, ಪಂಚತ್ವಕ್, ಪಂಚಪಲ್ಲವ, ಚಿನ್ನ, ದೂರ್ವೆ, ದರ್ಭೆ, ಶತೌಷಧಿ, ಅರಳೀಸಮಿತ್ತು, ಚರು, ತುಪ್ಪ, ತಿಲ, ಗೋದಾನ, ಅನ್ನದಾನ. .

* ಇಂದ್ರಾಯೇಂದೋ, ಮರುತ್ವಾಗ್ಂ, ವರುಣಮಂತ್ರ, ತ್ವಂ ನೋ ಅಗ್ನೇ, ಸ ತ್ವಂ ನೋ ಅಗ್ನೇ, ಸಮುದ್ರಜ್ಯೇಷ್ಠ, ಇಮಂ ಮೇ ಗಂಗೇ, ಆನೋಭದ್ರಾ, ಭದ್ರಾ ಅಗ್ನೇ, ಪುರುಷಸೂಕ್ತ, ಕದ್ರುದ್ರಾಯ, ಇಂದ್ರಸೂಕ್ತ, ರುದ್ರ, ಮೃತ್ಯುಂಜಯ, ಯತ ಇಂದ್ರ, ಇಮಂ ಮೇ ವರುಣ, ಸಮಸ್ತವ್ಯಾಹೃತಿ, ದ್ಯೌಶ್ಶಾಂತಾ, ರೂಪಂ ರೂಪಂ.

****

೬. ರೋಹಿಣೀ ನಕ್ಷತ್ರ ಜನನ ಶಾಂತಿಃ

ಅಥ ಶೌನಕಃ

ರೋಹಿಣ್ಯಾಹ ಪ್ರಥಮೇಪಾದೇ ಮಾತುಲಂ ಹಂತಿ ತಚ್ಛಿಶುಃ ।

ತದುತ್ತರೇಷು ಪಾದೇಷು ಧನಹಾನಿಸ್ತು ಜಾಯತೇ ॥

ರೋಹಿಣೀ ನಕ್ಷತ್ರದ ೧ ನೇ ಪಾದದಲ್ಲಿ, ಹುಟ್ಟಿರುವ ಮಗುವು ಸೋದರಮಾವನಿಗೆ ಅನಿಷ್ಟವಾಗುವುದು । ಉಳಿದ ೩ ಪಾದಗಳಿಗೆ ಹುಟ್ಟಿರುವ ಮಗುವು ಸಂಪತ್ತಿನ ನಾಶಕ್ಕೆ ಕಾರಣವಾಗುತ್ತದೆ ॥

ತದ್ದೋಷ ಪರಿಹಾರಾಯ ಶಾಂತಿಕರ್ಮ ಸಮಾಚರೇತ್ ।

ಮಾಸೇವಾ ಜನ್ಮನಕ್ಷತ್ರೇ ದ್ವಾದಶಾಹೇsಪಿ ಕಾರಯೇತ್ ॥

ಈ ದೋಷದ ಪರಿಹಾರಕ್ಕಾಗಿ, ಶಾಂತಿಯನ್ನು ಮಾಡಬೇಕು । ೧ ತಿಂಗಳಲ್ಲಿಯಾಗಲೀ, ಆ ಹುಟ್ಟಿದ ನಕ್ಷತ್ರದಲ್ಲಾಗಲೀ ಅಥವಾ ೧೨ ನೇ ದಿನದಲ್ಲಾಗಲೀ ಮಾಡಬಹುದು ॥

ಪುಣ್ಯಾಹವಾಚನಂ ಕೃತ್ವಾ ನಾಂದೀಶ್ರಾದ್ಧ ಪುರಸ್ಸರಮ್ ।

ನವಗ್ರಹ ಸಮಾಯುಕ್ತಂ ಶಾಂತಿಹೋಮಂ ಸಮಾಚರೇತ್ ॥

ಪುಣ್ಯಾಹ, ನಾಂದಿಯನ್ನು ಮಾಡಿ । ನವಗ್ರಹಪುರಸ್ಸರವಾಗಿ ಶಾಂತಿಯನ್ನು ಮಾಡಬೇಕು ॥

ಆಚಾರ್ಯಂ ವರಯೇದಾದೌ ಸುಶೀಲಂ ಚ ಕುಟುಂಬಿನಮ್ ।

ಋತ್ವಿಜೋ ವರಯೇತ್ ಪಶ್ಚಾತ್ ಕಲಶಂ ಸ್ಥಾಪಯೇತ್ತತಃ ॥

ಸಾತ್ವಿಕರಾದ, ಗೃಹಸ್ಥರಾದವರನ್ನು ಆಚಾರ್ಯ, ಋತ್ವಿಜಸ್ಥಾನಕ್ಕೆ ಆಹ್ವಾನಿಸಬೇಕು । ನಂತರ ಕಲಶಗಳನ್ನು ಸ್ಥಾಪಿಸಬೇಕು ॥

ಗೋಮಯಾ ಲೇಪಿತೇದೇಶೇ ರಂಗವಲ್ಲೀ ಸುರಂಜಿತೇ ।

ದ್ರೋಣಪ್ರಮಾಣಂ ಧಾನ್ಯಂ ಚ ನಿರೀಕ್ಷೇನ್ಮಂಡಲೋಪರಿ ॥

ಸಗಣಿಯಿಂದ ಶುಚಿಗೊಳಿಸಿದ ನೆಲದಲ್ಲಿ, ರಂಗವಲ್ಲಿಗಳನ್ನು ಹಾಕಿ । ಅದರಮೇಲೆ ೮ ಸೇರು ಅಕ್ಕಿಯನ್ನು ಹಾಕಿ, ಕಲಶಸ್ಥಾಪನೆ ಮಾಡಬೇಕು ॥

ಸುಶ್ಲಕ್ಷ್ಣಮವ್ರಣಂ ಕುಂಭಂ ನವವಸ್ತ್ರೇಣ ವೇಷ್ಟಿತಮ್ ।

ಸ್ಥಾಪಯೇನ್ಮಂತ್ರವತ್ತತ್ರ ಜಪೇದಾಕಲಶೇತ್ಯೃಚಮ್ ॥

ಒಳ್ಳೆಯ, ಸ್ವಚ್ಛವಾಗಿರುವ, ಛಿನ್ನವಾಗದಿರುವ ಕಲಶಗಳನ್ನು ಹೊಸಬಟ್ಟೆಗಳಿಂದ ಸುತ್ತಬೇಕು । ಅದನ್ನು ಆ ಕಲಶೇಷು....., ಎಂಬ ಮಂತ್ರಗಳಿಂದ ಸ್ಥಾಪಿಸಿ, ಜಪಮಾಡಬೇಕು ॥

ಇಮಂ ಮ ಇತ್ಯಪಾಂ ಪೂರ್ಯ ಓಷಧೀತ್ಯೋಷಧೀಃ ಕ್ಷಿಪೇತ್ ।

ಪಂಚಗವ್ಯಂ ತು ನಿಕ್ಷಿಪ್ಯ ಪಂಚಪಲ್ಲವ ಸಂಯುತಮ್ ॥

ಇಮಂ ಮೇ....., ಎಂಬ ಮಂತ್ರದಿಂದ ನೀರನ್ನು ಕಲಶಗಳಿಗೆ ತುಂಬಿಸಿ, ಅದರಲ್ಲಿ ಓಷಧಯಃ ಸಂ....., ಎಂಬ ಮಂತ್ರದಿಂದ ಓಷಧಿಗಳನ್ನು ಹಾಕಬೇಕು । ಪಂಚಗವ್ಯ, ಪಂಚಚಿಗುರುಗಳನ್ನೂ ಒಟ್ಟಿಗೆ ಹಾಕಬೇಕು ॥

ಪಂಚರತ್ನಮಿದಂ ಸರ್ವಂ ತತ್ತನ್ಮಂತ್ರೈರ್ವಿನಿಕ್ಷಿಪೇತ್ ।

ತತಸ್ತು ಪ್ರತಿಮಾಃ ಕುರ್ಯಾತ್ ರೋಹಿಣೀ ಬ್ರಹ್ಮದೇವತಾ ॥

ಐ ರತ್ನಗಳನ್ನೂ ಆಯಾಯಾ ಮಂತ್ರಗಳಿಂದ ಹಾಕಬೇಕು । ನಂತರ ರೋಹಿಣಿ ಮತ್ತು ಬ್ರಹ್ಮದೇವತೆಗಳ ಪ್ರತಿಮೆಯನ್ನು ಅಲ್ಲಿಡಬೇಕು ॥

ಅಧಿದೇವೋ ಹುತಾಶಶ್ಚ ಚಂದ್ರಃ ಪ್ರತ್ಯಧಿದೈವತಮ್ ।

ನಿಷ್ಕ ನಿಷ್ಕಾರ್ಧಪಾದೇನ ಶಕ್ತ್ಯಾ ಸ್ವರ್ಣಮಯೈಸ್ತತಃ ॥

ರೋಹಿಣೀ ನಕ್ಷತ್ರಕ್ಕೆ ದೇವನು ಇಂದ್ರನಾದರೆ, ಅಧಿದೇವನು ಕೃತ್ತಿಕಾನಕ್ಷತ್ರದ ದೇವತೆಯಾದ ಅಗ್ನಿಯು ಮತ್ತೂ ಪ್ರತ್ಯಧಿದೇವನು ಮೃಗಶಿರಾನಕ್ಷತ್ರದ ದೇವತೆಯಾದ ಚಂದ್ರನು ಇವರುಗಳನ್ನು ಆವಾಹಿಸಬೇಕು । ೧ ತೊಲ ಅಥವಾ ಅರ್ಧತೊಲ ಚಿನ್ನವನ್ನು ಕಲಶದಲ್ಲಿ ಹಾಕಬೇಕು ॥

ಕುಂಭಂ ಸ್ಪೃಶನ್ ಜಪೇನ್ಮಂತ್ರಾನ್ ಪೌರುಷೋಕ್ತಾನ್ ತತಸ್ಸುಧೀಃ ।

ಶ್ರೀರುದ್ರಮಗ್ನಿಸೂಕ್ತಂ ಚ ಚಂದ್ರಸೂಕ್ತಂ ಯಥಾಕ್ರಮಮ್ ॥

ಕಲಶವನ್ನು ಮುಟ್ಟಿಕೊಂಡು, ಪುರುಷಸೂಕ್ತ । ರುದ್ರ, ಅಗ್ನಿಸೂಕ್ತ ಮತ್ತು ಚಂದ್ರಸೂಕ್ತ ಮಂತ್ರಗಳನ್ನು ಕ್ರಮವಾಗಿ ವಿದ್ವಾಂಸರು ಜಪಿಸಬೇಕು ॥

ಅಷ್ಟೋತ್ತರಶತಂ ಬ್ರಹ್ಮಮಂತ್ರಮಷ್ಟಸಹಸ್ರಕಮ್ ।

ಅಷ್ಟಾವಿಂಶತಿಮಷ್ಟೌ ವಾ ಜಪೇದಾಚಾರ್ಯ ಸಪ್ತಮಃ ॥

೬೦೦ ಅಥವಾ ೧೦೮ ಅಥವಾ ೨೮ ಅಥವಾ ೪ ಸಲ ಬ್ರಹ್ಮದೇವತೆಯ ಮಂತ್ರವನ್ನು ಆಚಾರ್ಯರಿಂದ ಕೂಡಿದ ೭ ಜನರು ಜಪಿಸಬೇಕು ॥

ಸ್ವಗೃಹ್ಯೋಕ್ತ ವಿಧಾನೇನ ಕುರ್ಯಾದಗ್ನಿಮುಖಂ ತತಃ ।

ಬ್ರಹ್ಮಣಾತೇತಿ ಮಂತ್ರೇಣ ಹುನೇತ್ ಘೃತ ಸಮಿಚ್ಚರೂನ್ ॥

ತನ್ನಶಾಖೆಯ ಗೃಹ್ಯಸೂತ್ರದಲ್ಲಿ ಹೇಳಿದ ರೀತಿ ಅಗ್ನಿಮುಖವನ್ನು ಮಾಡಿಕೊಳ್ಳಬೇಕು । ನಂತರ ಬ್ರಹ್ಮಣಾತೇ.....ಎಂಬ ಮಂತ್ರದಿಂದ ಸಮಿತ್ – ಚರು – ಆಜ್ಯಗಳಲ್ಲಿ ಹೋಮಿಸಬೇಕು ॥

ಅಗ್ನಿಸ್ತುವಿಶ್ರವಸ್ತಮಮ್ ಹುವೇತ್ ಘೃತ ಸಮಿಚ್ಚರೂನ್ ।

ಸಚಿತ್ರಚಿತ್ರ ಮಂತ್ರೇಣ ಹುವೇತ್ ಘೃತ ಸಮಿಚ್ಚರೂನ್ ॥

ಅಗ್ನಿಸ್ತುವಿಶ್ರವಸ್ತಮ್....., ಎಂಬ ಮಂತ್ರದಿಂದಲೂ ಇದೇ ದ್ರವ್ಯಗಳಲ್ಲಿ ಹೋಮಿಸಬೇಕು । ಸಚಿತ್ರಚಿತ್ರಂ....., ಎಂಬ ಮಂತ್ರದಿಂದಲೂ ಇದೇ ದ್ರವ್ಯಗಳಲ್ಲಿ ಹೋಮಿಸಬೇಕು ॥

ತತಸ್ಸ್ವಿಷ್ಟಕೃತಂ ಹುತ್ವಾ ಪೂರ್ಣಾಹುತಿಮಥಾಚರೇತ್ ।

ಪುನಶ್ಚ ಪೂಜಯೇತ್ ತದ್ವದಭಿಷೇಕಂ ತತಶ್ಚರೇತ್ ॥

ನಂತರ, ಸ್ವಿಷ್ಟಕೃತ್ತನ್ನು ಮಾಡಿ, ಪೂರ್ಣಾಹುತಿಯನ್ನು ಮಾಡಬೇಕು । ನಂತರ ಪುನಃ ಮೊದಲಿನಂತೆ ಕಲಶಗಳಿಗೆ ಪೂಜೆ ಹಾಗೂ ಅಭಿಷೇಕವನ್ನು ಯಥಾವಿಧಿಯಾಗಿ ಮಾಡಬೇಕು ॥

ಶಶೋಃ ಪಿತ್ರೋಶ್ಚ ಸಂಪ್ರೋಕ್ಷ್ಯ ಬ್ರಹ್ಮಣೇತ್ಯಾದಿ ಮಂತ್ರತಃ ।

ಆಪೋಹಿಷ್ಠೇತಿ ತಿಸೃಭಿಃ ಕಯಾನಶ್ಚಿತ್ರ ಏಕಯಾ ॥

ಯಜಮಾನನ ಮಕ್ಕಳು ಮತ್ತು ಯಜಮಾನನಿಗೆ ಬ್ರಹ್ಮಣಾತೇ....., ಮುಂತಾದ ಮಂತ್ರಗಳಿಂದ ಕಲಶದ ನೀರಿಂದ ಪ್ರೋಕ್ಷಣೆ ಮಾಡಬೇಕು । ಹಾಗೆಯೇ ಆಪೋಹಿಷ್ಠಾ...., ಎಂಬ ೩ ಮಂತ್ರಗಳಿಂದ ಮತ್ತೂ ಕಯಾನಶ್ಚಿತ್ರ...., ಎಂಬ ೧ ಮಂತ್ರದಿಂದಲೂ ಪ್ರೋಕ್ಷಣೆ ಮಾಡಬೇಕು ॥

ಸಮುದ್ರಜ್ಯೇಷ್ಠಾಶ್ಚ ತಿಸೃಭಿಃ ತ್ರಾಯಂತಾಮಿತಿ ತು ತ್ರಿಭಿಃ ।

ಪಾವಮಾನೈಶ್ಚ ರಾಕ್ಷೋಘ್ನೈಃ ಯತ ಇಂದ್ರೇತಿ ಮಂತ್ರತಃ ॥

ನಂತರ ಸಮುದ್ರಜ್ಯೇಷ್ಠಾ....., ಎಂಬ ೩ ಮಂತ್ರಗಳಿಂದಲೂ, ತ್ರಾಯಂತಾಂ..... ಎಂಬ ೩ ಮಂತ್ರಗಳಿಂದ ಹಾಗೂ ಪವಮಾನ – ರಾಕ್ಷೋಘ್ನ....., ಮಂತ್ರಗಳಿಂದಲೂ ಹಾಗೂ ಯತ ಇಂದ್ರ...., ಎಂಬ ಮಂತ್ರದಿಂದಲೂ ಪ್ರೋಕ್ಷಣೆ ಮಾಡಬೇಕು ॥

ಮಹಾಶಾಂತ್ಯುಕ್ತ ಮಂತ್ರೈಶ್ಚ ತತ ಆಜ್ಯಾವಲೋಕನಮ್ ।

ಅಭಿಷೇಕಾಪ್ಲುತಂ ವಸ್ತ್ರಂ ಆಚಾರ್ಯಾಯ ನಿವೇದಯೇತ್ ॥

ನಂತರ ಮಹಾಶಾಂತಿ (ಶನ್ನೋವಾತಃ) ಮಂತ್ರಗಳಿಂದಲೂ ಪ್ರೋಕ್ಷಣೆ ಮಾಡಬೇಕು, ನಂತರ ಆಜ್ಯದಲ್ಲಿ ತನ್ನ ಮುಖವನ್ನು ನೋಡಿಕೊಳ್ಳಬೇಕು । ನಂತರ ಅಭಿಷೇಕದಿಂದ ನೆನೆದ ತನ್ನ ಬಟ್ಟೆಯನ್ನು ಆಚಾರ್ಯರಿಗೆ ಕೊಡಬೇಕು ॥

ತತೋ ವಸ್ತ್ರಾಂತರಂ ಧೃತ್ವಾ ಬ್ರಾಹ್ಮಣಾನ್ ಸಮ್ಯಗರ್ಚಯೇತ್ ।

ಆಚಾರ್ಯಂ ಪೂಜಯೇತ್ಪೂರ್ವಂ ಗಂಧಮಾಲ್ಯಾದಿ ಭೂಷಣೈಃ ॥

ನಂತರ ಬೇರೇ ವಸ್ತ್ರವನ್ನು ಧರಿಸಿ, ಬ್ರಾಹ್ಮಣರಿಗೆ ಪೂಜೆಯನ್ನು ಮಾಡಬೇಕು । ಮೊದಲು ಆಚಾರ್ಯರಿಗೆ ಗಂಧಾದಿಗಳಿಂದ ಪೂಜಿಸಿ ॥

ಸವಸ್ತ್ರ ಪ್ರತಿಮಾಂ ಗಾಂ ಚ ಆಚಾರ್ಯಾಯ ಪ್ರದಾಪಯೇತ್ ।

ಋತ್ವಿಗ್ಭ್ಯೋ ದಕ್ಷಿಣಾಂ ದದ್ಯಾತ್ ಬ್ರಾಹ್ಮಣೇಭ್ಯಃ ಸ್ವಶಕ್ತಿತಃ ॥

ವಸ್ತ್ರಸಹಿತವಾದಂತಹ ಪ್ರತಿಮೆಯನ್ನು ಹಾಗೂ ಗೋವನ್ನು ದಕ್ಷಿಣೆಯಾಗಿ ಕೊಡಬೇಕು । ಋತ್ವಿಜರಿಗೆ ಹಾಗು ಬಂದಂತಹ ಬ್ರಾಹ್ಮಣರಿಗೆ ಯಥಾಶಕ್ತಿ ದಕ್ಷಿಣೆ ಕೊಡಬೇಕು ॥

ಬ್ರಾಹ್ಮಣಾನ್ ಭೋಜಯೇತ್ ಪಶ್ಚಾತ್ ಸ್ವಯಂ ಭುಂಜೀತ ಬಂಧುಭಿಃ ।

ಏತಚ್ಛಾಂತಿಂ ಪ್ರಕುರ್ವೀತ ಸರ್ವದೋಷೋಪ ಶಾಂತಯೇ ॥

ಶಿಶೋಃ ಪಿತ್ರೋರ್ಮಾತುಲಾನಾಂ ದೀರ್ಘಾಯುಷ್ಯಂ ನ ಸಂಶಯಃ ।

ನಂತರ ಬ್ರಾಹ್ಮಣರಿಗೆ ಭೋಜನ ಮಾಡಿಸಿ, ತನ್ನ ಬಂಧುಗಳ ಜೊತೆ ಊಟಮಾಡಬೇಕು । ಈ ರೀತಿಯಾಗಿ ಈ ಶಾಂತಿಯನ್ನು ಎಲ್ಲಾ ದೋಷಗಳ ಪರಿಹಾರಕ್ಕಾಗಿ ಮಾಡಬೇಕು । ಹೀಗೆ ಮಾಡಿದ ಶಾಂತಿಯು ಯಜಮಾನನಿಗೆ ಹಾಗೂ ಅವನ ಮಕ್ಕಳಿಗೆ ಹಾಗೂ ಬಂಧುಗಳಿಗೆ ದೀರ್ಘಾಯುಷ್ಯವನ್ನು ಕೊಡುವುದರಲ್ಲಿ ಸಂಶಯವಿಲ್ಲ ॥

॥ ಇತಿ ಶೌನಕೀಯೇ ರೋಹಿಣೀ ನಕ್ಷತ್ರ ಜನನಶಾಂತಿಃ ॥

*** ಈ ಶಾಂತಿಯಲ್ಲಿ ವಿಶೇಷವಾಗಿ ಬೇಕಾದ ವಸ್ತುಗಳು ಹಾಗೂ ಮಂತ್ರಗಳು –**

*** ಸಗಣಿಯಿಂದ ಸಾರಿಸಿದ ನೆಲ, ಅಕ್ಕಿ, ಕಲಶ, ವಸ್ತ್ರ, ಪಂಚಗವ್ಯ, ಪಂಚಪಲ್ಲವ, ಪಂಚರತ್ನ, ಇಂದ್ರ ಮತ್ತು ಬ್ರಹ್ಮದೇವರ ಪ್ರತಿಮೆ, ಚಿನ್ನ, ಸಮಿತ್, ಚರು, ಆಜ್ಯ, ಗೋ, ಅನ್ನದಾನ.**

*** ಇಂದ್ರ, ಅಗ್ನಿ, ಚಂದ್ರರ ಮಂತ್ರಗಳು, ಪುರುಷಸೂಕ್ತ, ರುದ್ರ, ಅಗ್ನಿಸೂಕ್ತ, ಚಂದ್ರಸೂಕ್ತ, ಬ್ರಹ್ಮಣಾತೇ, ಅಗ್ನಿಸ್ತುವಿಶ್ರವಸ್ತಮಮ್, ಸಚಿತ್ರ ಚಿತ್ರಂ, ಆಪೋಹಿಷ್ಠಾ, ಕಯಾನಶ್ಚಿತ್ರ, ಸಮುದ್ರಜ್ಯೇಷ್ಠಾ ಋಮಂತ್ರಗಳು, ತ್ರ್ಯಾಯಂತಾಂ ಋ ಮಂತ್ರಗಳು, ಪವಮಾನ, ರಾಕ್ಷೋಘ್ನ, ಯ ತ ಇಂದ್ರ, ಶನ್ನೋವಾತಃ ಪವತಾಂ ಮಂತ್ರಗಳು.**

****

೭. ಚಿತ್ರಾನಕ್ಷತ್ರ ಜನನ ಶಾಂತಿಃ

ಅಥ ಮಾಧವೀಯ ಸಂಹಿತಾ

ಚಿತ್ರಾನಕ್ಷತ್ರಜಾತಾನಾಮರಿಷ್ಟಂ ಚ ಪದಕ್ರಮಾತ್ ।

ಪಿತುಶ್ಚ ಮಾತುಶ್ಚ ಪಿತಾಮಹಸ್ಯ ಚ ಧನಸ್ಯ ಚ ॥

ಚಿತ್ರಾನಕ್ಷತ್ರದಲ್ಲಿ ಹುಟ್ಟಿದಂತಹ ಮಗುವು, ತಂದೆ–ತಾಯಿ–ಅಜ್ಜ ಮತ್ತೂ ಐಶ್ವರ್ಯಕ್ಕೆ ಅರಿಷ್ಟವನ್ನು ಉಂಟುಮಾಡುತ್ತದೆ ॥

ತದ್ದೋಷಪರಿಹಾರಾರ್ಥಂ ಶಾಂತಿಂ ವಕ್ಷ್ಯಾಮಿ ನಾರದ ।

ಗೋಮುಖಿಪ್ರಸವಂ ಕುರ್ಯಾದ್ಗ್ರಹಶಾಂತಿಮತಃ ಪರಮ್ ॥

ಆ ದೋಷ ಪರಿಪಾರಕ್ಕಾಗಿ, ಎಲ್ಲೈ ನಾರದರೇ, ಶಾಂತಿಯನ್ನು ಹೇಳುತ್ತೇನೆ, ಮೊದಲು ಗೋಮುಖಿ ಪ್ರಸವ ಶಾಂತಿಯನ್ನು ಮಾಡಿ, ಅನಂತರ ಗ್ರಹಶಾಂತಿಯನ್ನು ಮಾಡಬೇಕು ॥

ಸರ್ವಾರಿಷ್ಟನಿವೃತ್ತ್ಯರ್ಥಂ ದಶದಾನಂ ಯಥಾವಿಧಿ ।

ಗೃಹಸ್ಯೈಶಾನದಿಗ್ಭಾಗೇ ದಶಧಾನ್ಯಂ ಚ ನಿಕ್ಷಿಪೇತ್ ॥

ಎಲ್ಲಾ ಅನಿಷ್ಟ ನಿವಾರಣೆಗಾಗಿ, ಯಥಾವಿಧಿಯಾಗಿ ದಶದಾನಗಳನ್ನು ಮಾಡಬೇಕು, ನಂತರ ಮನೆಯ ಈಶಾನ್ಯದಲ್ಲಿ ದಶಧಾನ್ಯಗಳನ್ನು ಹಾಕಬೇಕು ॥

ಕುಂಭಸ್ಯ ಸ್ಥಾಪನಂ ಕುರ್ಯಾದ್ವಸ್ತ್ರೇಣ ಪರಿವೇಷ್ಟಯೇತ್ ।

ಗೃಹಸ್ಯೈಶಾನ ದಿಗ್ಭಾಗೇ ಮಂಟಪಂ ಕಾರಯೇತ್ತತಃ ॥

ನಂತರ ಕಲಶಸ್ಥಾಪನೆಯನ್ನು ಮಾಡಿ, ಆ ಕಲಶವನ್ನು ವಸ್ತ್ರದಿಂದ ಅಲಂಕರಿಸಿ, ಈಶಾನ್ಯದಲ್ಲಿ ಮಂಟಪವನ್ನು ರಚಿಸಬೇಕು ॥

ಚತುರ್ದ್ವಾರ ಸಮಾಯುಕ್ತಂ ಚಿತ್ರಧ್ವಜ ಪತಾಕಕಮ್ ।

ಗೋಮಯೇನೋಪಲಿಪ್ಯಾಥ ಸ್ಥಂಡಿಲಂ ಪರಿಕಲ್ಪಯೇತ್ ॥

ಆ ಮಂಟಪಕ್ಕೆ ೪ ಕಡೆಯಿಂದಲೂ ದ್ವಾರವಿರಬೇಕು. ಚಿತ್ರಗಳಿರುವ ಧ್ವಜಪತಾಕೆಗಳಿಂದ ಕೂಡಿರಬೇಕು. ನಂತರ ಗೋಮಯದಿಂದ ಶುದ್ಧಿಗೊಳಿಸಿದಂತಹ ಕುಂಡವನ್ನು ಹೋಮಕ್ಕಾಗಿ ನಿರ್ಮಿಸಬೇಕು ॥

ಸಂಕಲ್ಪಂ ಚ ತತಃ ಕೃತ್ವಾ ಪ್ರಾಣಾಯಾಮ ಪುರಸ್ಸರಮ್ ।

ಆಚಾರ್ಯಂ ವರಯೇದಾದೌ ಶ್ರೋತ್ರಿಯಂ ವೇದಪಾರಗಮ್ ॥

ನಂತರ ಪ್ರಾಣಾಯಾಮ ಪುರಸ್ಸರವಾಗಿ ಸಂಕಲ್ಪವನ್ನು ಮಾಡಿ, ಶ್ರೋತ್ರಿಯರಾದ, ವೇದಪಾರಗರಾದ, ಬ್ರಾಹ್ಮಣರನ್ನು ಆಚಾರ್ಯಸ್ಥಾನಕ್ಕೆ ಮೊದಲು ಆಹ್ವಾನಿಸಬೇಕು ॥

ಋತ್ವಿಜೋ ವರಯೇತ್ಪಶ್ಚಾತ್ ಶ್ರೋತ್ರಿಯಾಂಶ್ಚ ಕುಟುಂಬಿನಃ ।

ಪುಣ್ಯಾಹ ವಾಚನಂ ಕೃತ್ವಾ ಕುಂಭಂ ಸಂಸ್ಥಾಪ್ಯ ಯತ್ನತಃ ॥

ಗೃಹಸ್ಥರಾದಂತಹ ಶ್ರೋತ್ರಿಯರಾದ ಋತ್ವಿಜರನ್ನು ನಂತರ ಆಹ್ವಾನಿಸಬೇಕು । ನಂತರ ಪುಣ್ಯಾಹವಾಚನವನ್ನು ಮಾಡಿ, ಕುಂಭವನ್ನು(ಕಲಶ) ಸ್ಥಾಪನೆ ಮಾಡಬೇಕು ॥

ಸುವರ್ಣ ಪ್ರತಿಮಾಂ ಸ್ಥಾಪ್ಯ ರತ್ನೌಷಧಿ ಮೃದಾದಿಕಮ್ ।

ಪ್ರಧಾನಕುಂಭಮಾವಾಹ್ಯ ಚಿತ್ರಾನಕ್ಷತ್ರ ದೇವತಾಮ್ ॥

ಆ ಕುಂಭಕ್ಕೆ ಚಿನ್ನದ ಪ್ರತಿಮೆಯನ್ನು ಹಾಕಿ, ನಂತರ ಔಷಧಿ-ಮೃತ್ತಿಕೆ ಮುಂತಾದವುಗಳನ್ನು ಹಾಕಿ, ಪ್ರಧಾನ ಕಲಶದಲ್ಲಿ **ಚಿತ್ರಾನಕ್ಷತ್ರ ದೇವತೆಯನ್ನು ಆವಾಹಿಸಬೇಕು ॥**

ದಕ್ಷಿಣೋತ್ತರ ಪಾರ್ಶ್ವೇ ತು ಅಧಿಪ್ರತ್ಯಧಿ ದೇವತೇ?? ।

ಕುಂಭಸ್ಯ ದಕ್ಷಿಣೇಪಾರ್ಶ್ವೇ ಉಪಕುಂಭಂ ಪ್ರಪೂಜಯೇತ್ ॥

ಅದರ ದಕ್ಷಿಣೋತ್ತರ ಕಲಶಗಳಲ್ಲಿ ಹಸ್ತಾ ಮತ್ತು ಸ್ವಾತೀ ನಕ್ಷತ್ರಗಳ ದೇವತೆಗಳನ್ನು ಆವಾಹಿಸಬೇಕು । ಆ ಪ್ರಧಾನ ಕಲಶದ ದಕ್ಷಿಣದಲ್ಲಿರುವ ಉಪಕಲಶವನ್ನು ಪೂಜಿಸಬೇಕು ॥

ಪೂರ್ವೋಕ್ತೇನೈವ ಮಾರ್ಗೇಣ ಪೂಜಾಂ ಕೃತ್ವಾ ಯಥಾವಿಧಿ ।

ಆಚಾರ್ಯೇಣೈವ ಕರ್ತವ್ಯಂ ಜಪಹೋಮಾದಿಕಂ ತಥಾ ॥

ಹಿಂದೆ ಹೇಳಿದ ವಿಧಿಯಂತೆ ಕ್ರಮವಾಗಿ ಪೂಜಿಸಿ, ಆಚಾರ್ಯರಿಂದಲೇ ಜಪಹೋಮಾದಿಗಳು ಮಾಡಲ್ಪಡಬೇಕು ॥

ಪ್ರಧಾನಕುಂಭೇ ನಕ್ಷತ್ರದೇವತಾ ವಾಕ್ಯ ಕಾಷ್ಟಕಮ್ ।

ಸಹಸ್ರವಾರಂ ಜಪ್ತ್ವೈವ ಶತಮಷ್ಟೋತ್ತರಂ ತು ವಾ ॥

ಪ್ರಧಾನ ಕಲಶದಲ್ಲಿ, ನಕ್ಷತ್ರದೇವತೆಯ ಮಂತ್ರವನ್ನು ಅಥವಾ ಅದರ ಅಷ್ಟಕ ಶ್ಲೋಕವನ್ನು । ಸಾವಿರಸಲ ಅಥವಾ ನೂರಾಎಂಟು ಸಲ ಜಪವನ್ನು ಮಾಡಬೇಕು ॥

ಋತ್ವಿಜೋ ಜಪಕರ್ತಾರಃ ಸ್ಪೃಶಂತಶ್ಚೋಪಕುಂಭಕಮ್ ।

ಜಪವನ್ನು ಮಾಡುವ ಋತ್ವಿಜರು, ಉಪಕಲಶವನ್ನು ಮುಟ್ಟಿಕೊಂಡು, ತ್ವಷ್ಟಾಹತಪುತ್ರಃ... ಎಂಬ ಮತ್ತು ತ್ವಷ್ಟೇದಂ..., ಎಂಬ ಮತ್ತು ಚಂಡಿದೇವತೆಯ ಮಂತ್ರವನ್ನು ॥

ದಿಕ್ಪಾಲ ರುದ್ರಸೂಕ್ತಂ ಚ ಶ್ರೀಸೂಕ್ತಂ ಚ ಸ್ಪೃಶನ್ ಜಪೇತ್ ।

ಕುಂಭಸ್ಯ ಪಶ್ಚಿಮೇದೇಶೇ ಹೋಮಂ ಕುರ್ಯಾತ್ ಯಥಾವಿಧಿ ॥

ದಿಕ್ಪಾಲ – ರುದ್ರ ಸೂಕ್ತ – ಶ್ರೀಸೂಕ್ತ ಮಂತ್ರಗಳನ್ನೂ ಕಲಶವನ್ನು ಮುಟ್ಟಿಕೊಂಡು ಜಪಿಸಬೇಕು । ಕಲಶಗಳ ಪಶ್ಚಿಮಭಾಗದಲ್ಲಿ ಯಥಾವಿಧಿಯಾಗಿ ಹೋಮ ಮಾಡಬೇಕು ॥

ಕರ್ತುಃ ಸೂತ್ರೋಕ್ತಮಾರ್ಗೇಣ ಅಗ್ನಿಮುಖಾಂತಮಾಚರೇತ್ ।

ಸಮಿಧಃ ಪಾಯಸಂ ಚಾಜ್ಯಂ ಅಷ್ಟೌವಾಕ್ಯೈಶ್ಶತಂ ಹುವೇತ್ ॥

ಕರ್ತೃವು, ತನ್ನ ಶಾಖೆಗೆ ಅನುಸಾರವಾಗಿ, ಮುಖಾಂತದವರೆಗೆ ಪ್ರಯೋಗವನ್ನು ಮಾಡಿ । ಸಮಿತ್ತು – ಪಾಯಸ – ತುಪ್ಪ ಗಳಿಂದ ಆಯಾ ನಕ್ಷತ್ರಮಂತ್ರದ ೮ ವಾಕ್ಯಗಳಿಗೆ, ೧ ಸಲದಂತೆ ೧೦೦ ಸಲ ಹೋಮಿಸಬೇಕು ॥

ಜಪಮಂತ್ರಾದಿಕೈರ್ಹುತ್ವಾ ನಕ್ಷತ್ರೇ ಸರ್ವಮೇವ ಹಿ ।

ಜಯಾದಿ ಪರಿಷೇಚಾಂತಂ ಕೃತ್ವಾ ಕರ್ಮ ಸಮಾಪಯೇತ್ ॥

ಜಪ ಮಂತ್ರಾದಿಗಳಿಂದ, ಹೋಮಮಾಡಿ, ಹಾಗೂ ನಕ್ಷತ್ರಮಂತ್ರಗಳಿಂದಲೂ ಹೋಮಿಸಿ । ಜಯಾದಿಯೇ ಮೊದಲಾಗಿ ಪರಿಷೇಚನಾಂತದವರೆಗೆ ಪ್ರಯೋಗಮಾಡಿ ಕರ್ಮವನ್ನು ಮುಗಿಸಬೇಕು ॥

ಮಾತಾಪಿತ್ರೋಶ್ಶಿಶೋಶ್ಚಾಪಿ ನಿರೀಕ್ಷೇದಾಜ್ಯ ಪಾತ್ರಕಮ್ ।

ಏವಂ ಕೃತೇ ನ ಸಂದೇಹಃ ಸರ್ವಾರಿಷ್ಟಂ ಪ್ರಶಾಮ್ಯತಿ ॥

ತಾಯಿ ತಂದೆ ಮತ್ತು ಶಿಶುವು ತುಪ್ಪದಲ್ಲಿ ತಮ್ಮ ಮುಖವನ್ನು ನೋಡಿಕೊಳ್ಳಬೇಕು । ಈ ರೀತಿ ಮಾಡಲಾಗಿ ಎಲ್ಲಾ ಅರಿಷ್ಟಗಳೂ ನಿಸ್ಸಂದೇಹವಾಗಿ ಪರಿಹಾರವಾಗುತ್ತವೆ ॥

॥ ಇತಿ ಮಾಧವೀಯ ಸಂಹಿತಾಯಾಂ ಚಿತ್ರಾನಕ್ಷತ್ರ ಜನನ ಶಾಂತಿಃ ॥

*** ಈ ಶಾಂತಿಯಲ್ಲಿ, ವಿಶೇಷವಾಗಿ ಬೇಕಾದ ವಸ್ತುಗಳು ಮತ್ತೂ ಮಂತ್ರಗಳು –**

* ಗೋಮುಖಿಜನನ ಶಾಂತಿ, ವಶವಾನ, ೪ ದ್ವಾರವಿರುವ ಮಂಟಪ, ಧ್ವಜಪತಾಕೆ, ಸಗಣಿ, ಕಲಶಗಳು, ವಿಷ್ಣುವ ಪ್ರತಿಮೆ, ರತ್ನ, ಔಷಧಿವನಸ್ಪತಿ, ಸಮಿತ್ತು, ಪಾಯಸಾ, ತುಪ್ಪ.

* ಹಸ್ತಾ, ಚಿತ್ರಾ, ಸ್ವಾತೀ ನಕ್ಷತ್ರದೇವತೆಗಳ ಮಂತ್ರಗಳು. ತ್ವಷ್ಟಾಹತಪುತ್ರಃ ಮಂತ್ರ, ತ್ವಷ್ಟೇದಂ ಮಂತ್ರ, ಚಂಡಿಕಾಮಂತ್ರ, ದಿಕ್ಪಾಲಕಮಂತ್ರ, ರುದ್ರ, ಶ್ರೀಸೂಕ್ತಮಂತ್ರಗಳು.

****

೮. ಪುಷ್ಯ - ಪೂರ್ವಾಷಾಢಯೋಃ ಜನನ ಶಾಂತಿಃ

ಅಥ ಶೌನಕಃ

ಸುಖಾಸೀನಂ ಮುನಿಶ್ರೇಷ್ಠಂ ಗರ್ಗಂ ಮುನಿಗಣಾನ್ವಿತಂ ।

ಕೃತಾಂಜಲಿ ಪಟೋ ಭೂತ್ವಾ ಪರಿಪಪ್ರಚ್ಛ ಶೌನಕಃ ॥

ಸುಖಾಸೀನರಾದ, ಮುನಿಶ್ರೇಷ್ಠರಾದ, ಮುನಿಸಮೂಹದಿಂದ ಕೂಡಿದ, ಗರ್ಗಮುನಿಗಳನ್ನು । ಕೈಮುಗಿಯುತ್ತಾ, ಶೌನಕ ಮುನಿಗಳು ಮುಂದಿನ ಪ್ರಶ್ನೆಯನ್ನು ಮಾಡಿದರು ॥

ಪುಷ್ಯತೋಯರ್ಕ್ಷ ಸಂಭೂತ ಗಂಡದೋಷ ವಿನಿರ್ಣಯಂ ।

ತಸ್ಯ ಶಾಂತಿಂ ವಿಧಾನಂ ಚ ವದಮೇ ಮುನಿಸತ್ತಮ ॥

ಎಲ್ಲೈ ಮುನಿಶ್ರೇಷ್ಠರೇ, ಪುಷ್ಯನಕ್ಷತ್ರದಲ್ಲಿ ಮತ್ತು ಪೂರ್ವಾಷಾಢಾ ನಕ್ಷತ್ರದಲ್ಲಿ ಹುಟ್ಟಿದ ಮಗುವಿಗೆ ಗಂಡದೋಷವೆಂಬ ದೋಷವು ನಿಶ್ಚಯವಾಗಿ ಬರುತ್ತದೆ । ಆ ದೋಷಪರಿಹಾರಕ್ಕೆ ಶಾಂತಿಯ ವಿಧಾನವನ್ನು ನನಗೆ ತಿಳಿಸಿಕೊಡಿರಿ ॥

ಶೌನಕಸ್ಯ ವಚಶ್ಶ್ರುತ್ವಾ ಪ್ರತ್ಯುವಾಚ ಮಹಾಮುನಿಃ ।

ಶೌನಕರ ಮಾತನ್ನು ಕೇಳಿದ, ಮಹಾಮುನಿಗಳಾದ ಗರ್ಗರು ಈ ರೀತಿ ಹೇಳಿದರು ॥

ಅಥ ವೃದ್ಧ ಗಾರ್ಗ್ಯಃ

ಶೃಣು ಶೌನಕ ಯತ್ನೇನ ಗಂಡದೋಷ ವಿನಿರ್ಣಯಮ್ ।

ಶಾಂತಿಕರ್ಮ ವಿಧಾನಂ ಚ ಯಥಾವತ್ಕಥಯಾಮ್ಯಹಮ್ ॥

ಎಲ್ಲೈ ಶೌನಕರೇ ಕೇಳಿರಿ, ಗಂಡದೋಷದ ಬಗ್ಗೆಯೂ ನಿಶ್ಚಯಪೂರ್ವಕವಾಗಿ ಹೇಳುತ್ತೇವೆ । ಹಾಗೆಯೇ ಅದರ ಪರಿಹಾರಕ್ಕೆ ಶಾಂತಿಕರ್ಮದ ವಿಧಾನವನ್ನೂ ಯಥಾವತ್ತಾಗಿ ಹೇಳುತ್ತೇನೆ ॥

ಚಂದ್ರೋದಯೇ ಪುಷ್ಯ ಜಲರ್ಕ್ಷಜಾತೋ ನಿಹಂತಿ ತಾತಂ ಜನನೀಂ ಸಪುತ್ರಾಂ ।

ಪುಷ್ಯೇ ಜಲರ್ಕ್ಷೇ ಪಿತೃಮಾತೃ ಪುತ್ರ ತನ್ಮಾತುಳಂ ಹಂತಿ ಪದಕ್ರಮೇಣ ॥

ಚಂದ್ರೋದಯದಲ್ಲಿ ಪುಷ್ಯನಕ್ಷತ್ರವು ಅಥವಾ ಪೂರ್ವಾಷಾಢನಕ್ಷತ್ರವು ಇದ್ದರೆ, ಆ ಹೊತ್ತಿನಲ್ಲಿ ಹುಟ್ಟಿದ ಮಗುವು ತಂದೆಯನ್ನು ಮತ್ತು ಪುತ್ರಸಹಿತಳಾದ ತಾಯಿಯನ್ನೂ ಪೀಡಿಸುತ್ತದೆ । ಅಲ್ಲದೇ ಪುಷ್ಯನಕ್ಷತ್ರದಲ್ಲಿ

ಹುಟ್ಟಿದ ಮಗುವು ತಂದೆ, ತಾಯಿ, ಮಗ ಮತ್ತು ಸೋದರಮಾವಂದಿರಿಗೆ ಅನಿಷ್ಟವಾಗುತ್ತದೆ, ನಕ್ಷತ್ರದ ಪಾದಕ್ರಮಕ್ಕನುಸಾರವಾಗಿ ॥

ಅಥ ಅಗಸ್ತ್ಯಃ

ತ್ವಾಷ್ಟ್ರೇ ಚ ತಿಷ್ಯೇ ಚ ತಥಾ ಚ ತೋಯೇ ಕನ್ಯಾ ಕುಳೀರೋದಯ ಚಾಪಲಗ್ನೇ ।

ಶುಭಗ್ರಹಃ ಪಶ್ಯತಿ ಚೇನ್ನಹನ್ಯಾತ್ ಪಿತ್ರ್ಯಂಶ್ಚ ಮಾತ್ರ್ಯಂಶ್ಚ ಸುತಂ ಚ ಮಾತುಳಮ್ ॥

ಚಿತ್ತಾ, ಪುಷ್ಯ, ಪೂರ್ವಾಷಾಢ ಮತ್ತು ಕನ್ಯಾಲಗ್ನ, ಕಟಕಲಗ್ನ, ಧನುರ್ಲಗ್ನ । ಇಷ್ಟನ್ನೂ ಶುಭಗ್ರಹವು ನೋಡಿದರೆ ಆಗ ಈಮೇಲೆ ಹೇಳಿದ ದೋಷವು ಬರುವುದಿಲ್ಲ ॥

ಅಥ ವಸಿಷ್ಠಃ

ಪುಷ್ಯೇ ಕರ್ಕಟಕೇ ಚಾಪೇ ಜಲಾಂಶೇ ಪಿತೃ ಮೃತ್ಯುಕೇ ।

ಪುತ್ರೋ ಜಾತೋ ಯದಿ ಭವೇನ್ಮಾತರಂ ಸಜಿಘಾಂಸತಿ ॥

ಪುಷ್ಯನಕ್ಷತ್ರದಲ್ಲಿ, ಕರ್ಕಾಟಕ ಲಗ್ನದಲ್ಲಿ, ಅಥವಾ ಧನುರ್ಲಗ್ನದಲ್ಲಿ ಈ ರೀತಿಯಾದ ಜಲರಾಶಿಗಳಲ್ಲಿ ಹಾಗೂ ತಂದೆಯ ಮರಣ ಸಂದರ್ಭಗಳಲ್ಲಿ । ಒಂದುವೇಳೆ ಮಗನು ಹುಟ್ಟಿದರೆ, ಅವನು ತಾಯಿಯ ಮರಣಕ್ಕೆ ಕಾರಣನಾಗುತ್ತಾನೆ ॥

ಪೂರ್ವಾಷಾಢೇ ಚ ಪುಷ್ಯೇ ಚ ಪಿತರಂ ಮಾತರಂ ಸುತಂ ।

ಮಾತುಳಂ ಚ ತಥಾ ಹನ್ಯಾತ್ ಪ್ರಥಮಾದ್ಯಂಶಜಃ ಕ್ರಮಾತ್ ॥

ಪುಷ್ಯಾ ಮತ್ತು ಪೂರ್ವಾಷಾಢಾ ನಕ್ಷತ್ರಗಳಲ್ಲಿ ಹುಟ್ಟಿದ ಮಗುವು, ತಂದೆ–ತಾಯಿ ಹಾಗೂ ಮಗ । ಸೋದರಮಾವ ಇವರನ್ನು ಕ್ರಮವಾಗಿ ೪ ಪಾದಗಳಲ್ಲಿ ಕೊಲ್ಲುವವನಾಗುತ್ತಾನೆ ॥

ಅವಯೋಗೇ ಕಷ್ಟದಿನೇ ವಿಷ್ಟಿ ವೈಧೃತಿ ಸಂಯುತೇ ।

ಗಂಡ ವ್ಯಾಘಾತ ಶೂಲೇ ಚ ಪರಿಘೇಚಾರ್ಧ ಪೂರ್ವಕೇ ॥

ಮಂಯೋಗದಲ್ಲಿ, ಅತಿಕಷ್ಟದಿನಗಳಲ್ಲಿ, ವಿಷ್ಟಿ(ವ್ಯತೀಪಾತ) ಮತ್ತು ವೈಧೃತಿಗಳಿಂದ ಕೂಡಿದ ದಿನಗಳಲ್ಲಿ । ಹಾಗೂ ಗಂಡ, ವ್ಯಾಘಾತ, ಶೂಲ ಹಾಗೂ ಪರಿಘ ಈ ಯೋಗಗಳ ಪೂರ್ವಾರ್ಧಗಳಲ್ಲಿ ॥

ಚಂದ್ರಾಷ್ಟಕೇ ನೈಧನೇಚ ತತ್ರ ವಿಷ್ಟಿ ಸಮನ್ವಿತೇ ।

ಬಲವಾನ್ಜಾಯತೇ ದೋಷಸ್ತಿಷ್ಯತೋಯ ಸಮುದ್ಭವೇ ॥

ಲಗ್ನದಿಂದ ೮ ನೇಸ್ಥಾನದಲ್ಲಿ ಚಂದ್ರನಿರುವುದು, ಮತ್ತೂ ಲಗ್ನಾಷ್ಟಮಕ್ಕೆ ಚಂದ್ರನ ದೃಷ್ಟಿ ಇದ್ದು । ವ್ಯತೀಪಾತದಿಂದ ಕೂಡಿದ್ದರೆ, ಆಗ ಅತ್ಯಂತ ಬಲಯುತವಾದ ದೋಷವು ಪುಷ್ಯ, ಪೂರ್ವಾಷಾಢಾನಕ್ಷತ್ರಗಳಲ್ಲಿ ಹುಟ್ಟಿದವರಿಗೆ ಉಂಟಾಗುತ್ತದೆ ॥

ಶಾಂತಿಂ ತಸ್ಯ ಪ್ರವಕ್ಷ್ಯಾಮಿ ಗಂಡದೋಷ ಪ್ರಶಾಂತಯೇ ।

ಸುದಿನೇ ಶುಭ ನಕ್ಷತ್ರೇ ಚಂದ್ರತಾರಾ ಬಲಾನ್ವಿತೇ ॥

ಈ ದೋಷಗಳ ಶಾಂತಿಗೋಸ್ಕರ ಹಾಗೂ ಗಂಡದೋಷದ ಪರಿಹಾರಕ್ಕೆ, ಶಾಂತಿಕರ್ಮಗಳನ್ನು ಹೇಳುತ್ತೇನೆ । ಪಂಚಾಂಗಶುದ್ಧಿಯಿರುವ ಒಳ್ಳೆಯ ದಿನಗಳಲ್ಲಿ ॥

ಸೂತಕಾಂತೇ ತಥಾ ಕುರ್ಯಾತ್ ತಿಷ್ಯ ತೋಯರ್ಕ್ಷ ಶಾಂತಿಕಂ ।

ಸುರಾಚಾರ್ಯಂ ಪೀತವರ್ಣಂ ಚತುರ್ಭುಜ ಸಮನ್ವಿತಮ್ ॥

ಸೂತಕವು ಕಳೆದನಂತರ, ಪುಷ್ಯ-ಪೂರ್ವಾಷಾಢ ನಕ್ಷತ್ರದ ಶಾಂತಿಯನ್ನು(ಇದಕ್ಕೆ ಋಕ್ಷಶಾಂತಿ ಎಂದು ಹೆಸರು) । ದೇವಗುರುವಾದ ಬೃಹಸ್ಪತಿಯನ್ನು ಕುರಿತು ಶಾಂತಿಯನ್ನು ಮಾಡಬೇಕು ॥

ಕಮಂಡಲ್ವಕ್ಷ ಸೂತ್ರಾಢ್ಯಾಂ ವರದಾಭಯ ಪಾಣಿಕಾಂ ।

ಕುರ್ಯಾತ್ ಪ್ರತಿಕೃತಿಂ ರಮ್ಯಾಂ ದೇವಪೂಜ್ಯ ಬೃಹಸ್ಪತೇಃ ॥

ಕಮಂಡಲು, ಅಕ್ಷಸೂತ್ರ, ಅಭಯಹಸ್ತದಿಂದ ಕೂಡಿದ । ಸುಂದರವಾದ ದೇವಪೂಜ್ಯನಾದ ಬೃಹಸ್ಪತಿಯ ಪ್ರತಿಮೆಯನ್ನು ಮಾಡಬೇಕು ॥

ಕರ್ಷಮಾತ್ರ ಸುವರ್ಣೇನ ಕರ್ಷಾರ್ಧೇನಾಥ ವಾ ಪುನಃ ।

ತದರ್ಧೇನಾಥ ವಾ ಕುರ್ಯಾತ್ ವಿತ್ತಶಾಷ್ಯಂ ನ ಕಾರಯೇತ್ ॥

೧ ತೊಲ, ಅಥವಾ ಅರ್ಧತೊಲ ಚಿನ್ನ । ಅಥವಾ ಅದರರ್ಧ ಚಿನ್ನದಿಂದ ಪ್ರತಿಮೆಯನ್ನು ಮಾಡಬೇಕು, ಜಿಪುಣತನ ಮಾಡಬಾರದು ॥

ಕುರ್ಯಾದೇವಂ ವಿಧಾನೇನ ಜಲಗಂಡೇ ಚ ಶೌನಕ ।

ವರುಣಂ ಶ್ವೇತವರ್ಣಂ ಚ ದ್ವಿಭುಜಂ ನಕ್ರವಾಹನಮ್ ॥

ಎಲೈ ಶೌನಕರೇ, ಜಲಗಂಡ(ನೀರಿನಿಂದ ಆಪತ್ತು) ದೋಷವಿದ್ದಾಗ, ಈ ವಿಧಾನದಿಂದಲೇ ಶಾಂತಿಯನ್ನು ಮಾಡಬೇಕು । ಸರ್ವಾಲಂಕೃತನಾದ ವರುಣನನ್ನು ಪೂಜಿಸಬೇಕು ।

ಕಮಂಡಲುಧರಂ ದೇವಂ ಕುರ್ಯಾತ್ ಪ್ರತಿಕೃತಿಂ ತತಃ ।

ಆಚಾರ್ಯಂ ವೇದಶಾಸ್ತ್ರಜ್ಞಂ ಸದಾಚಾರ ಸಮನ್ವಿತಮ್ ॥

ಇಂತಹ ವರುಣನ ಪ್ರತಿಮೆಯನ್ನು ಮಾಡಿ । ವೇದಶಾಸ್ತ್ರಜ್ಞನಾದ, ಸಾತ್ವಿಕನಾದ ಬ್ರಾಹ್ಮಣನನ್ನು ಆಚಾರ್ಯಸ್ಥಾನಕ್ಕೆ ಆಹ್ವಾನಿಸಬೇಕು ॥

ಜಿತೇಂದ್ರಿಯಂ ಸಪತ್ನೀಕಂ ಶಾಂತಂ ಶಾಂತಕುಟುಂಬಿನಂ ।

ಶಾಂತಿಕರ್ಮ ವಿಧಾನಜ್ಞಂ ದೈವಜ್ಞಂ ಸಂಪರೀಕ್ಷ್ಯ ಚ ॥

ಸದಾಚಾರ ಸಂಪನ್ನನಾದ, ಸಪತ್ನೀಕನಾದ, ಈ ಶಾಂತಿಕರ್ಮದ ವಿಧಾನವನ್ನು ತಿಳಿದುಕೊಂಡ, ಜ್ಯೋತಿಷಿಯಾದ ಇಂತಹವನನ್ನು ಹುಡುಕಿ ॥

ಆಹೂಯ ಪೂಜಯೇದ್ದೀಮಾನ್ವಸ್ತ್ರಮಾಲ್ಯಾನು ಲೇಪನೈಃ ।

ತತಸ್ತು ಚತುರೋ ವಿಪ್ರಾನ್ ವೇದವೇದಾಂಗ ಪಾರಗಾನ್ ॥

ಅವರನ್ನು ಆಹ್ವಾನಿಸಿ, ವಸ್ತ್ರ, ಹೂ, ಗಂಧಾದಿಗಳಿಂದ ಪೂಜಿಸಿ, ಸತ್ಕರಿಸಬೇಕು । ನಂತರ ೪ ವೇದವೇದಾಂಗ ಪಾರಗರಾದ ಬ್ರಾಹ್ಮಣರನ್ನು ॥

ಸುರೂಪಾನ್ ಶ್ರೋತ್ರಿಯಾನ್ ದಾಂತಾನ್ ಸುಶಾಂತಾನ್ ವಿಜಿತೇಂದ್ರಿಯಾನ್ ।

ಅರ್ಚಯೇದ್ಗಂಧ ಮಾಲ್ಯಾದ್ಯೈರ್ವಸ್ತ್ರಾಭರಣಕೈಸ್ತಥಾ ॥

ಒಳ್ಳೆಯ ರೂಪವುಳ್ಳ, ಶ್ರೋತ್ರಿಯರಾದ, ಕ್ಷಮೆ, ಶಾಂತತೆಯುಳ್ಳವರಾದ, ಇಂದ್ರಿಯ ನಿಗ್ರಹವುಳ್ಳವರಾದ । ಅಂತಹವರನ್ನು ಆಹ್ವಾನಿಸಿ, ಪೂಜಿಸಬೇಕು ॥

ಶಾಲಿತಂಡುಲ ಮಧ್ಯೇತು ಪದ್ಮಸ್ಯೋಪರಿ ಪೂಜಯೇತ್ ।

ಬೃಹಸ್ಪತೇತೀ ಮಂತ್ರೇಣ ಪೂಜಯೇತ್ ಪ್ರಯತೋದ್ವಿಜಃ ॥

ಭತ್ತ, ಅಕ್ಕಿಗಳ ನಡುವೆ ಇರುವಂತಹ ಕಮಲದ ಮೇಲೆ । ಬೃಹಸ್ಪತೇ:..., ಎಂಬ ಮಂತ್ರದಿಂದ, ಬೃಹಸ್ಪತಿಯನ್ನು ಬ್ರಾಹ್ಮಣನು ಪೂಜಿಸಬೇಕು ॥

ಗಂಧ ಪುಷ್ಪೈರ್ಧೂಪ ದೀಪೈರ್ನಾನಾದೀಪ ಸಮನ್ವಿತೈಃ ।

ಪೀತವಸ್ತ್ರದ್ವಯೋಪೇತಂ ಪೂಜಯೇದ್ವಿಧಿನಾ ತತಃ ॥

ವಿಧಿಯಂತೆ, ಗಂಧಾದಿಗಳಿಂದ, ಹಳದಿವಸ್ತ್ರದಿಂದ ಕೂಡಿದ ವೇದಗುರುವನ್ನು ಪೂಜಿಸಬೇಕು ॥

ತತ್ರ ಸಂಸ್ಥಾಪಯೇತ್ಕುಂಭಾನ್ ಚತುರ್ದಿಕ್ಷು ವಿಶೇಷತಃ ।

ದಿಕ್ಪಾಲ ಪ್ರತಿಮಾಂ ಕುರ್ಯಾದ್ಯಥಾ ವಿತ್ತಾನುಸಾರತಃ ॥

ಅಲ್ಲೇ, ೪ ದಿಕ್ಕುಗಳಲ್ಲಿ, ೪ ಕಲಶಗಳನ್ನಿಟ್ಟು, ಯಜಮಾನನ ಸಂಪತ್ತಿಗೆ ತಕ್ಕಂತೆ । ದಿಕ್ಪಾಲಕರ ಪ್ರತಿಮೆಯನ್ನೂ ಮಾಡಿ ॥

ಪುಣ್ಯೋದಕ ಸಮಾಯುಕ್ತಾನ್ ವಸ್ತ್ರಮಾಲ್ಯೈರ್ವಿಭೂಷಿತಾನ್ ।

ಕುಂಭೇಷು ವಿನ್ಯಸೇದ್ಧೀಮಾನ್ ಪಂಚಗವ್ಯಂ ಸಮಂತ್ರಕಮ್ ॥

ಅವುಗಳಿಗೆ, ಶುದ್ಧನೀರಿಂದ, ಹಾಗೂ ವಸ್ತ್ರಾದಿಗಳಿಂದ ಪೂಜಿಸಬೇಕು । ಕಲಶಗಳಿಗೆ, ಪಂಚಗವ್ಯವನ್ನು ಮಂತ್ರಸಹಿತವಾಗಿ ಹಾಕಬೇಕು ॥

ಪಂಚಾಮೃತಂ ಪಂಚರತ್ನಂ ಮೃತ್ತಿಕಾಸ್ಸಪ್ತ ಸಂಖ್ಯಯಾ ।

ಪಂಚವೃಕ್ಷ ಕಷಾಯಾಣಿ ಪಂಚಪಲ್ಲವಕಾಂಸ್ತಥಾ ॥

ನಂತರ ಪಂಚಾಮೃತವನ್ನೂ, ೫ ರತ್ನಗಳನ್ನೂ, ೭ ಪುಣ್ಯಕರ ಮಣ್ಣುಗಳನ್ನು । ಹಾಗೂ ೫ ವಿವಿಧಮರಗಳ ತೊಗಟೆಗಳನ್ನು, ೫ ವಿವಿಧ ಮರಗಳ ಚಿಗುರುಗಳನ್ನು ॥

ಸುವರ್ಣ ಕುಶ ದೂರ್ವಾಶ್ಚ ಸರ್ವೌಷಧ್ಯಾದಿ ನಿಕ್ಷಿಪೇತ್ ।

ಪೂಜಯೇದ್ವಾರುಣೈಸ್ಸೂಕ್ತೈಃ ಕುಂಭಾನ್ ಸರ್ವಾನ್ ಪ್ರಯತ್ನತಃ ॥

ಹಾಗೂ ಚಿನ್ನ, ದರ್ಭೆ, ದೂರ್ವೆ, ಎಲ್ಲಾ ಓಷಧಿವನಸ್ಪತಿಗಳನ್ನೂ ಆ ಕಲಶಗಳಿಗೆ ಹಾಕಬೇಕು । ನಂತರ ವರುಣಮಂತ್ರದಿಂದ, ವರುಣನನ್ನು ಆವಾಹಿಸಿ, ಪೂಜಿಸಬೇಕು ॥

ಆನೋಭದ್ರಾ ಭವೇದಾದೌ ಭದ್ರಾ ಅಗ್ನೇ ದ್ವಿತೀಯಕಂ ।

ತೃತೀಯಂ ಪುರುಷಸೂಕ್ತಂ ಚ ಕದ್ರುದ್ರಾಯ ಚತುರ್ಥಕಮ್ ॥

ಆನೋಭದ್ರಾ... ಎಂಬ ಮಂತ್ರ, ಮೊದಲನೆಯದು ಮತ್ತೂ ಭದ್ರಾ ಅಗ್ನೇ... ಎಂಬುದು ಎರಡನೆಯದು । ೩ ನೇಯದು ಪುರುಷಸೂಕ್ತವು, ೪ ನೆಯದು ಕದ್ರುದ್ರಾಯ... ಎಂಬ ಈ ೪ ಮಂತ್ರಗಳಿಂದ ಕ್ರಮವಾಗಿ ೪ ಕಲಶಗಳಿಗೆ ಆವಾಹಿಸಬೇಕು ॥

ಪೂಜಯೇಯುಶ್ಚ ಪುಷ್ಪಾದ್ಯೈಶ್ಚತ್ವಾರೋ ವೇದಪಾರಗಾಃ ।

ಜಪಂ ಕುರ್ಯುಃ ಪ್ರಯತ್ನೇನ ಮಂತ್ರೈರೇಭಿಃ ಪೃಥಕ್ ಪೃಥಕ್ ॥

ಹೂ ಮುಂತಾದವುಗಳಿಂದ ವೇದಪಾರಂಗತರಾದ ೪ ಬ್ರಾಹ್ಮಣರು ಪೂಜಿಸಬೇಕು । ನಂತರ ಈ ಮೇಲೆಹೇಳಿದ ಮಂತ್ರಗಳಿಂದಲೇ ಬೇರೆಬೇರೆಯಾಗಿ ಶ್ರದ್ಧೆಯಿಂದ ಜಪವನ್ನು ಮಾಡಬೇಕು ॥

ಆಚಾರ್ಯೋ ಮೂಲಮಂತ್ರೇಣ ಜಪಂ ಕುರ್ಯಾತ್ ಪ್ರಯತ್ನತಃ ।

ಇತ್ಥಂ ಸಂಪೂಜ್ಯ ದೇವೇಶಂ ವರುಣಂ ವಾ ಯಥಾಕ್ರಮಮ್ ॥

ಆಚಾರ್ಯರಾದರೋ, ಮೂಲಮಂತ್ರದಿಂದ ಜಪಮಾಡಬೇಕು । ಈರೀತಿಯಾಗಿ ಇಂದ್ರ, ವರುಣಾದಿ ದೇವತೆಗಳನ್ನು ಪೂಜಿಸಬೇಕು ॥

ಅಶ್ವತ್ಥವೃಕ್ಷ ಸಂಭೂತೈಶ್ಶತಮಷ್ಟೋತ್ತರಂ ಹುವೇತ್ ।

ಘೃತ ಪಾಯಸ ಸಂಯುಕ್ತಂ ಮೂಲಮಂತ್ರೇಣ ವಾಗ್ಯತಃ ॥

ಅಶ್ವತ್ಥಸಮಿತ್ತಿನಿಂದ, ೧೦೮ ಸಲ ಹೋಮ ಮಾಡಬೇಕು । ಹಾಗೆಯೇ ಮೂಲಮಂತ್ರದಿಂದ ತುಪ್ಪ–ಪಾಯಸ ಮಿಶ್ರಣದಿಂದ ೧೦೮ ಸಲ ಮಾತುಗಳನ್ನಾಡದೇ ಶ್ರದ್ಧೆಯಿಂದ ಹೋಮಿಸಬೇಕು ॥

ತಿಲೈರ್ವ್ಯಾಹೃತಿಭಿಶ್ಚೈವ ಹುವೇತ್ ಅಷ್ಟೋತ್ತರಂ ಶತಂ ।

ಗೃಹಸ್ಯ ಪೂರ್ವದಿಗ್ಭಾಗೇ ಉತ್ತರಸ್ಯಾಮಥಾಪಿ ವಾ ॥

ಹಾಗೂ ಎಳ್ಳನ್ನೂ ಸಹ ೧೦೮ ಸಲ ಹೋಮಿಸಿ, ವ್ಯಾಹೃತಿಗಳಿಂದ ಹೋಮಿಸಬೇಕು । ಮನೆಯ ಪೂರ್ವ ಅಥವಾ ಉತ್ತರದಲ್ಲಿ ॥

ಮಂಟಪಂ ಕಾರಯೇದ್ವಿದ್ವಾನ್ ತೋರಣಾದ್ಯೈಸ್ಸುಶೋಭಿತಮ್ ।

ಗೃಹೇವಾऽಥ ಪ್ರಕುರ್ವೀತ ಶಾಂತಿಕರ್ಮ ವಿಧಾನತಃ ॥

ಮನೆಯಹೊರಗೆ ಮಂಟಪವನ್ನು ರಚಿಸಿ, ಅದಕ್ಕೆ ಅಲಂಕಾರಗಳನ್ನು ಮಾಡಬೇಕು । ಅಥವಾ ಮನೆಯಲ್ಲಿಯೇ ಶಾಂತಿಕರ್ಮವನ್ನು ಮಾಡಬಹುದು ॥

ಹೋಮಾರ್ಥಂ ಕಾರಯೇತ್ಕುಂಡಂ ಸ್ಥಂಡಿಲಂ ವಾ ವಿಚಕ್ಷಣಃ ।

ಸರ್ವಶಾಂತಿಕರಾಯೈವ ತತ್ರಹೋಮಂ ಸಮಾಚರೇತ್ ॥

ಹೋಮಕ್ಕಾಗಿ, ಒದ್ದೆಯಾವ ನೆಲದಲ್ಲಿ ಕುಂಡವನ್ನು ಮಾಡಬೇಕು । ಆ ಕುಂಡದಲ್ಲಿ ಎಲ್ಲಾ ಶಾಂತಿಕರ್ಮವನ್ನು ಮಾಡಬೇಕು ॥

ಬೃಹಸ್ಪತೇ ಪರಿದೀಯೇತ್ಯಸ್ಯ ಮಂತ್ರಸ್ಯ ಅಪ್ರಥಿರಥ ಋಷಿಃ ।

ಬೃಹಸ್ಪತಿರ್ದೇವತಾ ತ್ರಿಷ್ಟುಪ್ಛಂದಃ ॥

ಕುಂಕುಮಗಂಧಃ । ಸರೋರುಹ ಪುಷ್ಪಂ ।

ಬೃಹಸ್ಪತೇ ಪರಿದೀಯಾ....., ಎಂಬ ಮಂತ್ರಕ್ಕೆ ಅಪ್ರಥಿರಥ ಋಷಿಯು । ಬೃಹಸ್ಪತಿಯು ದೇವತೆಯು, ತ್ರಿಷ್ಟುಪ್ ಛಂದಸ್ಸು । ಕುಂಕುಮಗಂಧ – ಕಮಲಪುಷ್ಪ ।

ಬೃಹಸ್ಪತೇ ಪರಿದೀಯಾ ರಥೇನ ರಕ್ಷೋಹಾऽಮಿತ್ರಾಂ ಅಪಬಾಧಮಾನಃ ।

ಪ್ರಭಂಜನ್ಸೈನಾಃ ಪ್ರಮೃಣೋಯುಧಾऽಜಯನ್ನಸ್ಮಾಕಮೇಧ್ಯವಿತಾ ರಥಾನಾಮ್ ॥

ಇದು ಮಂತ್ರವು ॥

ಪೂರ್ವಾಷಾಢರ್ಕ್ಷ ಗಂಡೇ ತು ಸಮಿದ್ಭಿರ್ಬ್ರಹ್ಮ ವೃಕ್ಷಕೈಃ ।

ಚರುಣಾ ಪಾಯಸೇನೈವ ತಿಲ ವ್ಯಾಹೃತಿಭಿರ್ಹುವೇತ್ ॥

ಪೂರ್ವಾಷಾಢ ನಕ್ಷತ್ರ ಶಾಂತಿಗೆ ಬ್ರಹ್ಮವೃಕ್ಷಗಳ ಸಮಿತ್ತಿನಿಂದ । ಹಾಗೂ ಚರು – ಪಾಯಸಾ – ಎಳ್ಳುಗಳಿಂದ ವ್ಯಾಹೃತಿಮಂತ್ರ ಪೂರ್ವಕವಾಗಿ ಹೋಮಮಾಡಬೇಕು ॥

ಆಪೋಹಿಷ್ಠೇತ್ಯಸ್ಯ ಸಿಂಧುದ್ವೀಪ ಆಪೋಗಾಯತ್ರೀ ।

ಆಪೋಹಿಷ್ಠಾ....., ಚಕ್ಷತೇ । ಚಂದನಗಂಧಃ । ಕಲ್ಹಾರ ಪುಷ್ಪಂ ।

ಆಪೋಹಿಷ್ಠಾ....., ಎಂಬ ಮಂತ್ರಕ್ಕೆ, ಹೇಳಿರುವ ಋಷಿ, ದೇವತಾ, ಛಂದಸ್ಸಿನೊಂದಿಗೆ । ಚಂದನಗಂಧ ಮತ್ತು ಕಲ್ಹಾರಪುಷ್ಪ ದಿಂದ ಹೋಮಿಸಬೇಕು ॥

ತತಃ ಸ್ವಿಷ್ಟಕೃದಾದ್ಯಂ ಚ ಹೋಮಶೇಷಂ ಸಮಾಚರೇತ್ ॥

ನಂತರ ಸ್ವಿಷ್ಟಕೃದಾದಿ ಹೋಮಶೇಷವನ್ನು ಸಮಾಪ್ತಿಗೊಳಿಸಬೇಕು ॥

ಏವಂ ಹೋಮೇ ಸಮಾಪ್ತೇತು ಆಚಾರ್ಯಸ್ತುಸಮಾಹಿತಃ ।

ಸುಸಂಕಲ್ಪ್ಯ ವಿಧಾನೇನ ಕುಂಭಸ್ಥೈರ್ವಾರುಣೋದಕೈಃ ॥

ಈ ರೀತಿಯಾಗಿ ಹೋಮವನ್ನು ಆಚಾರ್ಯರು ಸಮಾಧಾನದಿಂದ ಸಮಾಪ್ತಿಗೊಳಿಸಲು । ನಂತರ ಸಂಕಲ್ಪವನ್ನುಮಾಡಿ, ವಿಧಿಯಂತೆ ಕಲಶದ ನೀರನ್ನು ವಾರುಣಸೂಕ್ತಗಳಿಂದ ಯಜಮಾನನಿಗೆ ಅಭಿಷೇಕ ಮಾಡಬೇಕು ॥

ಅಭಿಷೇಕಂ ಪ್ರಕುರ್ಯಸ್ತೇ ಸೂಕ್ತೈರ್ವಾರುಣ ಸಂಯುತೈಃ ।

ಸಮುದ್ರಜ್ಯೇಷ್ಠಾದಿಭಿರ್ಮಂತ್ರೈಃ ಆಪೋಹಿಷ್ಠಾದಿಭಿಸ್ತಥಾ ॥

ಸಮುದ್ರಜ್ಯೇಷ್ಠಾ....., ಆಪೋಹಿಷ್ಠಾ....., ದ್ಯೌಶ್ಶಾಂತಾ....., ಇತ್ಯಾದಿ ಮಂತ್ರಗಳಿಂದ ಯಜಮಾನನಿಗೆ ಅಭಿಷೇಕ ಮಾಡಬೇಕು ॥

ದ್ಯೌಶ್ಶಾಂತೇತ್ಯಾದಿಭಿರ್ಮಂತ್ರೈಃ ಅಭಿಷೇಕಂ ಸಮಾಚರೇತ್ ।

ಅಭಿಷೇಕ ಸಮಾಪ್ತೌ ತು ಯಜಮಾನಸ್ಸಮಾಹಿತಃ ॥

ನಂತರ ಅಭಿಷೇಕವಾದಮೇಲೆ, ಯಜಮಾನನು ॥

ಶುಕ್ಲಾಂಬರಾಣಿ ಧೃತ್ವಾऽಥ ಕುರ್ಯಾದಾಜ್ಯಾವಲೋಕನಮ್ ।

ದೇವಸ್ಯ ಪುರತಸ್ಥಿತ್ವಾ ಧೂಪದೀಪ ನಿವೇದನಂ ॥

ಒಳ್ಳೆಯ ಬಿಳಿಯ ಬಟ್ಟೆಯನ್ನುಟ್ಟು, ಯಜಮಾನನು ತುಪ್ಪದಲ್ಲಿ ತನ್ನಮುಖವನ್ನು ನೋಡಿಕೊಳ್ಳಬೇಕು । ನಂತರ ದೇವತೆಯ ಮುಂದೆ ಧೂಪದೀಪಾದಿಗಳನ್ನು ಮಾಡಬೇಕು ॥

ದತ್ತ್ವಾ ಚ ಆಚಮನಂ ಸಮ್ಯಕ್ ತಾಂಬೂಲಾಂತಂ ತಥೈವ ಚ ।

ನಮಸ್ತೇऽಸ್ತು ಸುರಾಚಾರ್ಯ ನಮಸ್ತುಭ್ಯಂ ಬೃಹಸ್ಪತೇ ॥

ಆಚಮನವನ್ನು ಕೊಟ್ಟು, ಹಾಗೆಯೇ ತಾಂಬೂಲಾಂತವಾಗಿ ಕೊಟ್ಟು । ದೇವತೆಗಳ ಆಚಾರ್ಯನಾದ ಎಲ್ಲೈ ಬೃಹಸ್ಪತಿಯೇ ನಿನಗೆ ಅನೇಕ ನಮಸ್ಕಾರಗಳಿರಲಿ ॥

ಗೃಹಾಣಾರ್ಘ್ಯಂ ಮಯಾ ದತ್ತಂ ಗಂಡದೋಷ ಪ್ರಶಾಂತಯೇ ।

ನಮಸ್ತೇऽಸ್ತು ಜಲಾಧೀಶ ನಮಸ್ತುಭ್ಯಂ ಪ್ರಚೇತಸ ॥

ನನ್ನಿಂದ ಕೊಡಲ್ಪಟ್ಟಂತಹ ಅರ್ಘ್ಯವನ್ನು ಸ್ವೀಕರಿಸಿ, ಗಂಡದೋಷವನ್ನು ಪರಿಹರಿಸು । ನೀರಿನ ಅಧಿದೇವತೆಯಾದ ಎಲ್ಲೈ ಪ್ರಚೇತಸನೇ ನಿನಗೆ ನಮನವು ॥

ಗೃಹಾಣಾರ್ಘ್ಯಂ ಮಯಾ ದತ್ತಂ ಗಂಡದೋಷ ಪ್ರಶಾಂತಯೇ ।

ಆಚಾರ್ಯೇಣ ಋತ್ವಿಗಾದ್ಯೈಶ್ಚ ಕಾರಿತಂ ಯತ್ಫಲಂ ಶುಭಮ್ ॥

ಅರ್ಘ್ಯವನ್ನು ಸ್ವೀಕರಿಸಿ ದೋಷವನ್ನು ಪರಿಹರಿಸು । ಆಚಾರ್ಯನು, ಋತ್ವಿಜರಿಂದ ಮಾಡಿಸಿದ ಯಾವ ಶುಭಕರ್ಮದ ಶುಭಫಲವಿದೆಯೋ ॥

ಲಬ್ಧ್ವಾತು ತತ್ಫಲಂ ತತ್ರ ಇಜ್ಯಾಯ ಚ ಸಮರ್ಪಯೇತ್ ।

ಆಚಾರ್ಯಾಯ ಚ ಗಾಂ ದದ್ಯಾತ್ ಸುಶೀಲಾಂ ಚ ಪಯಸ್ವಿನೀಮ್ ॥

ನೀನು ಆ ಫಲವನ್ನು ಪಡೆದುಕೊಂಡು, ಯಜ್ಞಮಾಡುವವರಿಗೆ, ಆ ಫಲವನ್ನು ಸಮರ್ಪಿಸು । ಆಚಾರ್ಯರಿಗೆ ದಕ್ಷಿಣಾರೂಪದಲ್ಲಿ ಒಳ್ಳೆಯ ತಳಿಯಲ್ಲಿ ಹುಟ್ಟಿದ ಹಾಲುಕೊಡುವ ಗೋವನ್ನು ಕೊಡಬೇಕು ॥

ಶ್ವೇತವರ್ಣಾಂ ವಸ್ತ್ರಯುತಾಂ ಗಂಧಮಾಲ್ಯೈರ್ವಿಭೂಷಿತಾಂ ।

ಪಿತೃಗಂಡೇ ವಿಶೇಷೇಣ ದಕ್ಷಿಣಾಭಿಶ್ಚ ಸಂಯುತಾಮ್ ॥

ಆ ಹಸುವು ಬಿಳಿಯ ಬಣ್ಣದಿಂದ ಕೂಡಿರಬೇಕು, ಅದನ್ನು ವಸ್ತ್ರಸಹಿತವಾಗಿ ಹಾಗೂ ಗಂಧ, ಹೂಗಳಿಂದ ಅಲಂಕರಿಸಿ ಆಚಾರ್ಯರಿಗೆ ಕೊಡಬೇಕು । ತಂದೆಗೆ ಆಪತ್ತುಬರುವ ದೋಷವಿದ್ದಾಗ, ವಿಶೇಷವಾಗಿ ದಕ್ಷಿಣಾಸಹಿತವಾಗಿ ಹಸುವನ್ನು ಕೊಡಬೇಕು ॥

ಗಂಡೇಽನ್ಯತ್ರ ಪ್ರಕುರ್ವೀತ ಸ್ವರ್ಣದಾನಂ ಸ್ವಶಕ್ತಿತಃ ।

ಅನ್ಯೇಷಾಂ ಬ್ರಾಹ್ಮಣಾನಾಂ ಚ ಜಾಪಕಾನಾಂ ತಥೈವ ಚ ॥

ಬೇರೇ ದೋಷಗಳಿದ್ದಾಗ, ಸುವರ್ಣದಾನವನ್ನು ತನ್ನ ಶಕ್ತಿಗನುಗುಣವಾಗಿ ಮಾಡಬೇಕು । ಬೇರೆ ಬ್ರಾಹ್ಮಣರಿಗೆ ಹಾಗೂ ಋತ್ವಿಜರಿಗೆ ॥

ಯಥಾಶಕ್ತಿ ಪ್ರದಾತವ್ಯಂ ವಿತ್ತಶಾಠ್ಯಂ ನ ಕಾರಯೇತ್ ।

ವಸ್ತ್ರದಾನಂ ಧಾನ್ಯದಾನಂ ಸ್ವರ್ಣದಾನಂ ತಥೈವ ಚ ॥

ತನ್ನಶಕ್ತಿಗನುಗುಣವಾಗಿ, ದಕ್ಷಿಣೆಯನ್ನು ಕೊಡಬೇಕು ಜಿಪುಣತನವನ್ನು ಮಾಡಬಾರದು । ವಸ್ತ್ರ – ಧಾನ್ಯ – ಚಿನ್ನದ ದಾನಗಳನ್ನು ॥

ಅಯಃಪಿಂಡಂ ಚ ಕಾರ್ಪಾಸಂ ದಶದಾನಾನಿ ಕಾರಯೇತ್ ।

ದೇವೇಂದ್ರಾದ್ಯೈಸ್ಸದಾ ನಮ್ರೈಃ ಪೂಜಿತಸ್ತ್ವಂ ಬೃಹಸ್ಪತೇ ॥

ಹಾಗೂ ಕಬ್ಬಿಣ – ಹತ್ತಿ – ದಶದಾನಾದಿಗಳನ್ನು ಮಾಡಬೇಕು । ವಿನೀತರಾದ ದೇವೇಂದ್ರಾದಿಗಳಿಂದ ಪೂಜಿಸಲ್ಪಟ್ಟ ಎಲ್ಲೆ ದೇವಗುರುವೇ ॥

ದಾನೇನಾನೇನ ದೇವೇಜ್ಯ ಗಂಡದೋಷಂ ವಿನಾಶಯ ।

ಇತಿ ಬೃಹಸ್ಪತಿ ಪ್ರತಿಮಾದಾನಂ ॥

ಈ ದಾನಗಳಿಂದ ದೇವತೆಗಳ ಪುರೋಹಿತನೇ, ಗಂಡದೋಷವನ್ನು ಪರಿಹರಿಸು। ಹೀಗೆ ಪ್ರಾರ್ಥಿಸಿ ಬೃಹಸ್ಪತಿಯ ಪ್ರತಿಮೆಯನ್ನು ದಾನ ಕೊಡಬೇಕು ॥

ಜಲಾಧೀಶ ನಮಸ್ತುಭ್ಯಂ ಪೂಜಿತೋ ನಕ್ರವಾಹನ ।

ದಾನೇನಾನೇನ ತುಷ್ಟಸ್ತ್ವಂ ಗಂಡದೋಷಂ ವಿನಾಶಯ ॥

ಮೊಸಳೆಯನ್ನು ವಾಹನವಾಗಿ ಉಳ್ಳ ಜಲಾಧಿದೇವನಾದ ವರುಣದೇವನೇ । ಈ ದಾನದಿಂದ ಸಂತುಷ್ಟನಾಗಿ ಗಂಡದೋಷವನ್ನು ಪರಿಹರಿಸು ॥

ಇತ್ಯಬ್ದೇವತಾ ಪ್ರತಿಮಾದಾನಂ ॥

ಹೀಗೆ ವರುಣನ ಪ್ರತಿಮೆಯನ್ನು ದಾನಮಾಡಬೇಕು ॥

ಇತ್ಥಂ ಕೃತ್ವಾ ವಿಧಾನೇನ ಕುರ್ಯಾತ್ ಬ್ರಾಹ್ಮಣ ಭೋಜನಂ ।

ಗಂಡದೋಷಂ ವಿನಿರ್ಜಿತ್ಯ ಸ ಆಯುಷ್ಮಾನ್ ಭವೇನ್ನರಃ ॥

ಈ ವಿಧಾನದಿಂದ, ಶಾಂತಿಯನ್ನು ಮಾಡಿ ನಂತರ ಬ್ರಾಹ್ಮಣ ಭೋಜನವನ್ನು ಮಾಡಿಸಿದರೆ । ಗಂಡದೋಷ ಪರಿಹಾರವಾಗಿ ಆಯುಷ್ಮಂತನಾಗುತ್ತಾನೆ ॥

ಇತ್ಯುಕ್ತಂ ವೃದ್ಧಗಾರ್ಗ್ಯೇಣ ಶೌನಕಾಯ ಮಹಾತ್ಮನೇ ।

ತಿಷ್ಯ ತೋಯರ್ಕ್ಷ ಸಂಭೂತ ಗಂಡದೋಷ ಪ್ರಶಾಂತಿಕಮ್ ॥

ಈ ರೀತಿಯಾಗಿ ಶೌನಕರಿಗೆ, ವೃದ್ಧಗಾರ್ಗ್ಯರು ಹೇಳಿದರು । ಪುಷ್ಯ – ಪೂರ್ವಾಷಾಢ ನಕ್ಷತ್ರಗಳಲ್ಲಿ ಜನಿಸಿದವನಿಗೆ ಗಂಡದೋಷಶಾಂತಿಯನ್ನು ಹೇಳಿದೆ ॥

ಅಜ್ಞಾನಾತ್ ಜ್ಞಾನತೋವಾऽಪಿ ವೈಕ್ಲವ್ಯಾಚ್ಛಂದತಸ್ತಥಾ ।

ಯನ್ಯೂನಮತಿರಿಕ್ತಂ ವಾ ತತ್ಸರ್ವಂ ಕ್ಷಂತುಮರ್ಹಸಿ ॥

ಜ್ಞಾನ, ಅಜ್ಞಾನಗಳಿಂದ ಯಾವ ಮಂತ್ರಲೋಪ, ಕ್ರಿಯಾಲೋಪಗಳನ್ನು । ಹಾಗೂ ಕರ್ಮವನ್ನು ಪೆಚ್ಚು, ಕಡಿಮೆ ಮಾಡಿದ್ದರೆ, ಅವೆಲ್ಲವನ್ನೂ ಕ್ಷಮಿಸಲು ಅರ್ಜನಾಗಿದ್ದೀನೆ ॥

॥ ಇತಿ ವೃದ್ಧಗಾರ್ಗ್ಯೋಕ್ತ ಪುಷ್ಯ ಪೂರ್ವಾಷಾಢಾ ನಕ್ಷತ್ರ ಜನನಶಾಂತಿಃ ॥

* ಈ ಶಾಂತಿಯಲ್ಲಿ ವಿಶೇಷವಾಗಿ ಬೇಕಾದ ವಸ್ತುಗಳು ಮತ್ತು ಮಂತ್ರಗಳು –

* ಚಿನ್ನದ ಬೃಹಸ್ಪತಿ ಪ್ರತಿಮೆ, ಛತ್ರ, ಅಕ್ಕಿ, ಕಮಲದ ಹೂ, ಹಳದಿವಸ್ತ್ರ, ೪ ಕಲಶಗಳು, ದಿಕ್ಪಾಲಕರ ಪ್ರತಿಮೆ, ವಸ್ತ್ರ, ಪಂಚಗವ್ಯ, ರತ್ನ, ೭ ವಿಧ ಮಣ್ಣು, ಓಷಧಿವನಸ್ಪತಿ, ದರ್ಭೆ, ದೂರ್ವೆ, ಅರಳಿಸಮಿತ್ತು, ತುಪ್ಪ, ಪಾಯಸಾ, ಎಳ್ಳು, ಬ್ರಹ್ಮವೃಕ್ಷಸಮಿತ್ತು, ಚರು, ಚಂದನಗಂಧ, ಕಲ್ಹಾರಪುಷ್ಪ, ಯಜಮಾನ ಉಡಲು ಬಿಳಿವಸ್ತ್ರ, ಬಿಳಿಬಣ್ಣದ ಹಸು, ದಶದಾನ.

* ಬೃಹಸ್ಪತೇ.., ಪಂಚಗವ್ಯ.., ವರುಣ.., ಆನೋಭದ್ರಾ.., ಭದ್ರಾ ಅಗ್ನೇ.., ಪುರುಷಸೂಕ್ತ.., ಕದ್ರುದ್ರಾಯ.., ಇಂದ್ರಮಂತ್ರ.., ವ್ಯಾಹೃತಿಮಂತ್ರ.., ಬೃಹಸ್ಪತೇ ಪರಿದೀಯ.., ಮಾರ್ಜನೆಮಂತ್ರಗಳು... ॥

****

೯. ಸದಂತ ಜನನಶಾಂತಿಃ

ಅಥ ಪದ್ಮಪುರಾಣೇ, ವಿಷ್ಣುಧರ್ಮೋತ್ತರ ಖಂಡೇ ಪರಶುರಾಮಂ ಪ್ರತ್ಯಾಹ ಪುಷ್ಕರಃ

ದಂತಜನ್ಮನಿಬಾಲಾನಾಂ ಲಕ್ಷಣಂ ತನ್ನಿಬೋಧ ಮೇ ।

ಉಪರಿ ಪ್ರಥಮಂ ಯಸ್ಯ ಜಾಯತೇ ಚ ಶಿಶೋರ್ದ್ವಿಜಾಃ ॥

ಯಾವ ಶಿಶುವಿನ ಜನನಕಾಲದಲ್ಲೇ ಅದರ ಬಾಯಿಯ ಮೇಲುಸಾಲಲ್ಲಿ ಹಲ್ಲುಗಳು ಇದ್ದರೆ । ಅಂತಹ ಶಿಶುವಿನ ಲಕ್ಷಣವನ್ನು ನನಗೆ ತಿಳಿಸು ।

(ದ್ವಿಜಾಃ ದಂತಾಃ)

(ದ್ವಿಜ ಎಂಬ ಶಬ್ದಕ್ಕೆ ಹಲ್ಲು ಎಂದರ್ಥ)

ದಂತೈರ್ವಾ ಸಹ ಯಸ್ಯಸ್ಯಾತ್ ಜನ್ಮ ಭಾರ್ಗವಸತ್ತಮ ।

ಮಾತರಂ ಪಿತರಂ ವಾऽಥ ಖಾದೇದಾತ್ಮಾನಮೇವ ವಾ ॥

ಹಲ್ಲುಗಳೊಡನೆ ಹುಟ್ಟಿದರೆ, ಅಂತಹ ಮಕ್ಕಳು । ತಾಯಿಗೆ, ತಂದೆಗೆ, ಅಥವಾ ಶಿಶುವಿಗೇ ಅರಿಷ್ಟವಾಗಬಹುದು ॥

ತತ್ರ ಶಾಂತಿಂ ಪ್ರವಕ್ಷ್ಯಾಮಿ ತನ್ಮೇ ನಿಗದತಶ್ಶೃಣು ।

ಗಜಪೃಷ್ಠಗತಂ ಬಾಲಂ ತೈಸ್ತಥಾ ಸ್ಥಾಪಯೇದ್ದ್ವಿಜಃ ॥

ಈ ದೋಷದ ಪರಿಹಾರಕ್ಕಾಗಿ ಶಾಂತಿ ಹೇಳುತ್ತೇವೆ । ಮೊದಲಿಗೆ ಆನೆಯ ಹಿಂಬದಿಯ ಕೂದಲನ್ನು ಆ ಹಲ್ಲುಗಳಿಗೆ ಬ್ರಾಹ್ಮಣರು ಕಟ್ಟಬೇಕು ॥

ತದಭಾವೇ ತು ಧರ್ಮಜ್ಞ ಕಾಂಚನೇನತು ವರಾಸನೇ ।

(ತದಭಾವೇ, ಗಜಾಭಾವೇ)

ಸರ್ವೌಷಧೈಃ ಸರ್ವಗಂಧೈಃ ಬೀಜೈಃ ಪುಷ್ಪೈಃ ಫಲೈಸ್ತಥಾ ॥

ಆನೆಯ ಕೂದಲು ಸಿಗದಿದ್ದಲ್ಲಿ, ಚಿನ್ನವ ಆಸನವಲ್ಲಿ ಮಗುವನ್ನು ಕೂರಿಸಬೇಕು । ನಂತರ ಓಷಧಿಗಳಿಂದ, ಧಾನ್ಯಗಳಿಂದ, ಗಂಧಗಳಿಂದ, ಹಣ್ಣುಗಳಿಂದ ॥

ಪಂಚಗವ್ಯೇನ ರತ್ನೈಶ್ಚ ಮೃತ್ತಿಕಾಭಿಶ್ಚ ಭಾರ್ಗವಃ ।

ಸ್ಥಾಲೀಪಾಕೇನ ಧಾತಾರಂ ಪೂಜಯೇತ್ತದನಂತರಂ ॥

ಪಂಚಗವ್ಯಗಳಿಂದ, ರತ್ನಗಳಿಂದ, ಮೃತ್ತಿಕೆಗಳಿಂದ ಬ್ರಹ್ಮದೇವತೆಯನ್ನು ಪೂಜಿಸಿ । ಹಾಗೂ ಚರುವಿನಿಂದ ಹೋಮವನ್ನು ಮಾಡಬೇಕು ॥

ಸಪ್ತಾಹಂ ಚಾತ್ರ ಕರ್ತವ್ಯಂ ತಥಾ ಬ್ರಾಹ್ಮಣ ಭೋಜನಂ ।

ಅಷ್ಟಮೇಽಹನಿ ವಿಪ್ರಾಣಾಂ ತಥಾ ದೇಯಾ ಚ ದಕ್ಷಿಣಾ ॥

೭ ದಿನಗಳು ಬ್ರಹ್ಮಪೂಜೆಯನ್ನು ಮಾಡಿ, ಬ್ರಾಹ್ಮಣಭೋಜನವನ್ನೂ ನಡೆಸಿ । ೮ ನೇದಿನ ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಡಬೇಕು ॥

ಕಾಂಚನಂ ರಾಜತಂ ಗಾಂ ಚ ಭುವಂ ಚಾತ್ಮಾನಮೇವ ವಾ ।

ದಂತ ಜನ್ಮನಿ ಸಾಮಾನ್ಯೇ ಶೃಣುಸ್ಥಾನಮತಃ ಪರಮ್ ॥

ಹಾಗೆಯೇ ಚಿನ್ನ, ಬೆಳ್ಳಿ, ಹಸು, ಭೂಮಿ, ಅಥವಾ ತನ್ನನ್ನೇ ಯಥಾಶಕ್ತಿಯಾಗಿ ದಾನ ಕೊಡಬಹುದು । ???

ಭದ್ರಾಸನೇ ನಿವೇಶ್ಯೈನಂ ಮೂರ್ಧ್ನಿ ಮೂಲಫಲೈಸ್ತಥಾ ।

ಸರ್ವೌಷಧೈಃ ಸರ್ವಬೀಜೈಃ ಸರ್ವಗಂಧೈಃ ತಥೈವ ಚ ॥

ಸರಿಯಾದ, ಶುದ್ಧವಾದ ಆಸನದಲ್ಲಿ ಮಗುವನ್ನು ಕೂರಿಸಿ ತಲೆಯಮೇಲೆ ಗೆಡ್ಡೆಗೆಣಸುಗಳಿಂದ, ಹಣ್ಣುಗಳಿಂದ । ಓಷಧಿಗಳಿಂದ, ಧಾನ್ಯಗಳಿಂದ, ಗಂಧಗಳಿಂದ ॥

ಸ್ನಾಪಯೇತ್ ಪೂಜಯೇಚ್ಚಾತ್ರ ವಹ್ನಿಂ ಸೋಮಂ ಸಮೀರಣಂ ।

(ಸಮೀರಣೋ ವಾಯುಃ)

ಪರ್ವತಾಂಶ್ಚ ತಥಾ ಖ್ಯಾತಾನ್ ದೇವದೇವಂ ಚ ಕೇಶವಂ ॥

ಸ್ನಾನಮಾಡಿಸಬೇಕು, ಮತ್ತು ಅಗ್ನಿ, ಚಂದ್ರ, ವಾಯು ದೇವತೆಗಳನ್ನು ಪೂಜಿಸಬೇಕು । ಪ್ರಸಿದ್ಧಪರ್ವತಗಳನ್ನು, ವಿಷ್ಣುವನ್ನು ॥

ಏತೇಷಾಮೇವ ಜುಹುಯಾತ್ ಘೃತಮಗ್ನೌ ಯಥಾವಿಧಿಃ ।

ಬ್ರಾಹ್ಮಣಾನಾಂ ಚ ದಾತವ್ಯಾ ಯಥಾಶಕ್ತ್ಯಥ ದಕ್ಷಿಣಾ ॥

ಆಯಾ ಮಂತ್ರಗಳಿಂದ ಅಗ್ನಿಯಲ್ಲಿ ತುಪ್ಪದಿಂದ ಯಥಾಕ್ರಮವಾಗಿ ಹೋಮಿಸಬೇಕು । ನಂತರ ಬ್ರಾಹ್ಮಣರಿಗೆ ಯಥಾಶಕ್ತಿ ದಕ್ಷಿಣೆಯನ್ನು ನೀಡಬೇಕು ॥

ತತಃ ಸ್ವಲಂಕೃತಂ ಬಾಲಂ ಆಸನೇತೂಪವೇಶಯೇತ್ ।

ಪೂಜ್ಯಾಶ್ಚ ವಿಧಿನಾ ನಾರ್ಯೋ ಬ್ರಾಹ್ಮಣಾಸ್ಸುಹೃದಸ್ತಥಾ ॥

ಹಾಗೆಯೇ ಒಳ್ಳೆಯರೀತಿಯಲ್ಲಿ ಅಲಂಕರಿಸಲ್ಪಟ್ಟ ಶಿಶುವನ್ನು ಆಸನದಲ್ಲಿ ಕೂರಿಸಬೇಕು । ನಂತರ ಸ್ತ್ರೀಯರನ್ನು, ಬ್ರಾಹ್ಮಣರನ್ನು, ಬಂಧುಬಾಂಧವರನ್ನು ಯಥಾವಿಧಿಯಾಗಿ ಪೂಜಿಸಬೇಕು ॥

॥ ಇತಿ ಪದ್ಮಪುರಾಣೋಕ್ತ ಸದಂತ ಜನನಶಾಂತಿಃ ॥

* ಈ ಶಾಂತಿಯಲ್ಲಿ ವಿಶೇಷವಾಗಿ ಬೇಕಾದ ವಸ್ತುಗಳು ಮತ್ತು ಮಂತ್ರಗಳು :-

*** ಆನೆಯ ಹಿಂಭಾಗದ ಕೂದಲು, ಇದರ ಅಭಾವದಲ್ಲಿ ಚಿನ್ನ, ಓಷಧಿವನಸ್ಪತಿ, ಗಂಧ, ಧಾನ್ಯ, ಹಣ್ಣು, ಪಂಚಗವ್ಯ, ರತ್ನ, ಮೃತ್ತಿಕೆ, ಚಿನ್ನ, ಬೆಳ್ಳಿ, ಹಸು, ಭೂಮಿ, ತುಪ್ಪ, ಚರು.**

*** ೭ ದಿನ ಬ್ರಹ್ಮದೇವತೆಯ ಪೂಜೆ ಮತ್ತು ಬ್ರಾಹ್ಮಣ ಭೋಜನ, ೮ ನೇ ದಿನ ಅಗ್ನಿ, ಚಂದ್ರ, ವಾಯು, ಪ್ರಸಿದ್ಧಪರ್ವತಗಳ, ವಿಷ್ಣುವಿನ, ಪೂಜೆ–ಹೋಮ, ದಾನ, ದಕ್ಷಿಣೆ, ಭೋಜನ.**

****

೧೦. ನಾಳವೇಷ್ಟನ ಶಾಂತಿಃ

ಅಥ ಶೌನಕಃ

ಅಥಾತಸ್ಸಂಪ್ರವಕ್ಷ್ಯಾಮಿ ಶೌನಕೋಕ್ತ ವಿಧಾನತಃ ।

ಶಶೋರ್ಜನನ ಕಾಲೇ ತು ನಾಳಂ ಕಂಠೇ ಪ್ರಸರ್ಜಯೇತ್ ॥

ಈಗ ಶೌನಕರು ಹೇಳಿದ ರೀತಿಯಲ್ಲಿ ಶಾಂತಿಗಳನ್ನು ಹೇಳುತ್ತೇವೆ । ಶಿಶುವಿನ ಜನನ ಕಾಲದಲ್ಲಿ ನಾಳವು ಕಂಠದಲ್ಲಿ ಸುತ್ತಿಕೊಂಡಿದ್ದರೆ ॥

ಪಿತರಂ ಹಂತಿ ಷಾಣ್ಮಾಸೇ ಮಾತರಂ ಹಂತಿ ವತ್ಸರೇ ।

ಕರಜಾನು ಪ್ರಸಕ್ತೇ ತು ಪಶುಧಾನ್ಯಾದಿ ಸಂಪದಃ ॥

ತಂದೆಗೆ ೬ ತಿಂಗಳಲ್ಲಿ ಅನಿಷ್ಟವು, ತಾಯಿಗೆ ವರ್ಷದಲ್ಲಿ ಅನಿಷ್ಟವಾಗುತ್ತದೆ । ಕೈ, ಕಾಲುಗಳಿಗೆ ಸುತ್ತಿಕೊಂಡಿದ್ದರೆ, ಪಶು, ಧಾನ್ಯ ಸಂಪತ್ತುಗಳಿಗೆ ಹಾನಿಯಾಗುತ್ತದೆ ॥

ಸರ್ವಂ ಹಂತಿ ವಿಶೇಷೇಣ ಅಥಶ್ಶಾಂತಿಂ ಪ್ರಕಲ್ಪಯೇತ್ ।

ಗೋಪೂಜಾಂ ಪ್ರಥಮಂ ಕೃತ್ವಾ ನಾಂದೀಶ್ರಾದ್ಧಂ ಚ ಕಾರಯೇತ್ ॥

ಆದ್ದರಿಂದ ನಾಳವು ಸುತ್ತಿಕೊಂಡರೆ, ಎಲ್ಲಾ ರೀತಿಯಿಂದಲೂ ಹಾನಿಯಾಗುತ್ತದೆಯಾವ್ದರಿಂದ ಶಾಂತಿಯನ್ನು ಮಾಡಬೇಕು । ಗೋಪೂಜೆಯನ್ನು ಮಾಡಿ, ನಾಂದಿಯನ್ನೂ ಮಾಡಬೇಕು ॥

ಸ್ವಗೃಹ್ಯೋಕ್ತ ವಿಧಾನೇನ ಕುರ್ಯಾದಗ್ನಿಮುಖಂ ತತಃ ।

ಆಚಾರ್ಯವರಣಂ ಕೃತ್ವಾ ಋತ್ವಿಜಶ್ಚ ತತಃ ಪರಂ ॥

ತನ್ನ ಗೃಹ್ಯಸೂತ್ರ ಹೇಳಿದ ವಿಧಾನದಿಂದ ಅಗ್ನಿಮುಖವನ್ನು ಮಾಡಬೇಕು । ಆಚಾರ್ಯರ ವರಣವನ್ನು ಮಾಡಿ, ಋತ್ವಿಜರ ವರಣೆಯನ್ನು ಮಾಡಬೇಕು ॥

ಕಲಶಾನರ್ಚಯೇತ್ ಸದ್ಯಸ್ಸಾಧಿಪ್ರತ್ಯಧಿ ದೇವತಾಃ ।

ತ್ರ್ಯಂಬಕೇಣ ಮಂತ್ರೇಣ ಮೃತ್ಯುಂಜಯಮಥಾರ್ಚಯೇತ್ ॥

ಅಧಿದೇವತಾ ಪ್ರತ್ಯಧಿದೇವತಾ ಸಹಿತವಾಗಿ ಕಲಶಗಳಿಗೆ ಪೂಜೆಯನ್ನು ಮಾಡಬೇಕು । ತ್ರ್ಯಂಬಕ ಮಂತ್ರದಿಂದ ಮೃತ್ಯುಂಜಯನನ್ನು ಪೂಜಿಸಬೇಕು ॥

ಇಂದ್ರಂ ವ ಇತಿ ಮಂತ್ರೇಣ ಅರ್ಚಯೇದದಿದೇವತಾಂ ।

ಇಮಂ ಯಮೇತಿ ಮಂತ್ರೇಣ ಯಮಂ ಪ್ರತ್ಯಧಿದೇವತಾಂ ॥

ಇಂದ್ರಂ ವಃ... ಎಂಬ ಮಂತ್ರದಿಂದ ಅಧಿದೇವತೆಯನ್ನು ಅರ್ಚನೆಮಾಡಬೇಕು । ಇಮಂ ಯಮ... ಎಂಬ ಮಂತ್ರದಿಂದ ಯಮಪ್ರತ್ಯಧಿದೇವತೆಯನ್ನು ಪೂಜಿಸಬೇಕು ॥

ಪ್ರತಿಮಾಃ ಕಾರಯೇತ್ತತ್ರ ಸುವರ್ಣೇನ ಯಥಾಕ್ರಮಂ ।

ಪಂಚಾಮೃತೈಃ ಪಂಚಗವ್ಯೈಃ ಪಂಚತ್ವಕ್ ಪಂಚಪಲ್ಲವೈಃ ॥

ಚಿನ್ನದಿಂದ ಯಥಾಕ್ರಮವಾಗಿ ಪ್ರತಿಮೆಯನ್ನು ಮಾಡಿಸಬೇಕು । ಪಂಚಾಮೃತ, ಪಂಚಗವ್ಯಗಳಿಂದ, ಪಂಚತ್ವಕ್, ಪಂಚಪಲ್ಲವಗಳಿಂದ ॥

ಷೋಡಶೈರುಪಚಾರೈಶ್ಚ ತತೋ ಹೋಮಂ ಸಮಾಚರೇತ್ ।

ಪಾಲಾಶಾಜ್ಯ ಚರೂನ್ ಹುತ್ವಾ ತತ್ತನ್ಮಂತ್ರೈಃ ಯಥಾಕ್ರಮಮ್ ॥

ಷೋಡಶೋಪಚಾರಗಳಿಂದ ಪೂಜಿಸಿ ನಂತರ ಹೋಮವನ್ನು ಮಾಡಬೇಕು । ಮುತ್ತುಗ – ಆಜ್ಯ – ಚರು ಈ ಹವಿಸ್ಸುಗಳಿಂದ, ಮೇಲೆಹೇಳಿದ ಆಯಾಯಾ ದೇವತೆಗಳ ಮಂತ್ರದಿಂದ ಕ್ರಮವಾಗಿ ಹೋಮಿಸಬೇಕು ॥

ಮುಂಚಾಮಿತ್ವೇತಿ ಮಂತ್ರೇಣ ಗುಳೂಚೀಂ ಹಾವಯೇತ್ತತಃ ।

ಅಷ್ಟೋತ್ತರಶತಂ ವಾಽಪಿ ಅಷ್ಟಾವಿಂಶತಿ ವಾ ಪುನಃ ॥

ಮುಂಚಾಮಿತ್ವಾ... ಎಂಬ ಮಂತ್ರದಿಂದ ಗುಳೂಚಿ ಸಮಿತ್ತಿನಿಂದ ಹೋಮಿಸಬೇಕು । ೧೦೮ ಅಥವಾ ೨೮ ಸಲ ಹೋಮಿಸಬೇಕು ॥

ವ್ಯಾಹೃತ್ಯಾ ತಿಲಹೋಮಂ ಚ ಕಾರಯೇತ್ತು ವಿಚಕ್ಷಣಃ ।

ತತಸ್ಸ್ವಿಷ್ಟಕೃತಂ ಹುತ್ವಾ ಹೋಮಶೇಷಂ ಸಮಾಪಯೇತ್ ॥

ವ್ಯಾಹೃತಿಹೋಮ, ತಿಲಹೋಮಗಳನ್ನು ಮಾಡಬೇಕು । ನಂತರ ಸ್ವಿಷ್ಟಕೃತ್ ಹೋಮವನ್ನು ಮಾಡಿ ಹೋಮಶೇಷವನ್ನು ಸಮಾಪ್ತಿಗೊಳಿಸಬೇಕು ॥

ಅಭಿಷೇಕಂ ತತಃ ಕುರ್ಯಾತ್ ಅಬ್ಲಿಂಗ್ಯೈಃ ಪಾವಮಾನಿಭಿಃ ।

ಅಭಿಷೇಕಾಪ್ಲುತಂ ವಸ್ತ್ರಂ ಆಚಾರ್ಯಾಯ ನಿವೇದಯೇತ್ ॥

ನಂತರ ಹಿರಣ್ಯವರ್ಣಾ, ಪವಮಾನ ಮತ್ತು ಅಬ್ದೈಂಗ ಮಂತ್ರಗಳಿಂದ ಯಜಮಾನನಿಗೆ ಕಲಶಗಳ ತೀರ್ಥದಿಂದ ಅಭಿಷೇಕಮಾಡಿ । ಅಭಿಷೇಕದಿಂದ ಒದ್ದೆಯಾದ ಬಟ್ಟೆಗಳನ್ನು ಆಚಾರ್ಯರಿಗೆ ಕೊಡಬೇಕು ॥

ಆಚಾರ್ಯಪೂಜನಂ ಕೃತ್ವಾ ಋತ್ವಿಜಶ್ಚ ತತಃ ಪರಂ ।

ದಾನಾನಿ ಚ ತತೋ ದದ್ಯಾತ್ ಯಥಾ ವಿತ್ತಾನುಸಾರತಃ ॥

ನಂತರ ಆಚಾರ್ಯಪೂಜೆ, ಋತ್ವಿಜರ ಪೂಜೆಯನ್ನು ಮಾಡಿ । ತನ್ನ ಆರ್ಥಿಕಸ್ಥಿತಿಗೆ ತಕ್ಕಂತೆ ದಾನಗಳನ್ನು ಕೊಡಬೇಕು ।

ಬ್ರಾಹ್ಮಣಾನ್ ಭೋಜಯೇತ್ಪಶ್ಚಾತ್ ಸ್ವಯಂ ಭುಂಜೀತ ಬಂಧುಭಿಃ ।

ಏವಂ ಯಃ ಕುರುತೇ ಶಾಂತಿಂ ಸರ್ವಾರಿಷ್ಟಂ ವಿನಶ್ಯತಿ ॥

ನಂತರ ಬ್ರಾಹ್ಮಣಭೋಜನ ಮಾಡಿಸಿ, ಬಂಧುಗಳ ಜೊತೆ ತಾನು ಊಟಮಾಡಬೇಕು । ಈ ರೀತಿಯಾಗಿ ಯಾರು ಶಾಂತಿಯನ್ನು ಮಾಡಿಕೊಳ್ಳುತ್ತಾನೋ, ಅವನ ಎಲ್ಲಾ ಅನಿಷ್ಟಗಳೂ ನಾಶವಾಗುತ್ತವೆ ॥

ಮಾತಾ ಪಿತ್ರೋಶ್ಶಿಶೋಶ್ಚೈವ ಸರ್ವಸಂಪದ್ಭವಿಷ್ಯತಿ ।

ತಂದೆ,ತಾಯಿ ಮತ್ತು ಶಿಶುವಿಗೆ ಎಲ್ಲಾ ಸಂಪತ್ತುಗಳೂ ಉಂಟಾಗುತ್ತವೆ ।

॥ ಇತಿ ಶೌನಕೋಕ್ತ ನಾಳವೇಷ್ಟನ ಶಾಂತಿಃ ॥

* ಈ ಶಾಂತಿಯಲ್ಲಿ ವಿಶೇಷವಾಗಿ ಬೇಕಾದ ವಸ್ತುಗಳು ಮತ್ತು ಮಂತ್ರಗಳು –

*** ಹಸು, ಚಿನ್ನದ ಮೃತ್ಯುಂಜಯನ ಪ್ರತಿಮೆ, ಪಂಚಾಮೃತ, ಪಂಚಗವ್ಯ, ಎಲೆ ಚಿಗುರು, ತೊಗಟೆ, ಮುತ್ತುಗಸಮಿತ್ತು, ತುಪ್ಪ, ಚರು, ಎಳ್ಳು, ದಕ್ಷಿಣೆ, ದಾನಗಳು, ಅನ್ನದಾನ.**

*** ಗೋಪೂಜೆ, ನಾಂದೀ, ತ್ರ್ಯಂಬಕಮಂತ್ರ, ಇಂದ್ರಂ ವಃ ಮಂತ್ರ, ಇಮಂ ಯಮ ಮಂತ್ರ, ಮುಂಚಾಮಿತ್ವಾ, ವ್ಯಾಹೃತಿ, ಹಿರಣ್ಯವರ್ಣಾ ಮಂತ್ರ, ಪವಮಾನಮಂತ್ರ, ಅಬ್ದೇವತಾಮಂತ್ರ.**

****

೧೧. ಪಂಚಮಾರಿಷ್ಟ ಜನನಶಾಂತಿಃ

ಅಥ ಮನುಃ

ಜಾತಸ್ಯ ಪಂಚಮೇ ಲಗ್ನೇ ಸೂರ್ಯಾದಿ ಗ್ರಹ ಸಂಸ್ಥಿತೇ ।

ಪಿತ್ರಾದೀನಾಮರಿಷ್ಟಂ ತು ಕುರ್ವಂತಿ ಚ ಯಥಾಕ್ರಮಮ್ ॥

ಹುಟ್ಟಿದಂತಹ ಮನುಷ್ಯನ ಲಗ್ನದಿಂದ ೫ ನೇ ಸ್ಥಾನದಲ್ಲಿ ಸೂರ್ಯ ಮುಂತಾದ ಗ್ರಹಗಳಿದ್ದರೆ । ತಂದೆ ಮುಂತಾದವರಿಗೆ ಯಥಾಕ್ರಮವಾಗಿ ಅನಿಷ್ಟಸೂಚಕವಾಗುತ್ತದೆ ॥

ರವಿಶ್ಚ ಪಿತರಂ ಹಂತಿ ಮಾತರಂ ಚ ಶಶೀ ತಥಾ ।

ಭ್ರಾತರಂ ಭೂಮಿ ಪುತ್ರಸ್ತು ಮಾತುಳಂ ಚಂದ್ರಜಸ್ತಥಾ ॥

ರವಿಯು ತಂದೆಗೆ ಅನಿಷ್ಟವು, ಚಂದ್ರನು ತಂದೆ । ಮಂಗಳನು ಅಣ್ಣತಮ್ಮಂದಿರಿಗೆ, ಬುಧನು ಮಾವಂದಿರಿಗೆ ॥

ಗುರುರ್ಮಾತಾಮಹಂ ತದ್ವತ್ ಭೃಗುಸ್ತದ್ವತ್ ಪಿತಾಮಹಂ ।

ಶನೀ ರಾಹುಶ್ಶಿಶುಂ ಹಂತಿ ಶಿಖೀ ಭ್ರಾತರಮೇವ ಚ ॥

ಗುರುವು ತಾಯಿಯ ತಂದೆಗೆ, ಶುಕ್ರನು ತಂದೆಯ ತಂದೆಗೆ । ಶನಿ ಮತ್ತು ರಾಹುಗಳು ಹುಟ್ಟಿದ ಶಿಶುವಿಗೇ, ಹಾಗೂ ಕೇತುವು ಅಣ್ಣತಮ್ಮಂದಿರಿಗೆ ಅನಿಷ್ಟವನ್ನುಂಟುಮಾಡುತ್ತಾರೆ ॥

ತದ್ದೋಷ ಪರಿಹಾರಾರ್ಥಂ ಶಾಂತಿಂ ವಕ್ಷ್ಯಾಮ್ಯಶೇಷತಃ ।

ಜಾತಸ್ಯ ದ್ವಾದಶಾಹೇ ವಾ ಜನ್ಮರ್ಕ್ಷೇ ವಾ ಶುಭೇ ದಿನೇ ॥

ಈ ದೋಷ ಪರಿಹಾರಕ್ಕೆ ಸಾಪು ಹೇಳುವಂತಹ ಶಾಂತಿಯನ್ನು ಮಾಡಬೇಕು । ಹುಟ್ಟಿದ ಮಗುವಿನ ೧೨ ನೇ ದಿನದಲ್ಲಿ ಅಥವಾ ಅವರ ಜನ್ಮನಕ್ಷತ್ರದಲ್ಲಿ ಅಥವ ಶುಭ ಮುಹೂರ್ತದಲ್ಲಿ ॥

ಸ್ವಸ್ತ್ಯಾದಿ ವಾಚನಂ ಕೃತ್ವಾ ಆಚಾರ್ಯಂ ವರಯೇತ್ತತಃ ।

ಗೃಹಸ್ಯೈಶಾನ ದಿಗ್ಭಾಗೇ ಗೋಮಯೇನೋಪಲಿಪ್ಯ ಚ ॥

ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿ, ನಂತರ ಆಚಾರ್ಯರನ್ನು ವರಿಸಬೇಕು । ಮನೆಯ ಈಶಾನ್ಯದಲ್ಲಿ ಸಗಣಿಯಿಂದ ಶುದ್ಧಗೊಳಿಸಿದ ಜಾಗದಲ್ಲಿ ॥

ವ್ರೀಹಿಂಸ್ತತ್ರ ವಿನಿಕ್ಷಿಪ್ಯ ಯಥಾ ವಿತ್ತಾನುಸಾರತಃ ।

ತಸ್ಯೋಪರಿ ನ್ಯಸೇತ್ಕುಂಭಂ ಅವ್ರಣಂ ತಂತುವೇಷ್ಟಿತಂ ॥

ತನ್ನ ಶಕ್ತಿಗೆ ಅನುಸಾರವಾಗಿ, ಭತ್ತವನ್ನು ನೆಲದಲ್ಲಿ ಹರಡಿ । ಅದರಮೇಲೆ, ದಾರದಿಂದ ಸುತ್ತಿದ ಭಗ್ನವಲ್ಲದ ಕಲಶವನ್ನು ಇಡಬೇಕು ॥

ಆಕಲಶೇಷ್ವಿತ್ಯನಯಾ ಕಲಶಸ್ಥಾಪನಂ ಭವೇತ್ ।

ಶುದ್ಧೋದಕೇನ ಸಂಪೂರ್ಯ ನದೀಮಾವಾಹಯೇತ್ತತಃ ॥

ಆಕಲಶೇಷು... ಎಂಬ ಮಂತ್ರದಿಂದ ಕಲಶಸ್ಥಾಪನೆ ಮಾಡಬೇಕು । ಶುದ್ಧವಾದ ನೀರನ್ನು ಕಲಶಕ್ಕೆ ತುಂಬಿ, ಅದರಲ್ಲಿ ಪವಿತ್ರವಾದ ನದಿಗಳನ್ನು ಆವಾಹಿಸಬೇಕು ॥

ಪಂಚಗವ್ಯಂ ಪಂಚರತ್ನಂ ಪಂಚತ್ವಕ್ ಪಂಚಪಲ್ಲವಾನ್ ।

ಸರ್ವೌಷಧೀಃ ಸರ್ವಮೃದಸ್ತತ್ತನ್ಮಂತ್ರೇಣ ನಿಕ್ಷಿಪೇತ್ ॥

ಪಂಚಗವ್ಯ, ಪಂಚರತ್ನ, ಪಂಚತ್ವಕ್, ಪಂಚಪಲ್ಲವ । ಎಲ್ಲಾ ಧಾನ್ಯಗಳನ್ನು, ಎಲ್ಲಾ ರೀತಿಯ ಮಣ್ಣನ್ನು ಆಯಾಯಾ ಮಂತ್ರಗಳಿಂದ ಕಲಶಕ್ಕೆ ಹಾಕಬೇಕು ॥

ತತ್ತದ್ವರ್ಣಮಯಂ ವಸ್ತ್ರಂ ಕುಂಭೋಪರಿ ನಿಧಾಯ ಚ ।

ಪ್ರಧಾನಸ್ಯಾರ್ಧಮಾನೇನ ಅಧಿಪ್ರತ್ಯಧಿ ದೇವತೇ ॥

ಆಯಾ ಗ್ರಹಗಳ ಪ್ರತಿನಿಧಿಯಾದ ಬಣ್ಣದ ಬಟ್ಟೆಗಳನ್ನು ಕಲಶದ ಸುತ್ತ/ಮೇಲೆ ಇಡಬೇಕು । ಪ್ರಧಾನದೇವತೆಯ ಅರ್ಧಾಳತೆಯಲ್ಲಿ, ಅಧಿ, ಪ್ರತ್ಯಧಿದೇವತೆಗಳಿಗೆ ಈ ಎಲ್ಲಾ ಧಾನ್ಯಗಳನ್ನು ಇಡಬೇಕು ॥

ಅಧಿಪ್ರತ್ಯಧಿ ದೇವೌ ಚ ದಕ್ಷಿಣೋತ್ತರ ಪಾರ್ಶ್ವಯೋಃ ।

ಗ್ರಹಾತಿಥ್ಯೋಕ್ತ ಮಾರ್ಗೇಣ ಆವಾಹನ ಪುರಸ್ಸರಂ ॥

ಅಧಿ, ಪ್ರತ್ಯಧಿದೇವತೆಗಳನ್ನು ಪ್ರಧಾನಕಲಶದ ದಕ್ಷಿಣೋತ್ತರ ಪಕ್ಕಗಳಲ್ಲಿ ಇಡಬೇಕು । ಗ್ರಹಗಳಿಗೆ ಆವಾಹನೆಯ ಪೂರ್ವಕವಾಗಿ ಯುಕ್ತಕ್ರಮದಿಂದ ಪೂಜಿಸಬೇಕು ॥

ಉಪಚಾರೈಷ್ಷೋಡಶಭಿಸ್ತತ್ತನ್ಮಂತ್ರೈರ್ಯಥಾ ವಿಧಿ ।

ಶ್ರೀಸೂಕ್ತಂ ರುದ್ರಸೂಕ್ತಂ ಚ ಗ್ರಹಮಂತ್ರಾನ್ ಸ್ಪೃಶನ್ಜಪೇತ್ ॥

ಷೋಡಶೋಪಚಾರಗಳಿಂದ, ಆಯಾಮಂತ್ರಗಳಿಂದ ಯಥಾಕ್ರಮವಾಗಿ ಪೂಜಿಸಬೇಕು । ಶ್ರೀಸೂಕ್ತ, ರುದ್ರ, ಗ್ರಹಮಂತ್ರಗಳೂ ಮುಂತಾದವುಗಳನ್ನು, ಕಲಶವನ್ನು ಮುಟ್ಟಿಕೊಂಡು ಹೇಳಬೇಕು ॥

ಅಷ್ಟೋತ್ತರಶತಂ ಕುರ್ಯಾತ್ ಅಷ್ಟಾವಿಂಶತಿ ಮೇವ ವಾ ।

ತತೋ ಹೋಮಂ ಪ್ರಕುರ್ವೀತ ಆಚಾರ್ಯೋ ಬ್ರಾಹ್ಮಣೈಸ್ಸಹ ॥

೧೦೮ ಅಥವಾ ೨೮ ಸಂಖ್ಯೆಗಳಿಂದಲೋ । ಹೋಮವನ್ನು, ಆಚಾರ್ಯರು, ಋತ್ವಿಜರೊಡಗೂಡಿ ಮಾಡಬೇಕು ॥

ಸ್ವಗೃಹ್ಯೋಕ್ತ ವಿಧಾನೇನ ಕುರ್ಯಾದಗ್ನಿಮುಖಂ ತತಃ ।

ತತ್ತತ್ಸಮಿದ್ಭಿಃ ಚರ್ವಾಜ್ಯೈಃ ಅಷ್ಟೋತ್ತರಶತಂ ಹುವೇತ್ ॥

ತನ್ನ ಗೃಹ್ಯಸೂತ್ರ ಹೇಳಿದ ರೀತಿಯಲ್ಲಿ ಅಗ್ನಿಮುಖವನ್ನು ಮಾಡಬೇಕು । ಆಯಾಯಾ ಸಮಿತ್ತು, ಚರು, ಆಜ್ಯಗಳಿಂದ ೧೦೮ ಸಂಖ್ಯೆಯಲ್ಲಿ ಹೋಮಿಸಬೇಕು ॥

ಅಷ್ಟೋತ್ತರಸಹಸ್ರಂ ವಾ ಅಷ್ಟಾವಿಂಶತಿ ಮೇವ ವಾ ।

ಹೋಮಶೇಷಂ ಸಮಾಪ್ಯಾಥ ಅಭಿಷೇಕಂ ತು ಕಾರಯೇತ್ ॥

೧೦೦೮, ೨೮ ಸಂಖ್ಯೆಗಳಲ್ಲೂ ಮಾಡಬಹುದು । ಹೋಮಪ್ರಯೋಗವನ್ನು ಸಮಾಪ್ತಿಗೊಳಿಸಿ, ಏಳುಪಿಗೆ ಕಲಶದ ತೀರ್ಥವನ್ನು ಅಭಿಷೇಕ ಮಾಡಬೇಕು ॥

ಮಾತಾಪಿತ್ರೋಶ್ಶಿಶೋಶ್ಚೈವ ಆಚಾರ್ಯೋ ಬ್ರಾಹ್ಮಣೈಸ್ಸಹ ।

ಗ್ರಹಮಂತ್ರೈಸ್ಸಮುದ್ರಾದ್ಯೈಃ ಪಾವಮಾನೀಭಿರೇವ ಚ ॥

ತಂದೆ, ತಾಯಿಗಳಿಗೆ ಮತ್ತು ಮಗುವಿಗೆ, ಆಚಾರ್ಯರು ಮತ್ತು ಋತ್ವಿಜರು । ಗ್ರಹಮಂತ್ರಗಳಿಂದ, ಆಜ್ಞೇಪತಾ ಮಂತ್ರಗಳಿಂದ ॥

ಶ್ರೀಸೂಕ್ತೇನ ಪುರಾಣೋಕ್ತೈರಭಿಷೇಕಂ ತು ಕಾರಯೇತ್ ।

ತತಶ್ಶುಕ್ಲಾಂಬರಧರಃ ಶುಕ್ಲಮಾಲ್ಯಾನು ಲೇಪನಃ ॥

ಶ್ರೀಸೂಕ್ತ, ಪುರಾಣೋಕ್ತ ಶ್ಲೋಕಗಳಿಂದ ಅಭಿಷೇಕ ಮಾಡಬೇಕು । ನಂತರ ಬಿಳಿಯ ಬಟ್ಟೆಯನ್ನುಡಿಸಿ, ಬಿಳಿಯ ಮಾಲೆಯನ್ನು ಹಾಕಿ ॥

ಆಚಾರ್ಯಂ ಪೂಜಯೇತ್ಪಶ್ಚಾತ್ ಪ್ರತಿಮಾಂ ವಸ್ತ್ರಸಂಯುತಾಂ ।

ದದ್ಯಾತ್ ಸದಕ್ಷಿಣಾಂ ಗಾಂ ಚ ಆಚಾರ್ಯಾಯ ಪ್ರದಾಪಯೇತ್ ॥

ಆಚಾರ್ಯರ ಪೂಜೆಯನ್ನು ಮಾಡಿ, ನಂತರ ಪ್ರತಿಮೆಯಿಂದ ಕೂಡಿದ ವಸ್ತ್ರವನ್ನು । ಹಸು, ದಕ್ಷಿಣೆಗಳ ಸಹಿತವಾಗಿ ಆಚಾರ್ಯರಿಗೆ ಕೊಡಬೇಕು ॥

ಋತ್ವಿಜೋಽಪಿ ಯಥಾಶಕ್ತಿ ದಕ್ಷಿಣಾಭಿಃ ಪ್ರತೋಷಯೇತ್ ।

ಬ್ರಾಹ್ಮಣಾನ್ ಭೋಜಯೇತ್ ಪಶ್ಚಾತ್ ಸ್ವಯಂ ಭುಂಜೀತ ಬಂಧುಭಿಃ ॥

ಋತ್ವಿಜರಿಗೂ ಯಥಾಶಕ್ತಿ ದಕ್ಷಿಣೆಯನ್ನು ಕೊಟ್ಟು ಸಂತೋಷಗೊಳಿಸಬೇಕು । ನಂತರ ಬ್ರಾಹ್ಮಣರ ಭೋಜನ ಮಾಡಿಸಿ, ನಂತರ ತನ್ನ ಬಂಧುಗಳ ಜೊತೆ ಊಟ ಮಾಡಬೇಕು ॥

ಏವಂ ಶಾಂತಿಂ ಪ್ರಕುರ್ವೀತ ತಸ್ಯ ದೋಷೋ ವಿನಶ್ಯತಿ ।

ಸರ್ವಾರಿಷ್ಟ ವಿನಾಶಸ್ಯಾತ್ ವೇದೋಕ್ತಾಯುರ್ಭವಿಷ್ಯತಿ ॥

ಈ ರೀತಿ ಶಾಂತಿಯನ್ನು ಮಾಡಿದರೆ, ಅವನ ದೋಷವು ಪರಿಹಾರವಾಗುತ್ತದೆ ಹಾಗೂ ಎಲ್ಲಾ ಅನಿಷ್ಟವೂ ಪರಿಹಾರವಾಗಿ ವೇದೋಕ್ತ ಆಯುಷ್ಯವು ಲಭಿಸುತ್ತದೆ ॥

॥ ಇತಿ ಮನುಪ್ರೋಕ್ತ ಪಂಚಮಾರಿಷ್ಟ ಜನನಶಾಂತಿಃ ॥

* ಈ ಶಾಂತಿಯಲ್ಲಿ ವಿಶೇಷವಾಗಿ ಬೇಕಾದ ವಸ್ತುಗಳು ಮತ್ತು ಮಂತ್ರಗಳು –

*** ಸಗಣಿ, ಛತ್ರ, ದಾರ, ಕಲಶ, ಪಂಚಗವ್ಯ, ರತ್ನ, ಓಷಧಿವನಸ್ಪತಿ, ಎಲೆಚಿಗುರು, ಧಾನ್ಯ, ಮಣ್ಣು, ಬಿಳಿವಸ್ತ್ರ, ಬಿಳಿಹೂವಿನ ಮಾಲೆ, ಆಯಾಗ್ರಹದ ಪ್ರತಿಮೆ, ಹಸು, ದಕ್ಷಿಣೆ, ದಾನ, ಅನ್ನದಾನ.**

*** ಆ ಕಲಶೇಷು, ಶ್ರೀಸೂಕ್ತ, ರುದ್ರ, ಆಯಾಗ್ರಹಗಳ ಮಂತ್ರಗಳು, ಆಯಾಗ್ರಹ ಸಮಿತ್ತು, ಚರು, ತುಪ್ಪ, ನೀರಿನ ಮಂತ್ರಗಳು, ಆಯಾಗ್ರಹದ ಪುರಾಣಶ್ಲೋಕಗಳು.**

****

2004ರಲ್ಲಿ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಸೂಚನೆಯಂತೆ ಶ್ರೀಯುತ ಶರ್ಮರನ್ನು ಬೆಂಗಳೂರಿನ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆ ವತಿಯಿಂದ 'ವೇದಭೂಷಣ' ಬಿರುದಿನೊಂದಿಗೆ ಸನ್ಮಾನಿಸುತ್ತಿರುವುದು

ಶ್ರೀಯುತ ಶರ್ಮರನ್ನು 2012ರಲ್ಲಿ ಶಿವಮೊಗ್ಗದ ವೈದಿಕ ಪರಿಷತ್ ವತಿಯಿಂದ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಬಿ.ಎನ್. ವಿ. ಸುಬ್ರಹ್ಮಣ್ಯ, ಕರ್ನಾಟಕ ರಾಜ್ಯದ ಉಪಮುಖ್ಯಮಂತ್ರಿಗಳಾದ ಶ್ರೀ ಈಶ್ವರಪ್ಪನವರು ಸನ್ಮಾನಿಸುತ್ತಿರುವುದು

ಶ್ರೀಯುತ ಶರ್ಮರನ್ನು 2012ರಲ್ಲಿ ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ದೆಹಲಿಯ 'ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆ'ಯ ವತಿಯಿಂದ ಸನ್ಮಾನಿಸುತ್ತಿರುವುದು

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು :

ವೇದಬ್ರಹ್ಮ ಶ್ರೀ ವಿ.ಸಿ. ಶಕ್ತಿಧರ ಶರ್ಮಾ

ಶ್ರೀ ಚೈತನ್ಯಗುರುನಾಥ ಪ್ರಕಾಶನ

C/o. ಶ್ರೀಮಾನ್ ಸುಬ್ರಹ್ಮಣ್ಯ ಪ್ರಸಾದ್‌ರವರು

448, "ಸಂಹಿತಾ", 4ನೇ ತಿರುವು, ರವೀಂದ್ರನಗರ,

ಶಿವಮೊಗ್ಗ, ಕರ್ನಾಟಕ

ಮೊ. 9686497982